ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 | ಸಂಚಿಕೆ 46 | ನವಂಬರ್ 18, 1990 | ರೂ.1.50

ಎ.ಐ.ಡಿ.ಡಬ್ಲ್ಯೂ.ಎ. ಮೂರನೇ ಸಮ್ಮೇಳನ

ಮತೀಯ ಸೌಹಾರ್ದತೆಯ ಸಮರಕ್ಕೆ ಪೂರ್ಣ ಬೆಂಬಲ

ಜಾತ್ಯತೀತ ಹಾಗೂ ರಾಷ್ಟ್ರೀಯ ಐಕ್ಯತೆಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕೆಂದು ಕರೆ ಕೊಟ್ಟಿರುವ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮೂರನೇ ರಾಷ್ಟ್ರೀಯ ಸಮ್ಮೇಳನವು ಎಡ ಪಕ್ಷಗಳು ಹಾಗೂ ಜನತಾದಳ ನಡೆಸುತ್ತಿರುವ ಮತೀಯ ಸೌಹಾರ್ದತೆಯ ಸಮರಕ್ಕೆ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಆವೇಶಭರಿತ ವಾತಾವರಣದಲ್ಲಿ ಶುಕ್ರವಾರ (9.11.90) ಕಲ್ಕತ್ತಾದ "ಜಯದೇವ್ ಪುರ್-ಜ್ಯೋತಿ ಭಟ್ಟಾಚಾರ್ಯ" ನಗರ ದಲ್ಲಿ ಪ್ರಾರಂಭವಾದ ಮೂರನೇ ಅಖಿಲ ಭಾರತ ಮಹಿಳಾ ಸಮ್ಮೇಳನವು ಮನ ಮೋಹಕವಾದ ವರ್ಣರಂಜಿತವಾದ ಕಾರ್ಯ ಕ್ರಮಗಳನ್ನು ನೀಡುವುದರ ಮೂಲಕ ಪ್ರತಿನಿಧಿಗಳನ್ನು ಸ್ವಾಗತಿಸಿತು.

ಇಡೀ ಕಲ್ಕತ್ತಾ ನಗರವೇ ಸಜ್ಜಾಗಿ ನಿಂತು ಎಲ್ಲರನ್ನೂ ಸ್ವಾಗತಿಸುತ್ತಿದೆಯೇನೋ ಎನ್ನುವಂತೆ, ನಗರದ ಪರಂಪರೆಗೆ ತಕ್ಕಂತೆ ಶಿಸ್ತು ಬದ್ಧ ಕೆಂಪು ಸೀರೆ- ಬಿಳಿ ಕುಪ್ಪಸ ತೊಟ್ಟ ಕ್ರಾಂತಿ ಸಮರಕ್ಕೆ ಬದ್ಧವಾದ ಮಹಿಳೆಯರು... ಪೂರ್ಣ ಶ್ವೇತ ವಸ್ತ್ರಧಾರಿಗಳಾದ ಪುಟಾಣಿಗಳು.... ವೈವಿಧ್ಯಮಯ ಸಂಗೀತದ ಬ್ಯಾಂಡ್‌ಸೆಟ್‌ಗಳು... ಇವೆಲ್ಲಕ್ಕೂ ಪುಷ್ಟಿ ಕೊಟ್ಟ ಕ್ರಾಂತಿಗೀತೆಗಳ ನಡುವೆ ಮಹಿಳೆಯ ಪಾಲ್ಗೊಳ್ಳುವಿಕೆಯಿಲ್ಲದೆ ಕ್ರಾಂತಿಯು ಪೂರ್ಣವಲ್ಲ ಎಂಬುದನ್ನು ಎತ್ತಿ ತೋರಿಸಲೆಂಬಂತೆ ವಿವಿಧ ರಾಜ್ಯಗಳಿಂದ ಬಂದಿದ್ದ ಸಮರಶೀಲ ಮಹಿಳಾ ಪ್ರತಿನಿಧಿಗಳನ್ನು ಸ್ವಾಗತಿಸಲಾಯಿತು. ಜಯದೇವ್‌ಪುರ್ ಲಾಲ್ ಬಜಾರ್‌ನಲ್ಲಿ ಎಲ್ಲಾ ಮಹಿಳಾ ಪ್ರತಿನಿಧಿಗಳು ಒಟ್ಟಾಗಿ ಸಮ್ಮೇಳನದ ಸ್ಥಳಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಮೆರವಣಿಗೆಯ ನಾಯಕತ್ವ ವಹಿಸಿದ್ದ ಅಖಿಲ ಭಾರತ ನಾಯಕಿಯರಿಗೆ ಪ್ರವೇಶ ದ್ವಾರದಲ್ಲಿ, ಶೋಷಣೆಯ ವಿರುದ್ಧದ; ಅಸಮಾನತೆಯ ವಿರುದ್ಧದ ಹೋರಾಟದಲ್ಲಿ ಜಯಶಾಲಿಗಳಾಗಿ ಎಂದು ಆಶಿಸುವ ಸಂಕೇತವಾಗಿ ಬಾಲಕಿಯರು ಒಂದೊಂದು ಬುಟ್ಟಿ ತುಂಬ ಪುಷ್ಪಗಳನ್ನು ನೀಡಿದರು. ನಾವೂ ಮುಂದೆ ನಿಮ್ಮೊಡನೆ ಬರುತ್ತೇವೆಂಬಂತೆ.

ಸಮ್ಮೇಳನ ನಗರಕ್ಕೆ ಪ್ರವೇಶ ಮಾಡುತ್ತಿದ್ದ ಹಾಗೆ ಪ್ರತಿನಿಧಿಗಳನ್ನು ಸಾಂಸ್ಕೃತಿಕ ವಿಭಾಗ "ಸಪ್ದರ್ ಮಂಚ್"ಗೆ ಕರೆದೊಯ್ಯಲಾಯಿತು. ಮಕ್ಕಳಿಂದ ಮನ ಮೋಹಕವಾಗಿ ನಡೆದ ಕ್ರಾಂತಿಗೀತೆಗಳ ಈ ಕಾರ್ಯಕ್ರಮ ಕೇಳುಗರ ಕಣ್ಮನವನ್ನು ತಣಿಸಿದವು. ನಂತರ ಇಲ್ಲಿಂದ ಸಮ್ಮೇಳನದ ಕೇಂದ್ರ ಭಾಗವಾದ "ಲೀಲಾ ಸುಂದರಯ್ಯ ಮಂಚ್"ಗೆ ಎಲ್ಲಾ ಪ್ರತಿನಿಧಿಗಳ ಜಾಥಾವನ್ನು ನಡೆಸಲಾಯಿತು.

ಅ.ಭಾ.ಪ್ರ.ಮ.ಸ.ಯ ಅಖಿಲ ಭಾರತ ಅಧ್ಯಕ್ಷಿಣಿಯಾದ ಕಾಂ॥ ಮಂಜರೀಗುಪ್ತ ಅವರು, "ಪ್ರಜಾಪ್ರಭುತ್ವ-ಸಮಾನತೆ ಸ್ವಾತಂತ್ರ್ಯತೆ"ಯ ಘೋಷಣೆಯನ್ನುಳ ಶ್ವೇತ

ಪುಟ 8 ಕ್ಕೆ

ಕಮ್ಯುನಿಸ್ಟರ ಕುರಿತು ನಾರಾಯಣಕುಮಾರ ಅವರ ವ್ಯರ್ಥಾರೋಪ

ಕರ್ನಾಟಕ ಏಕೀಕರಣಕ್ಕಾಗಿ, ರಾಜ್ಯ ಭಾಷೆ ಕನ್ನಡ ಆಗಬೇಕೆಂದು, ಮೈಸೂರಿಗೆ ಬದಲಾಗಿ ಕರ್ನಾಟಕ ರಾಜ್ಯವೆಂದು ನಾಮಕರಣವಾಗಬೇಕೆಂದು ಸತತ ಹೋರಾಡಿದ ಪಕ್ಷ ಯಾವುದಾದರಿದ್ದರೆ ಅದು ಕಮ್ಯುನಿಸ್ಟ್‌ವೆಂಬುದನ್ನು ಕನ್ನಡ ಚಳುವಳಿ ನಾಯಕನೆಂದು ಹೇಳಿಕೊಳುತ್ತಿರುವ ಮಾಜಿ ಶಾಸಕ ಜಿ. ನಾರಾಯಣ ಕುಮಾರ ತಿಳಿಯುವುದು ಅಗತ್ಯ. ದೇಶದ ಸ್ವಾತಂತ್ರ ಚಳುವಳಿಯ ಸಮಯದಲ್ಲಿ, ಭಾಷಾವಾರು ಪ್ರಾಂತ ರಚನೆ ಮಾಡುತ್ತೇವೆಂದು ಆಶ್ವಾಸನೆ ನೀಡುತ್ತಾ, ಸ್ವಾತಂತ್ರ ಸಿಕ್ಕ ನಂತರ ಕುಂಟು ನೆವ ಮುಂದೆ ಮಾಡಿ ಭಾಷಾವಾರು ಪ್ರಾಂತ ರಚನೆಯನ್ನು ಮುಂದಕ್ಕೆ ಹಾಕುತ್ತ ಬಂದಾಗ, ಕಾಂಗ್ರೆಸ್ ಆಡಳಿತ ಮತ್ತು ಪಕ್ಷದ ಮೇಲೆ ಒತ್ತಾಯ ತರಲು ಏಕೀಕರಣ ಪರ ಪಕ್ಷಗಳನ್ನು ವ್ಯಕ್ತಿಗಳನ್ನು ಸೇರಿಸಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ನಡೆಸಿ ಹಲವಾರು ಹೋರಾಟ - ನಡೆಸಿದವರು 6 ತಿಂಗಳಿಂದ ಒಂದೂವರೆ ವರ್ಷದವರೆಗೆ ಸ್ಥಾನ ಬದ್ಧತೆಯಲ್ಲಿ, ಜೈಲಿನಲ್ಲಿದ್ದವರು. ಹುಬ್ಬಳ್ಳಿಯಲ್ಲಿ ಕ.ಪಿ.ಸಿ.ಸಿ. ನಡೆದಾಗ ಎಸ್.ನಿಜಲಿಂಗಪ್ಪನವರಿಂದ ಒತ್ತಾಯಿಸಿ ಅಧ್ಯಕ್ಷಪದವಿಗೆ ರಾಜೀನಾಮೆಯನ್ನು ಪಡೆದವರು. ಹಲವಾರು

ಪುಟ 8 ಕ್ಕೆ

ಒಳಪುಟಗಳಲ್ಲಿ

ಜನತೆಗೆ ವಿಶ್ವಾಸಘಾತ ಬಗೆದ ಹೊಲಸು ನಾಟಕ

(ಪಿ.ಡಿ. ಸಂಪಾದಕೀಯ)

ದೇಶದ ಇತ್ತೀಚಿನ ಬೆಳವಣಿಗೆಗಳು ರಾಜಕೀಯ ಬ್ಲಾಕ್ ಮೇಲಿನ ಒಂದು ಅತ್ಯಂತ ವಿಷಾದಕರ ಉದಾಹರಣೆ. ವಿ.ಪಿ. ಸಿಂಗ್ ಸರಕಾರ ಎಡಪಕ್ಷಗಳು ಮತ್ತು ಬಿ.ಜೆ.ಪಿ. ಬೆಂಬಲದ ಮೇಲೆ ಅವಲಂಬಿಸಿದ್ದುದರಿಂದ ರಾಮಮಂದಿರದ ಪ್ರಶ್ನೆ ಎತ್ತಿ ಬಾಬ್ರಿ ಮಸೀದಿಯ ಕೆಡಹುವ ಕೆಲಸ ಸಾಧಿಸಲು ಇದು ಇನ್ನೆಂದೂ ಸಿಗಲಾರದ ಒಂದು ಅವಕಾಶ ಎಂದು ಭಾವಿಸಿದ ಬಿ.ಜೆ.ಪಿ ಅದರ ಪೂರ್ಣ ದುರುಪಯೋಗ ಪಡೆಯಲು ಪ್ರಯತ್ನಿಸಿತು. ಕೇಂದ್ರದಲ್ಲಿ ವಿ.ಪಿ.ಸಿಂಗ್ ಸರ್ಕಾರ, ಬಿಹಾರದಲ್ಲಿ ಲಲ್ಲೂ ಪ್ರಸಾದ್ ಯಾದವ್ ಮತ್ತು ಉತ್ತರ ಪ್ರದೇಶದಲ್ಲಿ ಮುಲಾಯಂಸಿಂಗ್ ಯಾದವ್ ಸರಕಾರಗಳು ಅದಕ್ಕೆ ತಡೆಯೊಡ್ಡಿದುದ ರಿಂದ ತನ್ನ ಬೆಂಬಲ ಹಿಂತೆಗೆದು ಕೊಂಡಿತು. ಆದ್ದರಿಂದ ದೊಡ್ಡ-ದೊಡ್ಡ ಮಾತುಗಳೇನೇ ಇರಲಿ, ನವಂಬರ್ 7ರಂದು ಪಣಕ್ಕಿದ್ದದ್ದು ವಿಭಿನ್ನ ಧಾರ್ಮಿಕ ನಂಬಿಕೆಗಳ ನಡುವೆ ನಾವೆಲ್ಲಾ ಒಟ್ಟಾಗಿ, ಒಂದು ದೇಶವಾಗಿ ಬಾಳುವ ಜಾತ್ಯತೀತ ಭಾವನೆಯ ರಾಷ್ಟ್ರೀಯ ಐಕ್ಯತೆಯ ಪ್ರಶ್ನೆ. ಇತಿಹಾಸ ಒಂದು ಮಹಾನ್ ಶಿಕ್ಷಕ ಹಿಂದಿರುಗಿ ನೋಡಿದಾಗ, ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿ.ಜೆ.ಪಿ. ಯನ್ನು ದೂರವಿಟ್ಟು ಎಡ ಪಕ್ಷಗಳು ಮತ್ತು ಜನತಾದಳವೂ ಸೇರಿದಂತೆ ರಾಷ್ಟ್ರೀಯ ರಂಗದ ಇತರ ಪಕ್ಷಗಳ ನಡುವೆ ಹೊಂದಾಣಿಕೆಯೊಂದಿಗೆ ಹೋರಾಡ ಬೇಕು ಎಂಬ ಎಡಪಕ್ಷಗಳ ಕರೆ ಕಾಂಗ್ರೆಸ್(ಐ)ನ್ನು ಇಳಿಸಿ ಹೊಸ ಸರಕಾರ ರಚಿಸುವ, ದೇಶದ ಜಾತ್ಯತೀತತೆ, ಐಕ್ಯತೆ ಸಮಗ್ರತೆ ಕಾಪಾಡುವ ಐಕ್ಯತೆ ದಾರಿಯಾಗಿತ್ತು ಎಂಬುದೀಗ ಸ್ಪಷ್ಟವಾಗು ತ್ತದೆ. ಆದರೆ ರಾಷ್ಟ್ರೀಯರಂಗದ ಯಾವ

> ಆರ್.ಎಸ್.ಎಸ್. ನೇತೃತ್ವದಲ್ಲಿ ಬಿ.ಜೆ.ಪಿ. ವಿ.ಹೆಚ್.ಪಿ. ಭಜರಂಗದಳ ಈ ಪ್ರಶ್ನೆಯ ಮೇಲೆ ಯುದ್ಧ ಸಾರಿಯೇ ಬಿಟ್ಟಿವೆ. ಜನತೆಯ ತೀರ್ಪಿಗೆ ವಿಶ್ವಾಸಘಾತ ಬಗೆದು ಕಾಂಗ್ರೆಸ್‌ನೊಂದಿಗೆ ಕೈಮಿಲಾಯಿಸಿ ರಾಜೀವಗಾಂಧಿ ಮತ್ತೆ ಅಧಿಕಾರಕ್ಕೆ ಬರಲು ನೆರವಾಗುತ್ತಿರುವ ವ್ಯಕ್ತಿಗಳು ಕೋಮು ವಾದದ ವಿರುದ್ಧ ಹೋರಾಟವನ್ನು ಅದೇ ದೃಢತೆಯಿಂದ ಮುಂದುವರೆಸಿ ನಮ್ಮ ಸಮಾಜದ ಜಾತ್ಯತೀತ ಸ್ವರೂಪವನ್ನು ಉಳಿಸಬಲ್ಲರೇ? ಇದುವರೆಗಂತೂ ಅವರು ಈ ಬಗ್ಗೆ ಮೌನವಾಗಿದ್ದಾರೆ.

ಯನ್ನು ಎಬ್ಬಿಸಿ ನಮ್ಮ ಜಾತ್ಯಾತೀತ ಸಮಾಜದ ಅಡಿಗಲ್ಲನ್ನೇ ನಾಶಮಾಡಲು ಬಿ.ಜೆ.ಪಿ.ಸಿದ್ಧವಾಗಬಲ್ಲದು, ಆ ಶಕ್ತಿಯೂ ಅದಕ್ಕಿದೆ ಎಂಬ ದೂರದೃಷ್ಟಿತೋರಿಸಲಿಲ್ಲ.

ಮೇ ತಿಂಗಳಷ್ಟು ಹಿಂದೇನೇ ಎಡ ಪಕ್ಷಗಳು ಮುಂದಾಗಿ ದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ನಡೆಸಿದ 21 ಪ್ರಸಿದ್ಧ ವ್ಯಕ್ತಿಗಳು ಭಾಗವಹಿಸಿದ ಕೋಮುವಾದ-ವಿರೋಧಿ ಸಮಾವೇಶ ಈ ಬಗ್ಗೆ ಎಚ್ಚರಿಕೆ ನೀಡಿತ್ತು. ಬಿ.ಜೆ.ಪಿ. ಈ ಭಯಾನಕ ನಾಟಕನಡೆಸದಂತೆ ತಡೆಯಲು ಜಾತ್ಯತೀತ ಶಕ್ತಿಗಳೆಲ್ಲಾ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಿ ನಿಲ್ಲಬೇಕೆಂದು ಕರೆ ನೀಡಿತ್ತು. ಆದರೆ ಜನತಾದಳವಾಗಲಿ, ರಾಷ್ಟ್ರೀಯರಂಗವಾಗಲಿ ಈ ಬಿ.ಜೆ.ಪಿ. ಸವಾಲನ್ನು ಗಂಭೀರವಾಗಿ ಎತ್ತಿಕೊಳ್ಳಲಿಲ್ಲ.

ಉತ್ತರ ಪ್ರದೇಶದಲ್ಲಿ ಮಾತ್ರವೇ ... ಸಿಂಗ್ ಯಾದವ್ ಎಡಶಕ್ತಿಗಳೊಂದಿಗೆ ಕೋಮುಶಕ್ತಿಗಳು ಎಬ್ಬಿಸುತ್ತಿದ್ದ ಉನ್ಮಾದ, ದ್ವೇಷವನ್ನು ಎದುರಿಸಲು ತೀವ್ರ ಪ್ರಕ್ಷೋಭೆ ಆರಂಭಿಸಿದರು. ಸುಮಾರು ಒಂದು ಕೋಟಿ ಜನಗಳನ್ನು ಇದು ತಲುಪಿತು. ನಮ್ಮ ಈ ಉಪಖಂಡ ಗಾತ್ರದ ದೊಡ್ಡಮನೆಯ ವಿಶಾಲತೆಗೆ ಹೋಲಿಸಿದರೆ ಇದೊಂದು ಅತೀ ಸಣ್ಣ, ಅತೀ ವಿಳಂಬದ ಪ್ರಯತ್ನವಾಗಿತ್ತು.

ಸೆಪ್ಟೆಂಬರ್‌ನಲ್ಲಿ ಆರಂಭವಾದ ರಥಯಾತ್ರೆ ಸಾವುನೋವಿನ ಸರಣಿಯನ್ನೇ ಆರಂಭಿಸಿತು. ರಕ್ತದಾನ, ಶಸ್ತ್ರದಾನಗಳನ್ನು ಪಡೆದ ಈ ಯಾತ್ರೆಯನ್ನು ಕೊನೆಗೂ ನಿಲ್ಲಿಸಿದಾಗ ಬಿ.ಜೆ.ಪಿ. ತನ್ನ ವಿ.ಹೆಚ್.ಪಿ. ಭಜರಂಗದಳದ ಗಲಾಟೆಕೋರ ಪಡೆಗಳೊಂದಿಗೆ ಸರಕಾರದೊಡನೆ ತಿಕ್ಕಾಟಕ್ಕೆ ಸಿದ್ಧವಾಗಿ ನಿಂತಿತ್ತು. ಪರಿಣಾಮ ರಕ್ತಪಾತ, ಸಾವುಗಳು, ಬಾಬ್ರಿಮಸೀದಿ ನಾಶಮಾಡಿ- ಅದರ ಮೇಲೆ ರಾಮಮಂದಿರ ಕಟ್ಟುವ ಅವರ ಘೋಷಿತ ಗುರಿ ಸಾಧನೆಯಾಗದಂತೆ ತಡೆಯಲಾಯಿತು. ಆದರೆ ಅದಕ್ಕಾಗಿ ವಿ.ಪಿ.ಸಿಂಗ್ ತನ್ನ ಸರಕಾರದ ಬೆಲೆ ತೆರಬೇಕಾಯಿತು. ಜಾತ್ಯತೀತ ಶಕ್ತಿಗಳು ಯಾವುದಕ್ಕಾಗಿ ಒಂದು ವರ್ಷದ ಹಿಂದೆ ಹೋರಾಡಿದ್ದವೋ ಅವನ್ನೆಲ್ಲಾ ಕಳೆಕೊಳ್ಳಬೇಕಾಯಿತು.

ನವಂಬರ್ 7 ರ ಲೋಕಸಭೆ ವಿವಿಧ ಪಕ್ಷಗಳ ಹಾಗೂ ವಿಶ್ವಾಸಘಾತ ಮಾಡಿದ ಮಾಜಿ ಜನತಾದಳ ಸದಸ್ಯರ ನಿಜ ಬಣ್ಣವನ್ನು ಬಯಲಿಗೆಳೆದಿದೆ. ಈ ಎಲ್ಲಾ ಪಕ್ಷಗಳ ಜಾತ್ಯತೀತತೆಯ ಕೋಮುವಾದದ ವಿರುದ್ಧ ಹೋರಾಟದ ಮಾತುಗಳು ಎಷ್ಟು ನಿಜ, ಎಷ್ಟು ಟೊಳ್ಳು ಎಂಬುದನ್ನು ತೋರಿಸಿಕೊಟ್ಟಿದೆ.

ಸರಕಾರಗಳು ಬರುತ್ತವೆ, ಹೋಗ ...

ರಾಮಜನ್ಮಭೂಮಿ – ಬಾಬ್ರಿಮಸೀದಿ ವಿವಾದದ ಮೇಲೆ ಇತಿಹಾಸದ ಅಂತಿಮ ತೀರ್ಪು ಇನ್ನೂ ಬಂದಿಲ್ಲ. ಬಿ.ಜೆ.ಪಿ. ಬಾಬ್ರಿ ಮಸೀದಿಯನ್ನು ಕೆಡಹುವ ತನ್ನ ಗುರಿಯನ್ನಿನ್ನೂ ಬಿಟ್ಟಿಲ್ಲ. ಜಾತ್ಯಾತೀತತೆಯ ಕೊಲೆಮಾಡುವ ವಿ.ಹೆಚ್.ಪಿ. ಭಜರಂಗ ದಳದ ಕರ್ಕಶ ಬೆದರಿಕೆಗಳು ಇನ್ನೂ ಕರ್ಕಶಗೊಳ್ಳುತ್ತಿವೆ.

ಪರಸ್ಪರ ಶಾಮೀಲಾಗಿ ವಿ.ಪಿ.ಸಿಂಗ್ ಸರಕಾರ ಉರುಳಿಸಿದ ಕೂಟ ಈ ಪ್ರಶ್ನೆಯ ಬಗ್ಗೆ ಏನು ಹೇಳುತ್ತದೆ ಎಂದು ಇನ್ನೂ ತಿಳಿಯಪಡಿಸಿಲ್ಲ. ಯಾವುದೇ ರೀತಿಯ ತಂತ್ರಗಾರಿಕೆ ಈ ಸಮಸ್ಯೆಯನ್ನು ಪರಿಹರಿಸಲಾರದು. ಆರ್.ಎಸ್.ಎಸ್. ನೇತೃತ್ವದಲ್ಲಿ ಬಿ.ಜೆ.ಪಿ. ವಿ.ಹೆಚ್.ಪಿ. ಭಜರಂಗದಳ ಈ ಪ್ರಶ್ನೆಯ ಮೇಲೆ ಯುದ್ಧ ಸಾರಿಯೇ ಬಿಟ್ಟಿವೆ. ಜನತೆಯ ತೀರ್ಪಿಗೆ ವಿಶ್ವಾಸಘಾತ ಬಗೆದು ಕಾಂಗ್ರೆಸ್‌ನೊಂದಿಗೆ ಕೈಮಿಲಾಯಿಸಿ ರಾಜೀವಗಾಂಧಿ ಮತ್ತೆ ಅಧಿಕಾರಕ್ಕೆ ಬರಲು ನೆರವಾಗುತ್ತಿರುವ ವ್ಯಕ್ತಿಗಳು ಕೋಮುವಾದದ ವಿರುದ್ಧ ಹೋರಾಟವನ್ನು ಅದೇ ದೃಢತೆಯಿಂದ ಮುಂದುವರೆಸಿ ನಮ್ಮ ಸಮಾಜದ ಜಾತ್ಯತೀತ ಸ್ವರೂಪವನ್ನು ಉಳಿಸಬಲ್ಲರೇ? ಇದುವರೆಗಂತೂ ಅವರು ...

> ಈ ದೇಶದ ಬಹುಪಾಲು ಜನತೆ ಮೂಲತಃ ಜಾತ್ಯತೀತರು ದೇಶದ ಜಾತ್ಯತೀತ ಸ್ವರೂಪ ರಕ್ಷಿಸುವ ಈ ಮಹತ್ವದ ನಿರ್ಣಾಯಕ ಹೋರಾಟದಲ್ಲಿ ಈ ಆಪಾರ ಜನಸ್ತೋಮವನ್ನು ... ಬೇಕು. ... ಇನ್ನು ಸಮಯ ವ್ಯರ್ಥ ಮಾಡ ಬಾರದು. ಇದು ತಕ್ಷಣ ... ಕರ್ತವ್ಯ.

ಶ್ರೀಕೃಷ್ಣನ ಶಂಖ ಸುಳ್ಳು ಹೇಳಿದ್ದೇಕೆ?

ವಿಜಯದ ಸಂಕೇತವಾದ ಪಾಂಚಜನ್ಯದ ಹೆಸರಿನಲ್ಲಿ "ಪಾಂಚಜನ್ಯ ಇಂಟರ್‌ನ್ಯಾಷನಲ್ ನ್ಯೂಸ್ ಏಜೆನ್ಸಿ" (PNAI) ಎಂಬೊಂದು ಹೆಸರಿನ ಸುದ್ದಿ ಸಂಸ್ಥೆಯನ್ನು ಲಂಡನ್ನಿನಲ್ಲಿ ಪ್ರಾರಂಭಿಸಿದ್ದಾರಂತೆ. ಅದೂ ಎರಡು ತಿಂಗಳ ಹಿಂದೆಯಷ್ಟೆ.

ಇದು ಮಾಡಿದ ಕೆಲಸವಾದರೂ ಏನು ಗೊತ್ತೆ... ಅಯೋಧ್ಯೆಯಲ್ಲಿ ಒಂದು ರೇಡಿಯೋ ಟ್ರಾನ್ಸ್‌ಮೀಟರ್‌ನ್ನು ಅಳವಡಿಸಿ ಅದರಿಂದ ಬಂದ ಸುದ್ದಿಗಳನ್ನು ಇಂಗ್ಲೆಂಡ್, ಜಪಾನ್, ಜರ್ಮನ್, ಫ್ರಾನ್ಸ್, ಸ್ಪೈನ್, ಡೆನ್ಮಾರ್ಕ್, ಅಮೆರಿಕಾ ಮುಂತಾದ ದೇಶಗಳ ರೇಡಿಯೋ ಮತ್ತು ಟಿ.ವಿ.ಗಳಿಗೆ ಬಿತ್ತರಿಸಿದ್ದು.

ಅಕ್ಟೋಬರ್ 30 ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಒಡೆದುಹಾಕಲಾಯಿತು ಎಂದು ಪಾಂಚಜನ್ಯವು ಮೊಳಗಿ "ವಿಜಯದೊರೆಯಿತು". ಜಯದೊರೆಯಿತು' ಎಂದು ಝೇಂಕರಿಸಿದಾಗ ಇದನ್ನೆಲ್ಲಾ ಸತ್ಯವೆಂದು ನಂಬಿದ ಪ್ರಪಂಚದಸುದ್ದಿ ರಕ್ಷಕನಾದ ಬಿಬಿಸಿಯು (ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ ಕಾರ್ಪೊರೇಷನ್") ಇಡೀ ವಿಶ್ವಕ್ಕೆಲ್ಲಾ ಸುದ್ದಿ ಬಿತ್ತರಿಸಿತು.

ಮಸೀದಿಗೆ ಯಾವುದೇ ಕೊಂಕು ಆಗಿಲ್ಲವೆಂದು ಅಲ್ಲಿಗೆ ಹೋಗಿದ್ದ ಮುಸ್ಲಿಂ ನಾಯಕರ ನಿಯೋಗವೊಂದು ಒಪ್ಪಿಕೊಂಡಿದ್ದು ಅದನ್ನು ಪ್ರಕಟಿಸಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಪಾಂಚಜನ್ಯವು ಹಸಿ ಸುಳ್ಳನ್ನು ಹರಿಯ ಬಿಟ್ಟದ್ದೇಕೆ ಶ್ರೀಕೃಷ್ಣನ ಶಂಖಅಸತ್ಯವಾಡಿದ್ದೇಕೆ? ನಿಜಾಂಶ ವರಿಯದೆ ಬಿಬಿಸಿಯು ಬಿತ್ತರಿಸಿದ್ದೇಕೆ?

ಮಸೀದಿಯನ್ನು ಒಡೆದರು ಎಂದು ಪ್ರಚಾರವಾದರೆ ಇಲ್ಲಿನ ಮುಸ್ಲಿಮರು ಉದ್ವೇಗದಿಂದ ಗಲಭೆಗಳನ್ನು ಪ್ರಾರಂಭಿಸುತ್ತಾರೆ.

ನಂತರ ಮತೀಯ ಗಲಭೆಗಳು ಪ್ರಾರಂಭವಾಗಿ ಜನರು ಒಬ್ಬರನ್ನೊಬ್ಬರು ಕೊಲ್ಲಲು ಪ್ರಾರಂಭಿಸಿದರೆ ಈ ದೇಶ ಛಿದ್ರ ಛಿದ್ರವಾಗುತ್ತದೆ. ಆಗ ತಮಗೆ ಅನುಕೂಲ ವಾಗುತ್ತದೆ ಎಂದು ತಾನೇ!

ಇದೇನೂ ಆಚಾತುರ್ಯದಿಂದ ನಡೆದ ಘಟನೆಯೇನಲ್ಲ -- ಇದನ್ನು ಸುಯೋಜಿತವಾಗಿ ಮಾಡಿದ್ದಾರೆ. ಎರಡು ತಿಂಗಳಿಗೂ ಮೊದಲೇ ಲಂಡನ್ನಿನಲ್ಲಿ ಒಂದು ಸುದ್ದಿ ಸಂಸ್ಥೆಯನ್ನು (ನ್ಯೂಸ್ ಏಜೆನ್ಸಿ) ಹುಟ್ಟುಹಾಕಿದ್ದಾರೆ. ಕಳ್ಳತನದಿಂದ ಒಂದು ರೇಡಿಯೋ ಟ್ರಾನ್ಸ್‌ಮಿಟರ್‌ನ್ನು ಅಯೋಧ್ಯೆಯಲ್ಲಿ ಸ್ಥಾಪಿಸಿದ್ದಾರೆ ಹಾಗೂ ಇಲ್ಲಿಂದ ಲಂಡನ್ನಿಗೆ ಸುದ್ದಿ ರವಾನೆ ಮಾಡಲು ನಾಲ್ಕು ಭಾರತೀಯ ಸುದ್ದಿಗಾರರನ್ನು ನೇಮಿಸಿದ್ದಾರೆ. "ಇದೇ ರೀತಿಯಲ್ಲಿ ಹನ್ನೆರಡು ಸುದ್ದಿಗಾರರು ಅಯೋಧ್ಯೆ ಅಹ್ಮದಾಬಾದ್, ಲಕ್ನೋ, ವಾರಣಾಸಿ, ದೆಹಲಿ ಮತ್ತು ಬೊಂಬಾಯಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತು ಥಾಣಾ, ಇಸ್ಲಾಮಾಬಾದ್‌ಗಳಿಂದಲೂ ಸಹ ನಮಗೆ ಸುದ್ದಿಗಳು ಬರುತ್ತವೆ. (ಇಂಡಿಯನ್ ಎಕ್ಸ್‌ಪ್ರೆಸ್. 6'11'90 ಮದ್ರಾಸ್ ಸಂಚಿಕೆ) ಎಂದು ಆ ಸುದ್ದಿ ಸಂಸ್ಥೆಯ ಅಧಿಕಾರಿಯೊಬ್ಬರಾದ ಹಸ್‌ಮುಖ್ ಶಾ ಎಂಬುವರು ಹೆಮ್ಮೆಯಿಂದ ಹೇಳಿದ್ದಾರೆ ಎಂದರೆ ಸುದ್ದಿ ಹೆಸರಿನಲ್ಲಿ ಸುಳ್ಳು ಪ್ರಚಾರಮಾಡಲು ಈ ದೇಶದಲ್ಲಿ ಎಂತಹ ವಿಶಾಲ ಕಾರ್ಯಜಾಲ ನಿರ್ಮಾಣವಾಗಿದೆಯೆಂದು ಗೊತ್ತಾಗುತ್ತದೆಯಲ್ಲವೆ!

ಈ ಪಾಂಚಜನ್ಯ ನ್ಯೂಸ್ ಏಜೆನ್ಸಿಯ ನಿರ್ಮಾಪಕರಲ್ಲೊಬ್ಬರಾದ ಠಾಕೂರ್ ಭ್ಯಾಪಟೇಲ್ ವಿಶ್ವಹಿಂದೂ ಪರಿಷತ್ತಿಗೆ ಸೇರಿದವರಂತೆ! ಹಾಗಾದರೆ ಇವರಿಗೂ, ಇವರಿರುವ ವಿಶ್ವಹಿಂದೂ ಪರಿಷತ್ತಿಗೂ ಹಾಗೂ ಸಾಮ್ರಾಜ್ಯಶಾಹಿ ದೇಶಗಳ ಜೊತೆ ಮತ್ತು ಅಲ್ಲಿರುವ ಸುದ್ದಿ ಸಂಸ್ಥೆಗಳ ನಡುವೆ ಗಳಸ್ಯ ಕಂಠಸ್ಯ ಸಂಬಂಧವಿದೆಯೆಂದು ಅರ್ಥವಲ್ಲವೆ!

ಇಲ್ಲದಿದ್ದರೆ ಪರಿಷತ್ತಿನ ಗುಂಪು ನೀಡಿದ ಸುಳ್ಳು ಸುದ್ದಿಯನ್ನು ವಿಚಾರ ಮಾಡದೆ ಅಪ್ಪಟ ಸತ್ಯವೆಂದು ನಂಬಿ ಬ್ರಿಟನ್‌ನ ಬಿಬಿಸಿ ಹಾಗೂ ಇತರೆ ಸಾಮ್ರಾಜ್ಯಶಾಹಿ ದೇಶಗಳ ಸುದ್ದಿ ಸಂಸ್ಥೆಗಳು ಪ್ರಸಾರ ಮಾಡುತ್ತಿರಲಿಲ್ಲವೆ! ಧರ್ಮದ ಹೆಸರಿನಲ್ಲಿ ಈ ದೇಶವನ್ನು ತುಂಡರಿಸಲಿಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳು ಪ್ರತಿನಿತ್ಯ ಪ್ರಯತ್ನಿಸುತ್ತಿದೆಯೆಂದು ಸಿಪಿಐ(ಎಂ) ಹಾಗೂ ಇತರೆ ಎಡಶಕ್ತಿಗಳು ಹೇಳಿದಾಗ ಲೆಲ್ಲಾ ನಂಬದ ಕೆಲವರಿದ್ದಾರೆ ಈಗಲಾದರೂ ಅವರು ಸಾಮ್ರಾಜ್ಯಶಾಹಿಗಳ ಈ ಹಸ್ತಕ್ಷೇಪವನ್ನು ಹಾಗೂ ಅವರ ನಿಜ ಸ್ವರೂಪವನ್ನು ತಿಳಿದುಕೊಳ್ಳಬೇಕು.

ಈ ನೀಚ ಸಾಮ್ರಾಜ್ಯಶಾಹಿ ಸುದ್ದಿ ಸಂಸ್ಥೆಗಳು ತಾವು ತಯಾರಿಸಿದ ಸುದ್ದಿಯೆಲ್ಲವೂ ಸುಳ್ಳೆಂದು ಸಾಬೀತಾದರೂ ಕ್ಷಮೆಯಾಚಿಸುವ ಸೌಜನ್ಯವಾದರೂ ಇದೆಯಾ ಅವಕ್ಕೆ? ಇಲ್ಲ. ಆದರೆ ವಿಸ್ಮಯದ ವಿಷಯವೆಂದರೆ ಈ ವಿರೂಪಿ ಸುದ್ದಿಸಂಸ್ಥೆಗಳ ಆಶ್ರಿತರೇ ಪ್ರಜಾಪ್ರಭುತ್ವದ ಬಗ್ಗೆ ಜಾಗಟೆ ಬಾರಿಸುತ್ತಿರುವುದು.

ಸಮಾಜವಾದೀ ದೇಶಗಳಲ್ಲಿ ಗೊಂದಲಗಳ ನಿರ್ಮಾಣ ಮಾಡುವುದು, ಇದುವರೆಗೂ ತಿಂದು, ತೇಗಿ,ಸೂರೆ ಮಾಡಿದ ವಸಾಹತು ದೇಶಗಳಲ್ಲಿ ಹಾಗೂ ಆ ದೇಶಗಳ ಮಧ್ಯೆ ಮ್ಯಗೀಯ ಘರ್ಷಣೆಗಳನ್ನು ಹುಟ್ಟು ಹಾಕಿ, ಅವುಗಳ ಮೂಲಕ ಇಡೀ ಜಗತ್ತಿನ ತಮ್ಮ ರಕ್ತಸಿಕ್ತ ಕೈಗಳ ಮೇಲೆ ಸಾಮ್ರಾಜ್ಯಶಾಹಿ ದೇಶಗಳು ಪ್ರಯತ್ನಿಸುತ್ತಿವೆ. ಇಂತಹ ಪ್ರಯತ್ನಗಳ ವಿರುದ್ಧವಾಗಿ ಭಾರತದ ಜನತೆ ಎಚ್ಚರಿಕೆಯಿಂದ ಇರಬೇಕು.

ನೂರಾರು ಮೈಲಿಗಳಾಚೆಯ ಪುಟ್ಟ ಬ್ರಿಟಿಷ್ ದೇಶಕ್ಕೆ ದೊಡ್ಡ ಭಾರತ ಗುಲಾಮಳಾಗಲು ಮೂಲ ಕಾರಣ ಇಲ್ಲಿನ ಸಾಮಾಜಿಕ ಅಸಮತೆಯ ಕಂದರಗಳು ಮತ್ತು ಒಳಜಗಳಗಳು. ಈ ಪರಿಸ್ಥಿತಿ ಇನ್ನೂ ಮುಂದುವರಿದರೆ-ದೇಶದಲ್ಲಿ ಎಷ್ಟೋ ಸಮಸ್ಯೆಗಳು ತುಂಬಿ ತುಳುಕುವಾಗ ಕೆಲವರು ಮಸೀದಿ ಕೆಡವಿ ಮಂದಿರ ಅಲ್ಲೇ ಕಟ್ಟುವೆವು ಎಂದು ಹಠ ಹಿಡಿದರೆ, ಸಾಮಾನ್ಯ ಜನರ ಮಧ್ಯೆ ಘರ್ಷಣೆ ಉಂಟುಮಾಡಿದರೆ ಅದು ಸಾಮ್ರಾಜ್ಯಶಾಹಿಗಳ ಸುಗಮ ಪ್ರವೇಶಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಮರೆಯಬಾರದು. ದೇಶವನ್ನು ಒಡೆಯುವ, ಜನರ ಐಕ್ಯತೆಯನ್ನು ಮುರಿಯುವ ಇಂತಹ ಶಕ್ತಿಗಳ ಜೊತೆ ಕೈಜೋಡಿಸುವವರನ್ನು ಜನತೆ ಗುರುತು ಹಿಡಿಯಬೇಕು.

ರಾಮನ ಹೆಸರನ್ನು ಬಳಸುತ್ತಾರೆ!

ಕೃಷ್ಣನ ಕೈಯಲ್ಲಿರುವ "ಪಾಂಚಜನ್ಯ" ಉಪಯೋಗಿಸುತ್ತಾರೆ!

ಏಕೆಂದು ನೋಡಿದರೆ ಜನರ ಒಗ್ಗಟ್ಟನ್ನು ಒಡೆಯಲು, ಸಾಮ್ರಾಜ್ಯಶಾಹಿಗಳಿಗೆ ಉಪಕಾರ ಮಾಡಲು!

ರಾಮ, ಕೃಷ್ಣರಲ್ಲಿ ಭಕ್ತಿಯಿರುವ ಭಕ್ತರು ಈ ದೇಶದಲ್ಲುಂಟು. ಅವರೇ, ಹೇಳಲಿ ಇದು ರಾಮ ಕೃಷ್ಣರ ಹೆಸರಿಗೆ ಮಸಿ ಬಳಿಯುವ ಕೃತಿಮವಲ್ಲವೆ?

-ಅರುಣನ್ (ಕೃಪೆ: ತಿಕದಿರ್)

"ನೀವಿಲ್ಲಿ ಧರ್ಮ ಭೋಧಿಸುವಂತೆ ಯಾರೂ ಬೋಧಿಸುವದಿಲ್ಲ"

ಅಮೆರಿಕಾದಲ್ಲಿ ವಿ.ಹೆಚ್.ಪಿ. 'ಸಂಸ್ಕೃತಿ'' ಪ್ರದರ್ಶನ

ರಾಮ ಜನ್ಮ ಭೂಮಿ-ಬಾಬ್ರಿ ಮಸೀದಿ ಪ್ರಶ್ನೆಯ ಕುರಿತು ಅಮೆರಿಕಾದ ಮೇರಿ ಲ್ಯಾಂಡ್ ವಿಶ್ವವಿದ್ಯಾಲಯದ ಮೇಲೆ ಮೌಂಟ್‌ಹಾಲ್‌ನಲ್ಲಿ ವಿ.ಹೆಚ್‌ಪಿ. ಸಂಘಟಿಸಿದ ಒಂದು ಸಭೆ ಗಲಭೆ-ಗುದ್ದಾಟಗಳಲ್ಲಿ ಮುಕ್ತಾಯವಾಯಿತು ಎಂದು ಯು.ಎನ್.ಐ. ವರದಿಮಾಡಿದೆ. ಸಮಾರು 75 ಅತ್ಯಂತ ಸುಶಿಕ್ಷಿತ ಭಾರತೀಯರು ಭಾಗವಹಿಸಿದ್ದ ಈ ಸಭೆಯಲ್ಲಿ ಭಾಷಣಕಾರರೊಬ್ಬರು ಅಯೋಧ್ಯೆಯ 'ಐತಿಹಾಸಿಕ ತಥ್ಯಗಳ ಬಗ್ಗೆ, ಮಾತನಾಡುವಾಗ ಸಂಶೋಧನಾ ವಿದ್ಯಾರ್ಥಿಗಳು ಈ 'ಐತಿಹಾಸಿಕ ತಥ್ಯ'ಗಳನ್ನು ಪ್ರಶ್ನಿಸಲಾರಂಭಿಸಿದರು. ಉತ್ತರಿಸಲಾರದೆ ಕುಪಿತಗೊಂಡ ವಿ.ಹೆಚ್.ಪಿ. ಸಂಘಟಕರು ವಿದ್ಯಾರ್ಥಿಗಳನ್ನು ಹೊರಗೆಸೆಯುವುದಾಗಿ ಬೆದರಿಸಿದರು ವಿದ್ಯಾರ್ಥಿಗಳು "ಅಮೆರಿಕಾದಂತಹ ಸ್ವತಂತ್ರ ದೇಶದಲ್ಲಿ" ವಿ.ಹೆಚ್.ಪಿ. ಸಂಘಟಕರ ಒರಟು ವರ್ತನೆಯನ್ನು ಪ್ರತಿಭಟಿಸಿದರು. ಗಲಭೆಯಲ್ಲಿ ಇತಿಹಾಸದ ಪಾಧ್ಯಾಪಕರೊಬ್ಬರು ಪ್ರಶ್ನೆ ಕೇಳಿದ ಸಂಶೋಧನಾ ವಿದ್ಯಾರ್ಥಿ ಹೊಡೆದರೆಂದು ವರದಿಯಾಗಿದೆ.

ಗಲಭೆಯಿಂದ ಬೇಸರಗೊಂಡ ಹಿರಿಯ ಮಹಿಳೆಯೊಬ್ಬರು "ದೂರದ ಅಯೋಧ್ಯೆಯಲ್ಲಿ ಒಂದು ತುಂಡು ಜಾಗಕ್ಕಾಗಿ ಹುಚ್ಚರಂತೆ ಏಕೆ ಗುದ್ದಾಡುತ್ತೀರಿ? ಧರ್ಮ ಒಂದು ವೈಯಕ್ತಿಕ ವಿಷಯ. ದೇವರು ಹೃದಯದಲ್ಲಿದ್ದಾನೆ. ಹಾಗೆನ್ನುತ್ತದೆ ಗೀತೆ" ಎಂದು ಕಳಕಳಿಯಿಂದ ವಿನಂತಿಸಿ ಕೊಂಡಳು.

ಒಬ್ಬರು ಸಿಟ್ಟಾಗಿ ಕೇಳಿದರಂತೆ- "ನಿನಗೆ ಗೀತೆ ಹೇಳಿಕೊಟ್ಟವರು ಯಾರು?" ಮಹಿಳೆ ತಟ್ಟನೆ ಪ್ರತ್ಯುತ್ತರವಿತ್ತಳು- "ನನ್ನ ತಾಯಿ, ಅಜ್ಜಿಯಿಂದ ನಾನು ಇದನ್ನು ಕಲಿತೆ. ಆದರೆ ನೀವಿಲ್ಲಿ ಧರ್ಮ ಬೋಧಿಸುವಂತೆ ಯಾರೂ ಬೋಧಿಸುವುದಿಲ್ಲ."

ಮೊದಲೇ ಹೇಳಿದಂತೆ ಇದು ಯು.ಎನ್.ಐ. ವಾಶಿಂಗ್ಟನ್‌ನಿಂದ ಕಳಿಸಿದ ಸುದ್ದಿ. ಡೆಕ್ಕನ್ ಹೆರಾಲ್ಡ್ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ಎರಡೂ ಪತ್ರಿಕೆಗಳು. ಇದನ್ನು ಪ್ರಕಟಿಸಿದ್ದವು. ಆದರೆ ತಮಾಷೆಯೆಂದರೆ 'ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲಿ ಕೊನೆಯ ಪ್ಯಾರಾ (ಗೀತೆ ಹೇಳಿಕೊಟ್ಟವರಾರು?) ಪ್ರಕಟವಾಗಲಿಲ್ಲ.

ರಸ್ತೆಯಲ್ಲಿ ರಕ್ತವಿದೆ.

ಹೀಗೆ ನೋಡಿ,
ರಸ್ತೆಯಲ್ಲಿ ರಕ್ತವಿದೆ!
ಯಾರದಿರಬಹುದು?
ಮೂಸಿ ನೋಡಿ,
ಗುರುತು ಸಿಕ್ಕಿತೆ ನಿಮಗೆ?
ಹಿಂದೂವಿನದೆ, ಮುಸ್ಲೀಂನದೆ?
ಕ್ರಿಶ್ಚಿಯನ್ನದೆ, ಶಿಖ್‌ನದೇ, ಆಂಗ್ಲನದೆ?
ಅಥವಾ ತಂಗಿಯದೆ?
ಯಾರದಿದು ರಕ್ತ?

ಚಲ್ಲಾಪಿಲ್ಲಿ ಕಲ್ಲು,
ಮೈ ಸುಟ್ಟ ಮಳಿಗೆಗಳು, ಬಸ್ಸುಗಳು
ರಸ್ತೆ ನೋಡಿ ಸ್ವಾಮಿ,
ಉರುಳಿದ ಬುತ್ತಿ ಬಟ್ಟಲು
ಚಲ್ಲಿದ ಅನಾಥ ರೊಟ್ಟಿ
ಇವುಗಳ ಧರ್ಮ ಗೊತ್ತೇ ನಿಮಗೆ?
ಬೆಚ್ಚನೆಯ ಬೂಟುಗಳ
ಶಿಥಿಲ ಸೈಕಲ್ಲುಗಳ
ಒಡೆದ ಬಲ್ಬುಗಳ
ರಕ್ತಮಯ ಅರಿವೆಗಳ
ಜಾತಿಯಾವುದು
ಹೇಳುವಿರಾ ನೀವು?

ಶಾಲೆಯ ಹಾದಿ ಮಗಳನ್ನು ನುಂಗಿದ್ದಕ್ಕೆ
ಕರುಳಿಗೆ ಬೆಂಕಿ ಹತ್ತಿದ್ದಕ್ಕೆ
ತಾಯಿಯ ಕಂಗಳಲ್ಲುಕ್ಕುವ
ದುಃಖ ಸಾಗರದ ಹನಿಯ ಧರ್ಮ
ಯಾವುದು ತಿಳಿಸುವಿರಾ ನೀವು?
ಸ್ತ್ರೀಯ ಹಾಸಿನ ಮೇಲೆ
ಆಸಿದ ಗಾಯಗಳ ಚೀರಾಟದ ಧರ್ಮ
ಯಾವುದು ತಿಳಿದಿರಾ ನೀವು?
ನಾಮಧೇಯ ಸಾವುಗಳ ಜೀವ
ಯಾವ ಜಾತಿಯದ್ದು ತಿಳಿಸುವಿರಾ ನೀವು?

ಹೌದು, ಹೇಳಬಲ್ಲೆನು ನಾನು
ಆ ಶವ, ರೊಟ್ಟಿ, ಅನಾಥ ಬುತ್ತಿ ಬಟ್ಟಲು
ಈ ರಕ್ತ ಮನುಷ್ಯನವೇ.
ಕಡತದಲ್ಲಿ ಅವಿತು ಕೂತು
ಕಮರುವ ಕನಸುಗಳ ಹೊತ್ತ ನೌಕರನದು
ಆ ಮುರುಕು ಸೈಕಲ್
ರಕ್ತಮುತ್ತಿದ ಅರಿವೆಗಳು ಮನುಷ್ಯನವೆ:

ಗಿರಣಿಗಳಲ್ಲಿ ಬಟ್ಟೆಗಳ ನೇಯ್ದು
ಯಾರ ರಟ್ಟೆಗಳು ಸೋತವೋ,
ಪಾದ ಪಟ್ಟಿಗಳನ್ನು ಮಾಡುತಲೇ
ಯಾರು ಹರಿದ ರಟ್ಟುಗಳಾದರೋ
ಯಾರು ತಮ್ಮ ಕೈಗಳಿಂದ
ಪುಸ್ತಕಗಳನ್ನು ಬರೆದರೋ,
ಹೊಲದೆದೆಯ ತುಂಬ ಹಸಿರು ತುಂಬಿ
ಯಾರು ಉಸಿರ ಕಳಕೊಂಡರೋ
ಹಾದಿ ಬೆಳಕು ಮೂಡಿಸಿದ ಯಾರನ್ನು
ಹಾದಿಗತ್ತಲು ನುಂಗಿತೋ
ಅವರದೇ ಈ ರಕ್ತ
ನಮ್ಮ ನಿಮ್ಮೆಲ್ಲರದು
ಮನುಷ್ಯನದು.

ಆದರೆ -
ಕೂಸು ಕಳಕೊಂಡ
ಕರುಳಿನ ಕಣ್ಣೀರಿನ ಹನಿ
ಯಾವ ಧರ್ಮದ್ದೆಂದು ತಿಳಿಯಲಾರೆ ನಾನು?
ಗಾಯಗಳಿಗೆ
ಮುಲಾಮು ಮುಡಿಸಲು ಬಲ್ಲೆ
ಸ್ಫೋಟಗೊಂಡ ಚೀತ್ಕಾರಗಳಿಗೆ
ಯಾವ ಮುಲಾಮು ಬಳಿಯಲಿ ಇಲ್ಲಿ
ನಿಗಿನಿಗಿಸುವ ಭಾರತದ ರಸ್ತೆಯಲ್ಲಿ?

- ಪಿ.ಆರ್. ವೆಂಕಟೇಶ್ ಮಾಗಳ

(ನಿರುಪಮ್ ದತ್‌ರವರ ಆಂಗ್ಲ ಕವನದ ಭಾವಾನುವಾದ

ಇತಿಹಾಸದ ಪುಟಗಳಿಂದ

ಕಮ್ಯುನಿಸ್ಟ್ ಪಾರ್ಟಿ ನಿಷೇಧಕ್ಕೊಳಗಾಗಿದ್ದ ಸಂದರ್ಭ... 1949-50ರ ಸಮಯ...ಕಮ್ಯುನಿಸ್ಟ್ ಕಾರ್ಯಕರ್ತರಿಗೆ ಭೂಗತರಾಗಿ ಸಂಘಟಿಸುತ್ತಿದ್ದ (ಕಾರ್ಗತ್ತಲ ಕಾಲ.... ಪ್ರತಿದಿನವೂ ಊರಿಂದೂರಿಗೆ ರಾತ್ರೋರಾತ್ರಿ ಪಯಣ.ಅಲ್ಲಿ ಯಾರಾದರೂ ಸಂಗಾತಿಗಳ ಮನೆಯಲ್ಲಿ "ಆಶ್ರಯ" (ಷೆಲ್ಟರ್) ವ್ಯವಸ್ಥೆ... ಒಂದು ದಿನ

ಇರ್ಲಿ ಬಿಡಿ, ಇನ್ನೂ ಮೂರು ದಿನ

ಹೀಗಾಯಿತು...., ಸಂಗಾತಿ ನಾಯವಾರ್ ಕಣ್ಣಾನೂರು ಜಿಲ್ಲೆಯ ಒಂದು ಊರಿಗೆ ಬರುವ ವ್ಯವಸ್ಥೆಯಾಗಿತ್ತು. ಆ ದಿನ ರಾತ್ರಿ ಷೆಲ್ಟರ್‌ಗೆ ಕುಂಜ್ಞಾಕಣ್ಣನ್ ಎಂಬ ಸಂಗಾತಿಗೆ ವ್ಯವಸ್ಥೆ ಮಾಡಲು ಒಪ್ಪಿಸಲಾಗಿತ್ತು. ಆದರೆ ಆ ಸಂಗಾತಿಯ ಬೇಜವಾಬ್ದಾರಿತನದಿಂದ ಆ ವ್ಯವಸ್ಥೆ ಆಗಲಿಲ್ಲ. ಸಂಗಾತಿ ನಾಯನಾರ್ ಹಾಗೂ ಮತ್ತೊಬ್ಬ ಸಂಗಾತಿ ಬಂದೇ ಬಿಟ್ಟರು. ಪರಿಸ್ಥಿತಿ ಪೇಚಿಗಿಟ್ಟುಕೊಂಡಿತು. ಕಮ್ಯುನಿಸ್ಟರನ್ನು ಕಂಡರೆ ಸಾಕು ಗಬಕ್ಕನೆ ಹಿಡಿದು ಹಾಕಲು ಪೋಲೀಸ್ ಸಮೂಹ ಗಸ್ತು ಹೊಡೆಯುತ್ತಿತ್ತು. ರಾತ್ರಿ ಪೂರ್ತಿ ಷೆಲ್ಟರ್‌ಗಾಗಿ ಕೇಳಿ ಕೇಳಿ ಪರದಾಟ...

'ಸ್ವಾಮಿ' ನಾಯನಾರ್ ಬಂದಿದ್ದಾರೆ, ಇವತ್ತೊಂದು ರಾತ್ರಿ ಷೆಲ್ಟರ್‌ವ್ಯವಸ್ಥೆಮಾಡಿ', ಜೊತೆಗೆ ಬಂದಿದ್ದ ಸಂಗಾತಿ ಕೇಳಿದ.

'ಅಯ್ಯಯ್ಯೋ,...., ಸಾಧ್ಯವಿಲ್ಲ....' ಎಂಬ ಉದ್ಗಾರ ಕೊನೆಗೆ ರಾತ್ರಿ ಪೂರ್ತಿ ಸುತ್ತಿದರೂ 'ಷೆಲ್ಟರ್' ಸಿಗಲಿಲ್ಲ. ಸೂರ್ಯ ಮೇಲೇರುತ್ತಾ ಬರುತ್ತಿದ್ದಾನೆ.... ಬೆಳಕರಿದರೆ ನಾಯನಾರ್ ಜೈಲಿಗೆ ಸೇರುತ್ತಾರೆ..... ಕೊನೆಗೆ ಒಬ್ಬರೈತನ ಮನೆಗೆ ನಾಯನಾರ್ ಮತ್ತು ಜೊತೆಯ ಸಂಗಾತಿ ಹೋದರು. 'ಸ್ವಾಮಿ, ಇವತ್ತೊಂದು ದಿನ ನಾಯನಾರ್‌ರವರು ಮನೆಯಲ್ಲಿರುತ್ತಾರೆ. ದಯವಿಟ್ಟು ಅವಕಾಶ ಕೊಡಿ ಸಂಜೆ ಬಂದು ಕರೆದೊಯ್ಯುತ್ತೇನೆಎಂದು ಜೊತೆಯಲ್ಲಿದ್ದ ಸಂಗಾತಿ ಕೇಳಿದರು.

'ಹೇ.. ಸಾಧ್ಯವಿಲ್ಲ... ಸಾಧ್ಯವಿಲ್ಲ... ನೀವು ಕಮ್ಯುನಿಸ್ಟರು ನಿಮ್ಮ ಸಹವಾಸ ಮಾಡಿದ ವರುಂಟೇ..!' ಎಂದು ರೈತನಅಂಬೋಣ.

ಎಷ್ಟು ಗೋಜಲಾಡಿದರೂ ರೈತ ಒಪ್ಪಲಿಲ್ಲ. ಕೊನೆಗೆ ಒಂದು ನಿರ್ಧಾರಕ್ಕೆ ಬಂದೇ ಬಿಟ್ಟರು.

'ನೋಡಪ್ಪ, ನೀನೇನೇ ಹೇಳಿದರೂ ನಾವು ಹೊರಗೆ ಹೋಗೋಲ್ಲ. ಏನು ಬೇಕಾದರೂ ಮಾಡಿಕೋ. ಪೋಲೀಸರಿಗೆ ತಿಳಿಸಿದರೆ ನಮ್ಮಿಬ್ಬರ ಜೊತೆಗೆ ನಿನ್ನನ್ನೂ ಎಳೆದುಕೊಂಡು ಹೋಗಲಿ.....!' ಎನ್ನುತ್ತಾ ಒಳ ಕೋಣೆ ಹೊಡೇ ಬಿಟ್ಟರು.

ರೈತ ತಬ್ಬಿಬ್ಬು!

ಕೊನೆಗೆ ಬೇರೆ ದಾರಿಯಿಲ್ಲದೆ ರೈತ ಸುಮ್ಮನಾದ. ನಾಯನಾರ್‌ರವರನ್ನು ಬಿಟ್ಟು ಜೊತೆಯಲ್ಲಿದ್ದ ಸಂಗಾತಿ ತಮ್ಮ ಮನೆಗೆ ಹೋಗಿ ಬೇರೆ ಷೆಲ್ಟರ್ ವ್ಯವಸ್ಥೆ ಮಾಡಿ ನಾಯನಾರ್ ರೈತನ ಮನೆಗೆ ಹೋದರು.. ರೈತ ಹೇಳಿದ, ಇರಲಿ ಬಿಡಿ, ಇನ್ನೂ ಮೂರುದಿನ ನಮ್ಮಮನೆಯಲ್ಲೆ.!

ಈ ಸಂಗಾತಿಗೆ ಆಶ್ಚರ್ಯ!

ಕೇವಲ ಒಂದು ದಿನದ ಬಲವಂತದ ಷೆಲ್ಟರ್ ರೈತನನ್ನು ನಾಯನಾರ್ ಅಭಿಮಾನಿಯನ್ನಾಗಿಸಿತ್ತು.

ಇ.ಕೆ.ಎನ್. ರಾಜನ್

ಪ್ರಕಾಶ್. ಕೆ.

ಮತೀಯ ಶಕ್ತಿಗಳನ್ನೆದುರಿಸಲು ತುರ್ತುಕ್ರಮ ಅಗತ್ಯ

ಎನ್.ಕೆ.ಉಪಾಧ್ಯಾಯ

ಅಯೋಧ್ಯೆಯಲ್ಲಿ ರಾಮಜನ್ಮ ಭೂಮಿ ಮಂದಿರ ನಿರ್ಮಾಣದ "ಕರಸೇವೆ"ಯನ್ನು ವಿಶ್ವ ಹಿಂದೂ ಪರಿಷತ್ತಿನವರು ಡಿಸೆಂಬರ 6 ರಿಂದ ಮತ್ತೆ ಪ್ರಾರಂಭಿಸುವುದಾಗಿ ಸಾರಿದ್ದಾರೆ.

ಕರ ಸೇವೆಯ ಎರಡನೇ ಹಂತವು ಮೊದಲ ಹಂತದಂತೆ ಬಾರಿ ಜನ ಸಮೂಹವನ್ನು ಅಯೋಧ್ಯೆಯಲ್ಲಿ ನೆರೆಸದೆ ಪ್ರತಿ ಜಿಲ್ಲೆಯಿಂದ ಕರ ಸೇವಕರ ಒಂದೊಂದು ಗಂಪು ಸರದಿಯ ಮೇಲೆ ಅಯೋಧ್ಯೆಗೆ ತೆರಳಿ ಕರ ಸೇವೆಯಲ್ಲಿ ತೊಡಗುವುದೆಂದೂ, ಸರಕಾರದಿಂದ ಅದಕ್ಕೆ ಅಡ್ಡಿ ಉಂಟಾದರೆ ಸತ್ಯಾಗ್ರಹ ನಡೆಸಲಾಗುವುದು ಎಂದು ವಿಶ್ವ ಹಿಂದೂ ಪರಿಷತ್ತಿನ ಮುಖಂಡರು ಸಾರಿದ್ದಾರೆ. ಮಾತ್ರವಲ್ಲ ಸತ್ಯಾಗ್ರಹ ನಿರಂತರವಾಗಿ ನಡೆಯುವುದಂತೆ. ಅಂದರೆ ಅದರರ್ಥ ಚಂದ್ರಶೇಖರ ಅವರ ಸರಕಾರ ಹೆಚ್ಚು ದಿವಸ ಬರುವುದಿಲ್ಲ. ಇನ್ನು ಕೆಲವೇ ತಿಂಗಳಲ್ಲಿ ಲೋಕಸಭೆ ಚುನಾವಣೆ ಬರುತ್ತದೆ. ಅಲ್ಲಿಯ ತನಕ ಹಿಂದೂ ಕೋಮುವಾದೀ ಭಾವನೆಯನ್ನು ಉದ್ರೇಕಗೊಳಿಸುತ್ತಾ ಸಾಗಿ ಚುನಾವಣೆ ಬಂದಾಗ ಅದನ್ನು ಮತಗಳಾಗಿ ಪರಿವರ್ತಿಸಿ ಅಧಿಕಾರ ಹಿಡಿಯುವ ಹೊಂಚು ಹೂಡಿದಾರೆ ವಿಶ್ವ ಹಿಂದೂ ಪರಿಷತ್, ಆರ್.ಎಸ್.ಎಸ್. ಮತ್ತು ಭಾರತೀಯ ಜನತಾ ಪಾರ್ಟಿ ಹಾಗೂ ಭಜರಂಗದಳ ಮೊದಲಾದ ಕೋಮುವಾದಿ ಶಕ್ತಿಗಳು.

ಅಕ್ಟೋಬರ್ 30 ರಂದು ಕರ ಸೇವೆ ಮೂಲಕ ಬಾಬರಿ ಮಸೀದಿ ಕೆಡವಿ ರಾಮಮಂದಿರ ನಿರ್ಮಾಣ ಮಾಡುವ ಕುಕೃತ್ಯಕ್ಕೆ ದೇಶದ ಮೂಲೆ ಮೂಲೆಗಳಿಂದ ಕರ ಸೇವಕರನ್ನು ಅಯೋಧ್ಯೆಯತ್ತ ಸಾಗಿಸಿ ಉತ್ತರ ಪ್ರದೇಶ ಸರಕಾರದ ಬಿಗಿ ಭದ್ರತೆಯಿಂದಾಗಿ ಕರಸೇವೆ ಮಾಡಲು ಅವಕಾಶ ಸಿಗದೆ ನಿರಾಶರಾಗಿ ಬಾಲ ಮಡಚಿಕೊಂಡು ಹಿಂದಿರುಗಿದ ಕರ ಸೇವಕರು ತಮ್ಮ

> ಉತ್ತರ ಪ್ರದೇಶ ಸರಕಾರದ ಬಿಗಿ ಭದ್ರತೆಯಿಂದಾಗಿ ಕರ ಸೇವೆ ಮಾಡಲು ಅವಕಾಶ ಸಿಗದೆ ನಿರಾಶರಾಗಿ ಬಾಲ ಮಡಚಿಕೊಂಡು ಹಿಂದಿರುಗಿದ ಕರ ಸೇವಕರು ತಮ್ಮ ಪೌರುಷವನ್ನು ಪ್ರದರ್ಶಿಸಲು ಅಯೋಧ್ಯೆಯಲ್ಲಿ ಅವಕಾಶ ಸಿಗದಿದ್ದುದರಿಂದ, ಕೆಲವರು ಅದನ್ನು ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳಲ್ಲಿ ತೋರ್ಪಡಿಸಲು ಹೊರಟಿರುವಂತೆ ಕಂಡು ಬರುತ್ತದೆ.

ಪೌರುಷವನ್ನು ಪ್ರದರ್ಶಿಸಲು ಅಯೋಧ್ಯೆಯಲ್ಲಿ ಅವಕಾಶ ಸಿಗದಿದ್ದುದರಿಂದ, ಕೆಲವರು ಅದನ್ನು ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳಲ್ಲಿ ತೋರ್ಪಡಿಸಲು ಹೊರಟಿರುವಂತೆ ಕಂಡು ಬರುತ್ತದೆ.

ಅಯೋಧ್ಯೆಯಲ್ಲಿ ಕರಸೇವಾ ಕಾರ್ಯಕ್ರಮ ವಿಫಲಗೊಂಡ ಹಿನ್ನೆಲೆಯಲ್ಲಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹೆಚ್ಚು ಜನಸಂಪರ್ಕವಿಲ್ಲದ ಪ್ರದೇಶಗಳಲ್ಲಿರುವ ಈದ್‌ಗಾ ಈದ್ ಹಬ್ಬದಲ್ಲಿ ಊರಿನಿಂದ ದೂರ ಪ್ರದೇಶದಲ್ಲಿ ಪ್ರಾರ್ಥಿಸಲು ಮುಸ್ಲಿಮರು ಬಳಸುವ ಸ್ಥಳ ಕೆಡವಿ ಹಾಕುವ, ಅವುಗಳನ್ನು ಧಕ್ಕೆಗೊಳಿಸುವಂಥ ನೀಚ ಕೆಲಸ ನಡೆದಿದೆಯೆಂಬ ವರದಿಗಳನ್ನು ದಿನನಿತ್ಯ ಪತ್ರಿಕೆಗಳಲ್ಲಿ ಬರಲಾರಂಭಿಸಿ ನೂರಕ್ಕೂ ಹೆಚ್ಚು ಮಸೀದಿಗಳಿಗೆ ಧಕ್ಕೆಯಾಗಿದೆಂದು ತಿಳಿದು ಬರುತ್ತದೆ.

ಆನೆ ಕಲ್ಲಿನ ಶಾಸಕ ಎಂ.ವಿ. ಕೇಶವ ಮೂರ್ತಿಯವರು ತಾಲೂಕಿನಾದ್ಯಂತ ಪ್ರವಾಸ ಮಾಡಿ ಗಲಭೆಗಳಲ್ಲಿ ಪ್ರಾರ್ಥನಾ ಸ್ಥಳಗಳಿಗೆ ಉಂಟಾದ ಹಾನಿಯನ್ನು ಪರಿಶೀಲಿಸಿದರು. ಬಿಲ್ಲು ವರದನಹಳ್ಳಿ, ಶಿಕಾರಿಪಾಳ್ಯ, ಗೊಲ್ಲಹಳ್ಳಿ, ಸರ್ಜಾಪುರ, ಜಿಗಣಿ ಮುಂತಾದೆಡೆ ದುಷ್ಕರ್ಮಿಗಳು ಪ್ರಾರ್ಥನಾ ಸ್ಥಳಗಳನ್ನು ಒಡೆದಿರುವುದನ್ನು ಗಮನಿಸಿದ ಶಾಸಕರು ಈ ಘಟನೆಗಳಿಗಾಗಿ ವಿಷಾದಿಸಿ ಕೋಮು ಸೌಹಾರ್ದವನ್ನು ಕಾಪಾಡಲು ಎಲ್ಲರೂ ಶ್ರಮಿಸಬೇಕೆಂದು ಮನವಿ ಮಾಡಿದರು" (ಕ.ಪ್ರ.ದಿ.9)

"ಹೊಸ ಕೋಟೆ ತಾಲೂಕಿನಲ್ಲಿ ಒಂದು ಕೋಮಿಗೆ ಸೇರಿದ ನಾಲ್ಕು ಪ್ರಾರ್ಥನಾ ಮಂದಿರವನ್ನು ದುಷ್ಕರ್ಮಿಗಳು ಹಾಳು ಮಾಡಿದ ಘಟನೆ ಸೋಮವಾರ ರಾತ್ರಿ ನಡೆದಿದೆ. ಗಿಡ್ಡಪ್ಪನ ಹಳ್ಳಿ, ಕೆ. ಶೆಟ್ಟಿಹಳ್ಳಿಯ ಪ್ರಾರ್ಥನಾ ಮಂದಿರಕ್ಕೆ ಜಖಂ ಆಗಿದ್ದರೆ, ತಮ್ಮ ರಸನಹಳ್ಳಿ ಹಾಗೂ ಸಿದ್ಧನ ಹಳ್ಳಿಯ ಪ್ರಾರ್ಥನಾ ಮಂದಿರಗಳನ್ನು ಪೂರ್ಣ ಹಾಳುಮಾಡಲಾಗಿದೆ. ಕೋಮುಸಾಮರಸ್ಯ ಕೆಡಿಸಲು ಹೊರಗಿನ ದುಷ್ಕರ್ಮಿಗಳು ಕೈ ಗೊಂಡ ಕಾರ್ಯವಿದೆಂದು ಗ್ರಾಮಸ್ಥರು ತಿಳಿಸಿದ್ದಾನೆ. ಎರಡು ಪ್ರಾರ್ಥನಾ ಮಂದಿರ ಸೂಲಿ ಬೆಲೆ ಹೋಬಳಿಗೂ ಮಿಕ್ಕೆರಡು ನಂದ ಗುಡಿ ಹೋಬಳಿಗೂ ಸೇರಿವೆ. ಇವುಗಳ ಮಧ್ಯೆ ಬಹಳಷ್ಟು ಅಂತರವಿದೆ. ಆದರೂ ಎಲ್ಲಾ ನಾಲ್ಕು ಪ್ರಾರ್ಥನಾ ಮಂದಿರಗಳನ್ನು ಒಂದೇ ರಾತ್ರಿಯಲ್ಲಿ ಹಾಳು ಮಾಡಿರುವುದು ದುಷ್ಕರ್ಮಿಗಳ ಯೋಜಿತ ಕಾರ್ಯ ಎನ್ನಲಾಗಿದೆ." (ಕ.ಪ್ರ.ದಿ.9)

ಇದೇ ರೀತಿ ಕೋಲಾರ ಚಿಕ್ಕಮಗಳೂರು, ದ.ಕ. ಜಿಲ್ಲೆ ಮತ್ತಿತರ ಕಡೆಗಳಲ್ಲೂ ನಡೆದಿವೆ ಎಂಬ ಸುದ್ದಿ ಬರುತ್ತಿದೆ. ಹಾಳಾದವುಗಳಿರಲಿ ಚಾಲ್ತಿಯಲ್ಲಿರುವವುಗಳಿರಲಿ ದರ್ಗಾ ಮಸೀದಿಗಳನ್ನು ಭಗ್ನ ಗೊಳಿಸಬೇಕು, ಕೆಡವ ಬೇಕೆಂಬ ಬಿಜೆಪಿಯಂಥ ಮತೀಯ ಸಂಘಟನೆಗಳು ನಿರ್ಧರಿಸಿದಂತೆ ಕಂಡು ಬರುತ್ತದೆ. ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ ಸಿಂಘಾಲ ಅವರು 3000ಮಸೀದಿಗಳನ್ನು ನೆಲಸಮ ಮಾಡಲು 10 ಲಕ್ಷ ಹಿಂದೂ ಕರ ಸೇವಕರ ಸೈನ್ಯ ನಿರ್ಮಿಸುವ ಭಯತೋರಿಸಿದ್ದಾನೆ.

ಅಯೋಧ್ಯೆಯಲ್ಲಿ ಮಸೀದಿಯ ಮೇಲೆ ಏರಿ ಹೋಗಿರುವುದು ರಾಜಶಕ್ತಿಇರುವ (ಸರಕಾರದ ಅಧಿಕಾರದ)ಲೋಕಶಕ್ತಿಗೆ ಅಂದರೆ ಜನತೆಯ ಬಲಕ್ಕೆ ಸಿಕ್ಕಿದ ವಿಜಯವೆಂದೂ ಸಾರಿದ್ದಾನೆ ಮಾತ್ರವಲ್ಲ ಮಿಲಿಟೆಂಟ್ ಹಿಂದುಗಳು ಸರಕಾರದ ವಿರುದ್ಧ ಬಂಡೆದ್ದು ತಮ್ಮ ಹಕ್ಕು ಪ್ರತಿಪಾದನೆ ಮಾಡಬಹುದೆಂದೂ ಅಂಥ ಸಂದರ್ಭದಲ್ಲಿ ಸರಕಾರ ಜನತೆಯ ಹಿತರಕ್ಷಣೆಗಾಗಿ, ಕಾಯಿದೆ ಕಾನೂನು ಪಾಲನೆಗಾಗಿ ಕ್ರಮ ಕೈಗೊಂಡರೆ ಅದನ್ನು ಮತ್ತೊಂದು ಜಲಿಯನ್ ಭಾಗ ಎಂದು ಕರೆಯಬಹುದೆಂಬ ಅಭಿಪ್ರಾಯ ಹೊಂದಿದವರಾಗಿದ್ದಾರೆ. ಇದಕ್ಕೆ ಪೂರಕವಾಗಿಯೆ ಅಕ್ಟೋಬರ್ 30 ಘಟನೆಗಳ ಕಾವು ಆರುವ ಮುಂಚಿತವಾಗಿಯೇ ವಿಶ್ವ ಹಿಂದು ಪರಿಷತ್ತಿನವರು ತಮ್ಮ ಎರಡನೇ ಹಂತದ ಕಾರ್ಯಕ್ರಮವಾಗಿ ಒಂದು ಲಕ್ಷಕೂ ಹೆಚ್ಚು ಅಸ್ಥಿ ಕಳಸಯಾತ್ರೆ ಹಾಗು ನವೆಂಬರ್ 28 ರಂದು ದೇಗುಲ ಶುದ್ಧೀಕರಣ ಕಾರ್ಯಕ್ರಮಗಳನ್ನು ಯೋಜಿಲಾಗಿದೆ. ಕರ ಸೇವೆಗೆ 10 ಲಕ್ಷಕ್ಕೂ ಹೆಚ್ಚು

ಪುಟ 6ಕ್ಕೆ

ನಿಮ್ಮ ಪ್ರಶ್ನೆ - ನಮ್ಮ ಉತ್ತರ

? ಭಾರತದಲ್ಲಿಯ ಸಮಾಜ-ವರ್ಗ ವ್ಯವಸ್ಥೆಯನ್ನು ಸಿ.ಪಿ.ಐ(ಎಂ) ಪಕ್ಷ ಅರ್ಥೈಸುವುದಕ್ಕೂ ಲೋಹಿಯಾವಾದಿಗಳು ಅರ್ಥೈಸುವುದಕ್ಕೂ ನಡುವಿನ ಅಂತರ ವಿವರಿಸಿ.

–ಸುರೇಶ ಎಂ. ತಾಂಡೇಲ, ಹೊನ್ನಾವರ.

ಸಿ.ಪಿ.ಐ.(ಎಂ) ಭಾರತದ ವರ್ಗವ್ಯವಸ್ಥೆಯ ಬಗ್ಗೆ ಸ್ಪಷ್ಟತಿಳುವಳಿಕೆ ಹೊಂದಿದೆ. ಈ ತಿಳುವಳಿಕೆಯ ಪ್ರಕಾರ ಗುತ್ತೆದಾರಿ ಬಂಡವಾಳ ವರ್ಗ ಮತ್ತು ಭಾರಿ ಭೂಮಾಲಕ ವರ್ಗಗಳ ಮೈತ್ರಿ ಕೂಟ ಭಾರತದ ಆಳುವ ವರ್ಗ. ಇತರ ಎಲ್ಲಾ ವರ್ಗಗಳು-ಕಾರ್ಮಿಕ ವರ್ಗ, ವಿವಿಧ ಶ್ರೇಣಿಯ ರೈತರ ವರ್ಗಗಳು, ಮಧ್ಯಮ ವರ್ಗ, ಮತ್ತು ಸಣ್ಣ ಬಂಡವಾಳಶಾಹಿಗಳ ಹಿತಾಸಕ್ತಿಗಳ ವಿರುದ್ಧ ಈ ವರ್ಗ ಆಡಳಿತ ನಡೆದಿದೆ. ಈ ವರ್ಗ ಆಡಳಿತಕ್ಕೆ ಸವಾಲು ನಮ್ಮ ರಾಜಕೀಯದ ತಿರುಳು.

ಲೋಹಿಯಾವಾದಿಗಳು ಭಾರತದ ಸಮಾಜವನ್ನು ವರ್ಗ ದೃಷ್ಟಿಯಿಂದ ನೋಡುವುದೇ ಇಲ್ಲ ಎಂಬುದೇ ಪ್ರಮುಖ ಅಂತರ. ಅವರು ಭಾರತದ ಸಮಾಜ ವ್ಯವಸ್ಥೆಯ ಪ್ರಮುಖ ಲಕ್ಷಣ ಜಾತಿಪದ್ಧತಿ ಎಂದು ಹೇಳುತ್ತಾರೆ. ಆದ್ದರಿಂದ ಜಾತಿಪದ್ಧತಿಯ ವಿರುದ್ಧ ಹೋರಾಟ, ಜಾತಿಗಳ ವಿನಾಶ ಅವರ ಮುಖ್ಯ ಗುರಿ. ಆದರೆ ಈ ಬಗೆಗೂ ಅವರಿಗೆ ಸ್ಪಷ್ಟ, ವೈಜ್ಞಾನಿಕ ತಿಳುವಳಿಕೆ ಇಲ್ಲ. ಭಾರತದ ಜಾತಿಪದ್ಧತಿಯ ಆರ್ಥಿಕ ಆಯಾಮದ ಬಗ್ಗೆ ಅವರು ಮರೆತು ಬಿಡುತ್ತಾರೆ. ಬರಿಯ ಸಾಮಾಜಿಕ ಆಯಾಮಗಳಿಗೆ ಒತ್ತು ನೀಡುತ್ತಾರೆ. ಆದ್ದರಿಂದಲೇ ಜಾತಿವಿನಾಶದ ಅವರ ಕ್ರಮಗಳು-ಅಂತರ್ಜಾತೀಯ ಮದುವೆ, ಹಿಂದುಳಿದ ಜಾತಿಗಳಿಗೆ ಮೀಸಲಾತಿ ಮುಂತಾದ ಸುಧಾರಣಾವಾದಿ ಕ್ರಮಗಳಿಂದ ಮುಂದೆ ಹೋಗುವುದಿಲ್ಲ. ಆದ್ದರಿಂದ ಅವರ ಆರ್ಥಿಕ ಕಾರ್ಯಕ್ರಮಗಳು ಗಾಂಧಿವಾದ (ಅಥವಾ ಕಾಂಗ್ರೆಸ್‌ನ 'ಸಮಾಜವಾದಿ' ಕಾರ್ಯಕ್ರಮ)ಕ್ಕಿಂತ ಮುಂದೆ ಹೋಗುವುದಿಲ್ಲ. ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ, ಆರ್ಥಿಕ ವಿಕೇಂದ್ರೀಕರಣ ಹಳ್ಳಿಯ ಸ್ವಯಂಪರಿಪೂರ್ಣತೆಗೆ ಒತ್ತು ಮಂತಾದವು ಇಂದಿನ ಆಳುವ ವರ್ಗಗಳ ವರ್ಗ ಆಡಳಿತವನ್ನು ಪ್ರಶ್ನಿಸುವಂತಹದ್ದಲ್ಲ.

ಭಾರತದ ಸಮಾಜ ವ್ಯವಸ್ಥೆ (ಜಾತಿ ವ್ಯವಸ್ಥೆ ಸೇರಿದಂತೆ)ಯಲ್ಲಿ ಬಂಡವಾಳಶಾಹಿ ಬೆಳವಣಿಗೆಯಿಂದ ಆಗುತ್ತಿರುವ ಬದಲಾವಣೆಗಳ ಪರಿಕಲ್ಪನೆಯೇ ಲೋಹಿಯಾವಾದಿಗಳಿಗೆ ಇಲ್ಲ. ಭಾರತದಲ್ಲಿ ವರ್ಗ ಹೋರಾಟ ಅರ್ಥಹೀನ ಪರಿಕಲ್ಪನೆ ಎಂದು ಅವರ ವಾದ. ಇದನ್ನು ಸಿ.ಪಿ.ಐ. (ಎಂ)ಒಪ್ಪುವುದಿಲ್ಲ. ಜಾತಿಪದ್ಧತಿ ಇದ್ದಿಗೂ ಭಾರತದಲ್ಲಿ ಜೀವಂತವಾಗಿರುವುದು, ಅದರ ಜೀವನ ಸೆಲೆಯಾದ ಪಾಳೆಯಗಾರಿ ಪದ್ಧತಿ ಇನ್ನೂ ಬದುಕಿರುವುದರಿಂದ. ಪಾಳೆಯಗಾರಿ ಭೂಸಂಬಂಧಗಳ ವಿರುದ್ಧ ಎಲ್ಲಾ ಜಾತಿಯ ರೈತರು ಒಗ್ಗಟ್ಟಿನ ಆರ್ಥಿಕ ಹೋರಾಟ ನಡೆಸದೆ ಮತ್ತು ಆ ಮೂಲಕ ವರ್ಗವಾಗಿ ರೂಪುಗೊಳ್ಳದೆ, ಜಾತಿವಿನಾಶ ಸಾಧ್ಯವಿಲ್ಲ ಎಂದು ಸಿ.ಪಿ.ಐ.(ಎಂ)ನ ನಿಲುವು. ಈ ಹೋರಾಟದಲ್ಲಿ ಲೋಹಿಯಾವಾದಿಗಳು ಪ್ರತಿಪಾದಿಸುವ ಸಾಮಾಜಿಕ ಸುಧಾರಣಾ ಕ್ರಮಗಳಿಗೂ ಒಂದು ಸ್ಥಾನವಿದೆ. ಆದರೆ ಅದೇ ಸಮಾಜದ ಆಮೂಲಾಗ್ರ ಬದಲಾವಣೆ ತರಬಲ್ಲುದು ಎಂಬ ಲೋಹಿಯಾವಾದಿ ಭ್ರಮೆಯನ್ನು ಸಿ.ಪಿ.ಐ.(ಎಂ) ಒಪ್ಪುವುದಿಲ್ಲ.

ಲೋಹಿಯಾವಾದ ಯುರೋಪಿನಲ್ಲಿ 20ನೇ ಶತಮಾನದ ಆದಿಯಲ್ಲಿ ಸಮಾಜವಾದಿಚಳುವಳಿಯಲ್ಲಿ ಹುಟ್ಟಿದ ಮಾರ್ಕ್ಸ್‌ವಾದಕ್ಕೆ ವಿರೋಧಿಯಾದ ಸುಧಾರಣಾವಾದಿ ಬಲಪಂಥದ ಭಾರತೀಯ ರೂಪ. ವರ್ಗ ಹೋರಾಟವನ್ನು ನಿರಾಕರಿಸುವುದು ಈ ಪಥದ ಪ್ರಮುಖ ಲಕ್ಷಣ. ಭಾರತದಲ್ಲಿ ಜಾತಿ ವ್ಯವಸ್ಥೆಯ ಹೆಸರು ಹೇಳಿ ವರ್ಗ ಹೋರಾಟವನ್ನು ತಿರಸ್ಕರಿಸುವುದು, ಅದರ ವಿಶಿಷ್ಟ ಭಾರತೀಯ ಅವತಾರ. ಯುರೋಪಿನಲ್ಲಿ ಈ ಬಲಪಂಥದ ವರ್ಗ ಆಧಾರ ಸುಧಾರಣಾವಾದಿ ಕಾರ್ಮಿಕ ವರ್ಗದ ಭಾಗಗಳು ಮತ್ತು ಮಧ್ಯಮ ವರ್ಗಗಳು. ಭಾರತದಲ್ಲಿ ಲೋಹಿಯಾವಾದ ಪುಟ್ಟಬೂರ್ಜ್ವಾ, ಮಧ್ಯಮವರ್ಗಗಳ ಸಿದ್ಧಾಂತ. ಈ ಸಿದ್ಧಾಂತ ಮಧ್ಯಮ ಮತ್ತು ಕೆಳಜಾತಿಗಳ ಜನಸಮೂಹಕ್ಕೆ ಕೆಲವು ಪ್ರದೇಶಗಳಲ್ಲಿ ಕೆಲವು ಸಮಯಗಳಲ್ಲಿ ಆಕರ್ಷಕವೆನಿಸಿದೆ. ಇಂದು ಲೋಹಿಯಾವಾದದ ಆಧಾರದ ಮಾಯವಾಗಿದೆ. ಲೋಹಿಯಾವಾದಿಗಳು ಎಂದು ಕರೆದುಕೊಳ್ಳುವ ವ್ಯಕ್ತಿಗಳು ಹಲವು ಬೂರ್ಜ್ವಾಪಕ್ಷಗಳಲ್ಲಿ ಹರಿಹಂಚಿಹೋಗಿದ್ದಾರೆ. ಇದಕ್ಕೆ ಲೋಹಿಯಾವಾದ ಭಾರತದ ಸಮಾಜ ವ್ಯವಸ್ಥೆಯ ವಿಶ್ಲೇಷಣೆಗೆ ಒಂದು ವೈಜ್ಞಾನಿಕ ಕಣ್ನೋಟ ಒದಗಿಸದಿರುವುದೇ ಕಾರಣ. ಭಾರತದ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ವರ್ಗ-ಆಧಾರಿತ ವಿಶ್ಲೇಷಣೆ ಅಪ್ರಸ್ತುತ ಎಂದು ಡಂಗುರ ಸಾರುತ್ತಿದ್ದ ಲೋಹಿಯಾವಾದವೇ ಅಪ್ರಸ್ತುತ ಎಂದು ಭಾರತದ ರಾಜಕೀಯ ಚರಿತ್ರೆ ತೀರ್ಪು ಕೊಟ್ಟಿದೆ. ಅದೇ ಅವಧಿಯಲ್ಲಿ ಸಿ.ಪಿ.ಐ.(ಎಂ) ದೇಶದ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದೇ ಪಕ್ಷದ ಕಣ್ನೋಟ ಸರಿಯಾಗಿದೆ ಎನ್ನುವುದಕ್ಕೆ ಪುರಾವೆ.

ಒಡೆದ ಇಟ್ಟಿಗೆಗಳನ್ನು ಜೋಡಿಸಿ ಒಡೆಯದ ಮನಸ್ಸುಗಳನ್ನು ಗಟ್ಟಿಗೊಳಿಸಿದರು

ದೇಶಕ್ಕೆ ಮಾದರಿಯಾಗಬಲ್ಲ ಹಳ್ಳಿಯೊಂದರ ಅಪೂರ್ವ ಪ್ರಸಂಗ

ಕೋಲಾರ ಜಿಲ್ಲೆಯ ಚಿಂತಾಮಣಿ ಗಡಿಗವಾರಹಳ್ಳಿ ಎಂಬ ಗ್ರಾಮ ಒಂದಿದೆ. ಸುಮಾರು 300 ಮನೆಗಳಿರುವ ಈ ಗ್ರಾಮದಲ್ಲಿ ಮುಸ್ಲಿಮರ ಮನೆಗಳು ಒಂದು ನೂರು. ಕೃಷಿಯೇ ಪ್ರಧಾನ ಕಸುಬಾಗಿರುವ ಈ ಗ್ರಾಮದಲ್ಲಿ ಹಿಂದು ಮುಸ್ಲಿಂರ ಮಧ್ಯೆ ಯಾವುದೇ ವ್ಯತ್ಯಾಸವನ್ನು ಕಾಣಲು ಸಾಧ್ಯವಿಲ್ಲ. ಎಷ್ಟೋ ಮುಸ್ಲಿಂಯೇತರ ಜನರಿಗೆ ಉರ್ದು ಮಾತನಾಡಲು ಬಂದರೆ ಇನ್ನೂ ಕೆಲವು ಮುಸ್ಲಿಮರಿಗೆ ಉರ್ದು ಸರಿಯಾಗಿ ಮಾತನಾಡಲು ಬರುವುದಿಲ್ಲ. ಇವರೆಲ್ಲರ ಬಳಕೆಯ ಭಾಷೆ ತೆಲುಗು. ನೂರಾರು ವರ್ಷಗಳಿಂದ ಹಿಂದು, ಮುಸ್ಲಿಂಎನ್ನುವ ಭೇದ ಭಾವವಿಲ್ಲದೆ ಹಿಂದುಗಳು ದೇವರಾದ ಉಗ್ರ ನರಸಿಂಹನ ಈ ಜಾತ್ರೆನಡೆದರೆ ರಥವನ್ನು ಎಳೆಯುವುದರಿಂದ ಎಲ್ಲ ಕೆಲಸಗಳಲ್ಲಿ ಮುಸ್ಲಿಂ ಯುವಕರು ಮಂಚೂಣಿಯಲ್ಲಿ, ಅದೇ ರೀತಿ ಮುಸ್ಲಿಂ ಭಾವಯ್ಯನ ಜಾತ್ರೆ ಆದರೆ ಜಾತ್ರೆಗೆ ಬೇಕಾದ ಎಲ್ಲಾ ಸಹಾಯ, ಸಹಕಾರ ನೀಡುವುದರ ಜೊತೆಗೆ ಪೂರ್ಣವಾಗಿ ಆ ಸಂತೋಷದ ಸನ್ನಿವೇಶದಲ್ಲಿ ಹಿಂದುಗಳು ಭಾಗವಹಿಸುತ್ತಿದ್ದರು. ಯಾವುದೇ ಕಾರಣಗಳಿಗಾಗಿ ಈ ಮೇಲಿನ ಜಾತ್ರೆಗಳು ನಿಲ್ಲಿಸಿದರೆ ಇವುಗಳನ್ನು ನಡೆಸಬೇಕೆಂದು ಹಲವಾರು ಸಾರಿ ಹಿಂದು ಮುಸ್ಲಿಂ ಯುವಕರುಗಳು ಬಹಿರಂಗ ಪ್ರಯತ್ನ, ಒತ್ತಾಯಗಳು ನಡೆಯುತ್ತಿದ್ದವು.

ಹೀಗೆ ಸುಮಧುರ ಸಾಮರಸ್ಯದಿಂದ ಪಾಪ್ಪಿ, ಮನುಷ್ಯರೆಂದು ಬಾಳುವೆ ನಡೆಸುತ್ತಿದ್ದ ಈ ಊರಿನ ಚರಿತ್ರೆಗೆ ಮಸಿ ಬಳಿಯಲು ನಿರಂತರ ಪ್ರಯತ್ನ ಮಾಡುತ್ತಿದ್ದ, ಪಕ್ಕದ ಹಳ್ಳಿಯ ಆರ್.ಎಸ್.ಎಸ್. ಚಡ್ಡಿಗಳ ಕುತಂತ್ರ, ದೇಶದಾದ್ಯಂತ ಬಿ.ಜೆ.ಪಿ. ಆರ್.ಎಸ್.ಎಸ್ ವಿ.ಹೆಚ್.ಪಿ.ಗಳು ಶ್ರೀರಾಮ ಮಂದಿರ ನಿರ್ಮಾಣದ ಹೆಸರಿನಲ್ಲಿ ನಡೆಸುತ್ತಿರುವ ಮುಗ್ಧ ಜನರ ಕೊಲೆಯ ರಾಜಕೀಯದ ಪ್ರೇರಣೆ ಮತ್ತು ಹಲವು ಪಟ್ಟಭದ್ರ ಹಿತಾಸಕ್ತಿಗಳ ಬೆಂಬಲದೊಂದಿಗೆ ಕೆಲವು ಮುಗ್ಧ ಯುವಕರಿಂದ ತಾ: 31.10.90 ರ ರಾತ್ರಿ ತಮ್ಮ ಊರಿನ ಮಸೀದಿ ಕಟ್ಟೆಯನ್ನು ಒಡೆಸುವುದರ ಮೂಲಕ ಮೇಲುಗೈ ಸಾಧಿಸಲು ಪ್ರಯತ್ನ ನಡೆಸಿದರು.

ಆದರೆ ಈ ವಿಷಯವನ್ನು ತಿಳಿದ ಗ್ರಾಮಸ್ಥರು ಅದರಲ್ಲೂ, ಜಾತ್ಯಾತೀತತೆಯಲ್ಲಿ ಬಲವಾಗಿ ನಂಬಿಕೆಯಿಟ್ಟುಕೊಂಡಿರುವ ಜನ ಈಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ ನೂರಾರು ವರ್ಷಗಳಿಂದ ನಡೆಸುತ್ತಿದ್ದ ಸಾಮರಸ್ಯದ ಬದುಕನ್ನು ನಾಶಮಾಡಲು ಕೆಲವು ದುಷ್ಟ ಶಕ್ತಿಗಳ ಈ ಆಟವನ್ನು ನಡೆಯಲು ಬಿಡಬಾರದೆಂದು ತೀರ್ಮಾನಿಸಿದರು. ಮಸೀದಿ ಕಟ್ಟೆಯ ಇಟ್ಟಿಗೆಗಳನ್ನು ಒಡೆದಂತೆ ಊರಿನ ಜನರ ಮನಸ್ಸುಗಳನ್ನು ಒಡೆಯಲು ಅವಕಾಶ ಮಾಡಿಕೊಡಬಾರದು ಮಾತ್ರವಲ್ಲ ಹಿಂದು ಮುಸ್ಲಿಂ ಎಲ್ಲರೂ ಸೇರಿ ಮಸೀದಿ ಇಟ್ಟಿಗೆಗಳನ್ನು ಜೋಡಿಸುವುದರ ಮೂಲಕ ಒಡೆಯದ ಮನಸ್ಸುಗಳನ್ನು ಇನ್ನಷ್ಟು ಗಟ್ಟಿಗೊಳಿಸಲು ತೀರ್ಮಾನಿಸಿ ಊರಿನ ಹಿಂದು-ಮುಸ್ಲಿಂ ಯುವಕರು ಸೇರಿ ಮಸೀದಿಯನ್ನು ನಾಲ್ಕೈದು ದಿನಗಳಲ್ಲಿ ನಿರ್ಮಾಣ ಮಾಡಿಯೇ ಬಿಟ್ಟರು.

ಈ ಪ್ರಸಂಗವನ್ನು ತಿಳಿದ ಹಲವಾರು ಗಣ್ಯರು, ಅಧಿಕಾರಿಗಳು, ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟು, ಈ ಗ್ರಾಮದ ಆದರ್ಶವನ್ನು ದೇಶದಲ್ಲಿ, ಮಸೀದಿ-ಮಂದಿರಗಳನ್ನು ಕೆಡಹುವ ಮಾತುಗಳನ್ನಾಡುವ ದೇಶ ನಾಯಕರು ಪಾಲಿಸಿದ್ದೇ ಆದರೆ ದೇಶದ ಅತ್ಯಂತ ಅಪಾಯಕರ ಸದ್ಯದ ಪರಿಸ್ಥಿತಿಯಲ್ಲಿ ಪಡೆಯಬಹುದಿತ್ತಲ್ಲ ಎಂದು ಉದ್ಗಾರ ತೆಗೆದರು.

ಆದರೆ ದೇಶದ ಕೋಟ್ಯಾಂತರ ಜನರ ಧಾರ್ಮಿಕ ನಂಬಿಕೆಗಳನ್ನು ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಬಳಸಿ ಶ್ರೀ ರಾಮ ಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆಗಳನ್ನು ಜೋಡಿಸುವ ಹೆಸರಿನಲ್ಲಿ ದೇಶವನ್ನು ಛಿದ್ರ ಛಿದ್ರಮಾಡಿಯಾದರೂ ಅಧಿಕಾರಕ್ಕೆ ಬರಲು ಪ್ರಯತ್ನ ಮಾಡುತ್ತಿರುವ ಬಿ.ಜೆ.ಪಿ. ಆರ್.ಎಸ್.ಎಸ್. ವಿ.ಹೆಚ್.ಪಿ. ನಾಯಕ ಶಿಖಾಮಣಿಗಳಿಗೆ ಗಡಿಗವಾರ ಹಳ್ಳಿಯ ಜನರಲ್ಲಿರುವಷ್ಟು ಸಾಮಾನ್ಯ ಪ್ರಜ್ಞೆ, ಮಾನವೀಯ ಮೌಲ್ಯಗಳು ಇಲ್ಲದಿರುವುದು ವಿಷಾದನೀಯ. ಈ ಘಟನೆಯ ಮಹತ್ವವನ್ನು ಮುಸ್ಲಿಂ ಮೂಲಭೂತವಾದಿಗಳೂ ಸಹ ಅರ್ಥಮಾಡಿಕೊಳ್ಳಬೇಕು.

ಮಸೀದಿ ಒಡೆದ ನಂತರದ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ನನಗೆ, ಜನರ ಅಭಿಪ್ರಾಯಗಳು ಮತ್ತು ಈ ಸಮಸ್ಯೆಯ ಬಗ್ಗೆ ಎರಡು ಕೋಮಿನ ಜನ ತೋರಿಸಿದ ರಚನಾತ್ಮಕ ಪ್ರತಿಕ್ರಿಯೆಗಳನ್ನು ನೋಡಿ ತುಂಬಾ ಸಂತೋಷವಾಯಿತು ಮತ್ತು ಇಂತಹ ಜನರೇ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವಾಗ ದೇಶದ ಐಕ್ಯತೆ-ಸಮಗ್ರತೆಯನ್ನು ನಾಶ ಮಾಡಲು ಬಿ.ಜೆ.ಪಿ. ಆರ್.ಎಸ್.ಎಸ್. ಮುಸ್ಲಿಂ ಮೂಲಭೂತವಾದಿಗಳಂತಹ ದೇಶ ವಿಭಜಕ ಶಕ್ತಿಗಳ ಆಟ ಸಾಗುವುದಿಲ್ಲವೆಂಬ ನಂಬಿಕೆಯೊಂದಿಗೆ ಸಮಾಧಾನ ಪಟ್ಟುಕೊಂಡೆ.

– ಜೆ.ಸಿ. ಬಯ್ಯಾರೆಡ್ಡಿ

ಜಿಲ್ಲಾ ಪರಿಷತ್ ವ್ಯವಸ್ಥೆಯ ಹೃದಯದ ಮೇ

ರಾಜ್ಯದ ಕಾಂಗ್ರೆ ಸರ್ಕಾರ ಅದರಲ್ಲಿಯೂ ಪೂರ್ಣ ಸಂಪುಟದ ಪೂರ್ಣದೇಹ ಪಡೆಯದಿರುವ ಇತ್ತೀಚಿನ ಬಂಗಾರಪ್ಪನವರ ಸರ್ಕಾರ ಜಿಲ್ಲಾ ಪರಿಷತ್ತುಗಳ ಅಂಗಗಳನ್ನು ಊನ ಮಾಡ ಹೊರಟಿದ್ದಾರೆ. ಇಂದು ಕೈಗಳನ್ನು ನಾಳೆ ಕಾಲುಗಳನ್ನು ಮತ್ತೊಂದುದಿನ ಮತ್ತೊಂದು ಭಾಗವನ್ನು ಕತ್ತರಿಸುತ್ತಾ ನಡೆದಿರುವ ಸ್ವತಃ ಅಂಗ ಹೀನ ಸರ್ಕಾರ ಜಿಲ್ಲಾ ಪರಿಷತ್ ವಿಧೇಯಕಕ್ಕೇ ತಿದ್ದುಪಡಿ ತಂದು ಅದರ ಹೃದಯಕ್ಕೇ ನೇರ ಕೊಡಲಿಪೆಟ್ಟು ಹಾಕಲು ಹೊರಟಿದೆ. ದೇಶದ ಪ್ರಜಾಸತ್ತೆಯ ಕೈಕಾಲುಗಳನ್ನು ಒಂದೊಂದಾಗಿ ಮುರಿಯುತ್ತಾ ತುರ್ತುಪರಿಸ್ಥಿತಿಯ ಸಮಯದಲ್ಲಿ ಹೃದಯಕ್ಕೆ ಲಗ್ಗೆಹಾಕಿದ ಕಾಂಗ್ರೆನ ಮೂಲಗುಣವನ್ನು ಪ್ರದರ್ಶಿಸಿರುವ ಈ ದುಷ್ಟ ಕೃತ್ಯದ ಬಗ್ಗೆ ಒಂದು ಲೇಖನ.

ದಬ್ಬಾಳಿಕೆ ಮಾದರಿ ಉಳಿದುಕೊಂಡಿರುವ ಸರ್ವಾಧಿಕಾರಿ ಗುಣ ಇಂದಿರಾಗಾಂಧಿಯ ಹುಟ್ಟುಗುಣ. ಆಕೆ ಬಲಿದಾನವಾಗಿ ಹೋದರು. ಇನ್ನು ಪ್ರಜಾಸತ್ತೆಗೆ ಯಾವ ಆತಂಕವೂ ಇಲ್ಲ. ಅದರಲ್ಲಿಯೂ ಆಧುನಿಕ ಶಿಕ್ಷಣ ಪಡೆದ ರಾಜೀವ್ ಗಾಂಧಿ ಅಧಿಕಾರಕ್ಕೆ ಬಂದಿದ್ದಾರೆ ಆದ್ದರಿಂದ ದೇಶದ ಪ್ರಜಾಸತ್ತೆಗೆ ಯಾವ ಭಯವೂ ಇಲ್ಲ ಎಂದು ಅನೇಕರು ಕನಸುಕಟ್ಟಿದ್ದರು. ಪತ್ರಿಕೆ ಭಾಷಣಗಳ ಮೂಲಕ ದೇಶದ ಜನತೆಯಲ್ಲಿ ಅದನ್ನು ಬಿತ್ತುತ್ತಾ ಜನರೆಲ್ಲ ಅದೇ ಮಂಪರಿನಲ್ಲಿ ಮುಳುಗುವಂತೆ ಮಾಡಿದರು. ಆದರೆ ಅದು ಇಂದಿರಾಗಾಂಧಿ-ರಾಜೀವ್ ಗಾಂಧಿಯ ಪ್ರಶ್ನೆಯಲ್ಲ. ಎಂಬುದು ಭಾರತದ ಪ್ರಜಾಸತ್ತೆಯ ಮೇಲೆ ರಾಜೀವ್‌ಗಾಂಧಿ ಎಸಗಿದ ಒಂದೊಂದು ಆಘಾತದಿಂದಲೂ ಅರಿವಾಯಿತು. ಕಾಂಗ್ರೆನ ಈ ಕ್ರಮಗಳಿಂದ ದೇಶದಲ್ಲೆಡೆಯೆದ್ದ ಅಸಮಧಾನದ ಹೊಗೆ ರಾಜೀವ್ ಗಾಂಧಿಯವರನ್ನೂ ಕಾಂಗ್ರೆಯನ್ನೂ ಕೇಂದ್ರದ ಅಧಿಕಾರದಿಂದ ಹೊರದೂಡಿದೆ. ಕೇವಲ ಕೈಬೆರಳೆಣಿಕೆಯಷ್ಟು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್(ಐ) ಏನಾದರೂ ಬುದ್ಧಿ ಕಲಿತಿದೆಯೆ? ಅದರ ಸರ್ವಾಧಿಕಾರಿ ಗುಣ ಮಸಕಾಗಿದೆಯೇ? ಕರ್ನಾಟಕದಲ್ಲಿ ಕಾಂಗ್ರೆ ಆಡಳಿತದ ಪರಿನೋಡಿದರೆ, ಸ್ಪಷ್ಟವಾಗುತ್ತದೆ ಈ ಗುಣ ಕಾಂಗ್ರೆಯನ್ನು ಬಿಟ್ಟಿಲ್ಲ. 43 ವರ್ಷಗಳ ಕಾಲ ನಿರಂತರವಾಗಿ ಅಧಿಕಾರವನ್ನನುಭವಿಸಿದ ಮದ ತಲೆಯಿಂದಿಳಿದಿಲ್ಲ ಎಂದು.

ಜನತಾ ಆಳ್ವಿಕೆಯಲ್ಲಿ ಜಿಲ್ಲಾ ಪರಿಷತ್ ವಿಧೇಯಕ ಚರ್ಚೆ ನಡೆಸಲಾರಂಭಿಸಿದಂದಿನಿಂದಲೇ ಕಾಂಗ್ರೆ ಪಕ್ಷ ಕೆಂಗಣ್ಣಿನಿಂದ ನೋಡಲಾರಂಭಿಸಿತ್ತು. ವಿಧಾನಸಭೆ ಅದನ್ನು ಸರ್ವಾನುಮತದಿಂದ ಅಂಗೀಕರಿಸಿ ರಾಷ್ಟ್ರಪತಿಗಳ ಅಂಗೀಕಾರಕ್ಕೆ ಕಳುಹಿಸಿದ ಬಹುಕಾಲದವರೆಗೆ ಕಾಂಗ್ರೆ ಸರ್ಕಾರ ಅದಕ್ಕೆ ಅಂಗೀಕಾರ ನೀಡಲು ಅನುವು ಮಾಡಿ ಕೊಡಲಿಲ್ಲ. ಕೊನೆಗೂ ಜಿಲ್ಲಾ ಪರಿಷತ್ ಚುನಾವಣೆಗಳು ನಡೆದು ಅದು ತನ್ನ ಪೂರ್ಣ ಪ್ರಮಾಣದ ಕೆಲಸ ಆರಂಭಿಸಿದ ಮೇಲಂತೂ ಕಾಂಗ್ರೆ ಶಾಸಕರುಗಳು ತಹತಹಿಸಲಾರಂಭಿಸಿದರು. ವಿಶಾಲವಾದ ವಿಧಾನ ಸಭಾ ಕ್ಷೇತ್ರದಲ್ಲಿ ತಮ್ಮ ದರ್ಬಾರಿಗೆ ಬಂದ ಈ ಕುತ್ತಿನಿಂದ ಅವರು ನಿರ್ವಿಣ್ಣರಾದರು.

ಬಹಳ ಮಟ್ಟಿಗೆ ಜಿಲ್ಲಾ ಕೇಂದ್ರಗಳಲ್ಲಿ ಹಲವೊಮ್ಮೆ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿಯೇ ಕಟ್ಟಿರುವ ತಮ್ಮ ಆಧುನಿಕ ಅರಮನೆಗಳಿಂದ ಹೊರಟು ತಮ್ಮ ಕ್ಷೇತ್ರಗಳ ಜನರಿಗೆ ದರ್ಶನ ದಯಪಾಲಿಸಲು ಮನಸ್ಸು ಮಾಡಿ ತಾಲೂಕು ಕೇಂದ್ರಕ್ಕೆ ಬಂದಿಳಿದಾಗ ಐ.ಬಿ.ಟಿ.ಬಿ.ಗಳಲ್ಲಿ ಕಾದು ಕುಳಿತಿರುತ್ತಿದ್ದ ಅಧಿಕಾರಿ ವೃಂದವೆಲ್ಲಾ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಅವರು ತಮಗೆ 'ಮರ್ಯಾದೆ ಕೊಡುತ್ತಾರೋ ಇಲ್ಲವೋ? ಎಂಬ ಆತಂಕ ಒಂದು ಕಡೆ. ತಾವು ಕ್ಷೇತ್ರಕ್ಕೆ ಹೋಗಿ ಹುಕುಂ ನೀಡುವ ಸಮಯಬರುವವರೆಗೂ ಕಾದು ಕುಳಿತಿರುತ್ತಿದ್ದ ಅಭಿವೃದ್ಧಿ ಕಾರ್ಯಗಳು-ಈ ಊರಿನ ಶಾಲೆ ಆ ಊರಿನ ರಸ್ತೆ ಸೇತುವೆ ಮತ್ತೊಂದು ಊರಿನ ಆಸ್ಪತ್ರೆಯ ನಿರ್ಮಾಣಗಳು-ಈಗ ತಮ್ಮ ಬೆನ್ನ ಹಿಂದೆ ತಮಗೂ ಗೊತ್ತಿಲ್ಲದಂತೆ ನಡೆದು ಹೋಗಿವೆ, ಹೋಗುತ್ತಿವೆ. ಅಧಿಕಾರಿಗಳನ್ನು ಕೇಳಿದರೆ ಜಿಲ್ಲಾ ಪರಿಷತ್ ಸದಸ್ಯರ ಅಭಿಪ್ರಾಯದಂತೆ, ಮಂಡಲ ಪಂಚಾಯತಿಯ ತೀರ್ಮಾನದಂತೆ ಆಗಿದೆ ಎನ್ನಲಾರಂಭಿಸಿದ್ದಾರೆ. ತಾವೇನೂ ಹೇಳಿದರೂ ಜಿ.ಪ.ಸದಸ್ಯರ ಮಂಡಲದ ಅಭಿಪ್ರಾಯ ಬೇಕು ಅದರಂತೆ ಆಗಿದೆ ಎನ್ನಲಾರಂಭಿಸಿದ್ದಾರೆ. ತಾವೇನೂ ಹೇಳಿದರೂ ಜಿ.ಪ.ಸದಸ್ಯರ ಮಂಡಲದ ಅಭಿಪ್ರಾಯ ಬೇಕು ಅದರಂತೆ ನಡೆಯಬೇಕಾಗಿದೆ ಎನ್ನುತ್ತಿದ್ದಾರೆ. ತಮ್ಮ ಹುಕುಮಿಗೆ ಬೆಲೆಯೇ ಇಲ್ಲವಾಗಿದೆ ಇವೆಲ್ಲಕ್ಕಿಂತ ಮಿಗಿಲಾಗಿ ತಾವು ಉತ್ಸವ ಮೂರ್ತಿಯಾಗಿ ಹೋಗಿ ದರ್ಶನ ನೀಡದಿದ್ದರೆ ತಾವು ಕುಳಿತ ಮೂಲ ಸ್ಥಾನಕ್ಕೆ ಯಾತ್ರೆ ಒಂದು ಪೂಜೆ ಪುನಸ್ಕಾರಗಳನ್ನೂ ಮಾಡಿ ದಕ್ಷಿಣೆ ಸಲ್ಲಿಸಿ ತಮ್ಮ ಕೆಲಸದ ಸಾಧನೆಗಾಗಿ ಗೋಗರೆಯುತ್ತಿದ್ದ ಜನರಂತೂ ಹೆಚ್ಚು ಕಮ್ಮಿ ಮಾಯವಾಗಿದ್ದಾರೆ ತಾವೇ ಪದೇ ಪದೇ ಹೋಗಿ ಉತ್ಸವ ಹೊರಟರೂ ದಕ್ಷಿಣೆ 'ಕೊಡುವವರಿರಲಿ ಪೂಜೆ ದಕ್ಕುವುದು ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯನ್ನು ಯಾರು ಸಹಿಸಿಕೊಂಡಾರು? ಮುಂದಿನ ಚುನಾವಣೆಗಳಲ್ಲಿ ತಮ್ಮ ಚುನಾವಣೆಗಳಲ್ಲಿ ತಮ್ಮ ಅಜ್ಜ ಮುತ್ತಜ್ಜನ ಆಸ್ತಿಯಿಂದ ಮಾಡಿಸಿದವರೆಂಬಂತೆ ತಾವು ಅಲ್ಲಿ ಶಾಲೆ ಕಟ್ಟಿಸಿ ಕೊಟ್ಟಿದ್ದೇನೆ. ಇಲ್ಲಿ ಸೇತುವೆ ಮಾಡಿಸಿದ್ದೇನೆ ಓಟುಕೊಡಿ . ಎಂದು ಕೇಳದಿದ್ದರೆ ಗೆಲ್ಲುವುದಾದರೂ ಹೇಗೆ ಎಂದು ಕಾಂಗ್ರೆ ಶಾಸಕರು ಪರಿತಪಿಸುತ್ತಿದ್ದರು.

ಕಾಂಗ್ರೆ ಪಕ್ಷ ಅಧಿಕಾರಕ್ಕೆ ಬರುವುದೇ ತಡ ಹೊಟ್ಟೆಯಲ್ಲಿಯೇ ಇಟ್ಟುಕೊಂಡಿದ್ದ ಕಹಿಯನ್ನೆಲ್ಲಾ ಕಾರಲಾರಂಭಿಸಿದರು. ಅಧಿಕಾರ ' ವಿಕೇಂದ್ರೀಕರಣದ ಫಲವಾಗಿ ಶಾಸಕರ ಮಾತಿರಲಿ ಮಂತ್ರಿಗಳ ಕುರ್ಚಿಗೆ ಅನಿವಾರ್ಯವಾಗಿ ಪ್ರದಕ್ಷಿಣೆ ಹಾಕುತ್ತಿದ್ದ ಜನರ ಸಂಖ್ಯೆಯೂ ಕಡಿಮೆಯಾಗಿದ್ದು ಅವರ ಅಧಿಕಾರದಾಹಕ್ಕೆ ನುಂಗಲಾರದ ತುತ್ತಾಯಿತು. ಅದರಲ್ಲಿಯೂ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿರಾಜ್ ಸಚಿವರಾದ ಬಸವಲಿಂಗಪ್ಪನವರು ದಿನ ಬೆಳಗಾದರೆ ಒಂದೊಂದು ವಿಷಯವನ್ನೆತ್ತಿಕೊಂಡು ಕಿಡಿ ಕಾರಲಾರಂಬಿಸಿದರು. ಚುನಾಯಿತ ಜಿಲ್ಲಾ ಪರಿಷತ್ತುಗಳನ್ನು ಮೀರಿ ಅದರ ಕೈ ಕೆಳಗಿದ್ದ ಅಧಿಕಾರಿಗಳ ಮೂಲಕ ತಮ್ಮ ಅಧಿಕಾರ ಚಲಾಯಿಸಲಾರಂಭಿಸಿದರು. ಅಧಿಕಾರಿ ವರ್ಗಾವಣೆ ಮಾಡಲು ಸಿಬ್ಬಂದಿ ನೇಮಕ ಮಾಡಲು ಜಿಲ್ಲಾ ಪರಿಷತ್‌ಗಳಿಗೆ ಅಧಿಕಾರವಿಲ್ಲ ಎಂದು ಸುತ್ತೋಲೆ ಹೊರಡಿಸಿದರು. ಜಿಲ್ಲಾ ಪರಿಷತ್ತುಗಳ ಆದೇಶಗಳನ್ನು ಮಾನ್ಯ ಮಾಡಬೇಡಿ ಎಂಬುದೇ ಅವರ ನೇರ ಹಾಗೂ ಮರೆಯ ಮಾತುಗಳ ಒಟ್ಟು ಸಂದೇಶವಾಗಿತ್ತು. ಇವರ ವಿರುದ್ಧ ಜಿಲ್ಲಾ ಪರಿಷತ್ತು ಅಧ್ಯಕ್ಷರುಗಳ ಗಟ್ಟಿಯಾದ ಧ್ವನಿ ಜನತೆಯ ಅಭಿಪ್ರಾಯ ಬಸವಲಿಂಗಪ್ಪನವರ ವಿರುದ್ಧ ತಿರುಗಲಾರಂಭಿಸಿದಾಗ ವೀರೇಂದ್ರಪಾಟೀಲರು

ಮಂಡಲ-ಮಂದಿರ-ಮಸೀದಿ

ಹಿಂದೂ ಮೇಲ್ಜಾತಿಯ ಸಣ್ಣ ಗುಂಪಿನ ಪ್ರಾಬಲ್ಯ ಉಳಿಸುವ ಯತ್ನ

'ವರ್ಣಾಶ್ರಮ ಧರ್ಮಕ್ಕಾಗಿ ಆಹುತಿ ಮಾಡಿಕೊಂಡ ಪ್ರತಿಯೊಂದು ಜೀವಕ್ಕೆ ಹಿಂದೂ-ಮುಸ್ಲಿಮರ ನಡುವಿನ ಘರ್ಷಣೆಗೆ ಬಲಿಯಾದ ಪ್ರತಿಯೊಂದು ಜೀವಕ್ಕಿಂತ 75 ಪಟ್ಟು ಹೆಚ್ಚು ಬೆಲೆ-ಇಂಡಿಯನ್ ಎಕ್ಸ್‌ಪ್ರೆಸ್ ದೃಷ್ಟಿಯಲ್ಲಿ ಇನ್ನೊಂದು ದೊಡ್ಡ ಬಂಡವಾಳಶಾಹೀ ಪತ್ರಿಕೆ ಟೈಸ್‌ಆಫ್ ಇಂಡಿಯಾದ ದೃಷ್ಟಿಯಲ್ಲಿ 60ಪಟ್ಟು ಹಾಗೂ ಮತ್ತೊಂದು ಇಂಗ್ಲಿಷ್ ದೊಡ್ಡ ದೈನಿಕ 'ಹಿಂದೂ' ದೃಷ್ಟಿಯಲ್ಲಿ 35 ಪಟ್ಟು.

ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಅಕ್ಟೋಬರ್ 21 ಹಾಗೂ 28 ರಲ್ಲಿ ಪ್ರಕಟವಾದ ಒಂದು ವಿಶ್ಲೇಷಣೆಯಿಂದ ತಿಳಿದು ಬಂದ ಅಂಶ ಇದು.

ಕಳೆದ ವರ್ಷ ಕೋಮುವಾದಿಗಳು ಪರಿಸ್ಥಿತಿಯನ್ನು ಉಲ್ಬಣಿಸಲು ಮಾಡಿದ ಶ್ರೀರಾಮ ಇಟ್ಟಿಗೆ ಪೂಜೆಗಳಿಂದಾಗಿ ರಾಜಸ್ಥಾನದ ಕೋಟಾ, ಉತ್ತರ ಪ್ರದೇಶದ ಬದಾಯೂಂ, ನಂತರ ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ್, ಬಿಹಾರ್‌ಗಳಲ್ಲಿ, ಕರ್ನಾಟಕದ ಹೊಸಪೇಟೆಗಳಲ್ಲಿ ತೀವ್ರ ಕೋಮುಗಲಭೆಗಳು ನಡೆದವು. ಪತ್ರಿಕೆಗಳ ಪ್ರಕಾರವೇ ಅಕ್ಟೋಬರ್1 ಹಾಗೂ ನವಂಬರ್ 17,1989 ನಡುವೆ (47 ದಿನಗಳಲ್ಲಿ) 300 ಕ್ಕೂ ಹೆಚ್ಚು ಜೀವಗಳು ಬಲಿಯಾದವು

ಈ ವರ್ಷ ಮಂಡಲ್ ಆಯೋಗದ ವರದಿಯ ಅನುಷ್ಠಾನದ ಘೋಷಣೆ ಮಾಡಿದ ಕೂಡಲೇ ಆರಂಭವಾದ ಮೀಸಲಾತಿ ವಿರೋಧಿಚಳುವಳಿಗಳಲ್ಲಿ ಸುಮಾರು 'ಆತ್ಮಾಹುತಿ'ಯೆಂಬ ಕೊಲೆ, ಆತ್ಮಹತ್ಯೆಗಳೂ ಸೇರಿದಂತೆ ಆಗಸ್ಟ್ 15 ರಿಂದ ಸೆಪ್ಟೆಂಬರ್ 30ರ ನಡುವೆ (47 ದಿನಗಳಲ್ಲಿ) 50 ಜೀವಗಳು ನಷ್ಟವಾದವು. ಇವೆರಡೂ ಘಟನೆಗಳಿಗೆ ನಮ್ಮ ದೇಶದ ಮೂರು ದೊಡ್ಡ ಬಂಡವಾಳಶಾಹೀ ಪತ್ರಿಕೆ ಗಳು ಎಷ್ಟೆಷ್ಟು ಪ್ರಚಾರನೀಡಿವೆ ಎಂದು ಕಾಲಂ. ಸೆಂಟಿಮೀಟರ್ (ದಿನಪತ್ರಿಕೆಯ ಒಂದು ಪುಟದಲ್ಲಿ 360 ಕಾಲಂ.ಸೆಂಮೀ. ಸುದ್ದಿಯಿರುತ್ತದೆ)ನಲ್ಲಿ, ಕೋಷ್ಟಕ-1 ರಲ್ಲಿ ಕೊಡಲಾಗಿದೆ.

ಇದು 47 ದಿನಗಳ ಎರಡು ಭಿನ್ನ ಅವಧಿಗಳ ಹೋಲಿಕೆಯಾದರೆ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 4 ರ ನಡುವೆ 'ರಥಯಾತ್ರೆ'ಯಪರಿಣಾಮವಾಗಿ ಗೊಂಡಾ, ಉದಯಪುರ್, ಕೋಲಾರ, ಚನ್ನಪಟ್ಟಣ, ಬರೋಡಾ ಮತ್ತಿತರ ಕಡೆ 70 ಕ್ಕೂ ಹೆಚ್ಚು ಜೀವಹಾನಿಯಾದಾಗ ಅದೇ ಸಮಯದಲ್ಲಿ ಮೀಸಲಾತಿ ವಿರೋಧಿ ಚಳುವಳಿಯ ಪ್ರಭಾವ ಇನ್ನೂ ಕುಗ್ಗಿದ್ದರೂ ಮಂಡಲ್-ವಿರೋಧಿಗಳ ಬೊಬ್ಬೆಯೂ ಇತ್ತು. ಇವೆರಡು ಘಟನೆಗಳಿಗೆ ಇವೇ ಪತ್ರಿಕೆಗಳು ಎಷ್ಟೆಷ್ಟು ಮಹತ್ವನೀಡಿವೆ ಎಂಬುದನ್ನು ಕೋಷ್ಟಕ 2 ರಲ್ಲಿ ನೋಡಬಹುದು.

ಮೀಸಲಾತಿ-ವಿರೋಧಿ ಚಳುವಳಿಗಾರರು ಪತ್ರಿಕೆಗಳಲ್ಲಿ ಹೆಸರು ಗಿಟ್ಟಿಸಲು ರಸ್ತೆಗಳಲ್ಲಿ ಬೂಟ್‌ಪಾಲಿಶ್‌ಗೆ, ದೋಭಿಘಾಟ್‌ನಲ್ಲಿ ಬಟ್ಟೆ ಒಗೆಯುವ ಪ್ರದರ್ಶನದಲ್ಲಿ ತೊಡಗಿದ್ದ 'ಆತ್ಮಾಹುತಿ'ಯ ಚಿತ್ರಗಳನ್ನು ದೊಡ್ಡದಾಗಿ ಪ್ರಕಟಿಸಿದ ಈ ಪತ್ರಿಕೆಗಳು, ತಮ್ಮ ಚಳುವಳಿಯ ಬಹುಪಾಲು ಸಮಯದಲ್ಲಿ ಸಾರ್ವಜನಿಕ ಆಸ್ತಿ-ಪಾಸ್ತಿಗೆ ಭಾರೀ ನಷ್ಟವುಂಟು ಮಾಡಿದುರ ಚಿತ್ರಗಳನ್ನು ಸುಮಾರಾಗಿ ಪ್ರಕಟಿಸಲೇ ಇಲ್ಲ. ಕೆಲವು 'ಆತ್ಮಾಹುತಿ'ಗಳು ನಿಜವಾಗಿ ಕೊಲೆಗಳು ಎಂಬ ಸತ್ಯ ಬೆಳಕಿಗೆ ಬಂದಾಗ ಅವರ 'ಹುಮ್ಮಸ್ಸಿ'ನ ಉತ್ಸಾಹ ಅಡಗಿಯೇ ಹೋಗಿತ್ತು. ಆದರೂ ಈ ಮಂಡಲ್-ವಿರೋಧಿ ಚಳುವಳಿಗಾರರು ದೇಶವನ್ನು ಉಳಿಸುವ ವೀರಹೋರಾಟಗಾರರು ಎಂದು ಬಿಂಬಿಸಲು ಪ್ರಯತ್ನಿಸಿದರು.

'ಕಲಿಯುಗ'ದಲ್ಲಿ 'ಧರ್ಮರಕ್ಷಕ'ನ ಪಾತ್ರವನ್ನು ತನ್ನ ಮೇಲೆ ಹೇರಿಕೊಂಡ 'ಇಂಡಿಯನ್ ಎಕ್ಸ್‌ಪ್ರೆಸ್'ನ ಆಗಿನ ಸಂಪಾದಕ ಅರುಣ್ ಶೌರಿಯಂತೂ ರೈಲ್ವೇ ಅಪಘಾತಗಳು ಹೆಚ್ಚುತ್ತಿರುವುದಕ್ಕೆ ಹರಿಜನ-ಗಿರಿಜನರ ಮೀಸಲಾತಿಗೂ ಸಂಬಂಧವಿದೆಯೋ ಎಂಬಂತೆ, ಮೀಸಲಾತಿ ಮೂಲಕ ಬಂದ ಡಾಕ್ಟರುಗಳನ್ನು, ಇಂಜಿನಿಯರುಗಳನ್ನು ನಂಬಲಾಗದು ಎಂಬಂತೆ ವಾದ ಮಾಡಿದರು. ಪ್ರತಿ ವರ್ಷ ಉದ್ಯೋಗ ಬಯಸುವವರ ಸಂಖ್ಯೆ 60ಲಕ್ಷ. ಅದರಲ್ಲಿ ಸ್ಥಳೀಯ ಸಂಸ್ಥೆಗಳಿಂದ ಕೇಂದ್ರ ಸರಕಾರದವರೆಗೆ ಎಲ್ಲಾ ಸರಕಾರೀ ನೌಕರಿಗಳಲ್ಲಿ 27% ಮೀಸಲಾತಿ ಪೂರ್ಣವಾಗಿ ಪರಿಪಾಲಿಸಿದರೂ ಆಗುವ ಒಟ್ಟು ಉದ್ಯೋಗಾವಕಾಶ ಕೇವಲ 1 ಲಕ್ಷ. ಅಂದರೆ 1.7 ಶೇಕಡಾ. ಇಷ್ಟಕ್ಕೇ ಏಕೆ ಈ ದೊಡ್ಡ ಪತ್ರಿಕೆಗಳ ಬೊಬ್ಬೆ? ಅವರ ವಾದವೇ ಬೇರೆ. ಇದು ಸಂಘಟಿತ ವಲಯದ ಉದ್ಯೋಗಾವಕಾಶದ 13.2% ಹರಿಜನ-ಗಿರಿಜನರಿಗೆ ಮೀಸಲಾತಿಯನ್ನೂ ಪರಿಗಣಿಸಿದರೆ ಸಂಘಟಿತ ವಲಯದ 19.2% ಅವಕಾಶ 'ಪ್ರತಿಭಾವಂತರ' ಪಾಲಿಗೆ ಇಲ್ಲವಾಗುತ್ತದಂತೆ. ದೇಶದ ಒಟ್ಟು ಉದ್ಯೋಗ ಅವಶ್ಯಕತೆಗಳಲ್ಲಿ 5% ರಷ್ಟು ಇಲ್ಲದ ಈ ಸಂಘಟಿತ ವಲಯಕ್ಕಷ್ಟೇ ಈ ಮೀಸಲಾತಿ ವಿರೋಧಿ ವಾದ ಹೂಡುವವರು ತಮ್ಮನ್ನೇಕೆ ಮಿತಿಗೊಳಿಸುತ್ತಿದ್ದಾರೆ? ಸಂಘಟಿತ ವಲಯದಲ್ಲಿ ಕೆಲಸವೆಂದರೆ ಜನಿವಾರ ಹಾಕುವ 'ಹಿರಿಮೆ'ಗೆ ಸಮ ಎಂಬ ಭಾವನೆ ಇದರ ಹಿಂದಿಲ್ಲವೇ? ಎರಡು ಹೊತ್ತಿಗೂ ಊಟವನ್ನೂ ಕೊಡಲಾರದ ಅಸಂಘಟಿತ ವಲಯದ ಮಿಲಿಯುಗಟ್ಟಲೆ ಕೆಲಸಗಳ ಬಗ್ಗೆ ಏಕೆ ಇವರಿಗೆ ಈ ತುಚ್ಛತಾರ?

ಇನ್ನು ಕೋಮುಗಲಭೆಗಳ ಬಗ್ಗೆ ವರದಿಯಲ್ಲಂತೂ ಹಿಂದೂ-ಮುಸ್ಲಿಂ ವೈಷಮ್ಯ 'ಸಹಜ' ಸಂಗತಿಯೇನೋ ಎಂಬ ಲಘುವಾದ ಭಾವನೆ. ಆದ್ದರಿಂದ ಅದರಲ್ಲಿ ಸಾಯುವ ನೂರಾರು ಬಡಜನರ ಜೀವಗಳ ಬಗ್ಗೆಯೂ ಅಷ್ಟೇ ನಿರ್ಲಕ್ಷ್ಯ.

ಬಿ.ಜೆ.ಪಿ.ಯ 'ರಥಯಾತ್ರೆ' ಧಾರ್ಮಿಕ ಯಾತ್ರೆಯಲ್ಲ, ರಾಜಕೀಯ ಯಾತ್ರೆ. ರಾಷ್ಟ್ರೀಯರಂಗ ಸರಕಾರ ಉರುಳಿಸಲು ಮೂಲ ಕಾರಣ ಮಂಡಲ್ ಆಯೋಗದ ವರದಿಯ ಅನುಷ್ಠಾನ ಮಾಡುವ ಘೋಷಣೆಗೆ ಎಂದು ಬಿ.ಜೆ.ಪಿ. ಅಭಿಮಾನಿಗಳಿಗೂ ಈಗ ಸ್ಪಷ್ಟವಾಗಿರುವ ಸಂಗತಿ. ಏನು ಸಂಬಂಧ ಈ ಮಂಡಲ ಮಸೀದಿ ಮತ್ತುಮಂದಿರಕ್ಕೆ? ವಿ.ಪಿ.ಸಿಂಗರ ಸರ್ಕಾರ ಒಪ್ಪಿಗೆಯ ರಾಜಕಾರಣವನ್ನು ಹೊಗಳಿದ ಪತ್ರಿಕೆಗಳು ಮಂಡಲ್ ಆಯೋಗದ

ಕೋಷ್ಟಕ-1

ಮೀಸಲಾತಿ-ವಿರೋಧಿ ಚಳುವಳಿ ಮತ್ತು ಕೋಮುಗಲಭೆಗಳಿಗೆ ಪತ್ರಿಕೆಗಳು ನೀಡಿದ ಪ್ರಚಾರದ ಹೋಲಿಕೆ

ಆಗಸ್ಟ್ 15 ರಿಂದ ಸೆಪ್ಟೆಂಬರ್ 30, 1990 ರ ವರೆಗಿನ 47 ದಿನಗಳ ಅವಧಿಯಲ್ಲಿ ಮಂಡಲ್-ವಿರೋಧಿ ಚಳುವಳಿಯ ಹಾಗೂ, ಅಕ್ಟೋಬರ್ 1 ರಿಂದ ನವಂಬರ್ 17 ರ ವರೆಗಿನ 47 ದಿನಗಳ ಅವಧಿಯಲ್ಲಿ ಕೋಮುಗಲಭೆಗಳ ಸುದ್ದಿಗಳನ್ನು ಎಷ್ಟೆಷ್ಟು ಪ್ರಕಟಿಸಲಾಯಿತು-ಕಾಲಂ ಸೆಂ.ಮೀ.ಗಳಲ್ಲಿ.

ಪತ್ರಿಕೆ	ಸುದ್ದಿ ವರದಿಗಳು		ಫೋಟೋಗಳು		ಸಂಪಾದಕೀಯ
	ಮುಖ ಪುಟದಲ್ಲಿ	ಒಳ ಪುಟಗಳಲ್ಲಿ	ಮುಖ ಪುಟದಲ್ಲಿ	ಒಳ ಪುಟಗಳಲ್ಲಿ	
ಇಂಡಿಯನ್ ಎಕ್ಸ್‌ಪ್ರೆಸ್ (ನವದೆಹಲಿ)					
ಮೀಸಲಾತಿ-ವಿರೋಧಿ	1915	3311	1461	4050	168
ಕೋಮುಗಲಭೆ	610	458	50	50	70
ಟೈಂಸ್‌ಆಫ್ ಇಂಡಿಯಾ ನವದೆಹಲಿ					
ಮೀಸಲಾತಿ-ವಿರೋಧಿ	1554	3229	1158	2681	171
ಕೋಮುಗಲಭೆ	536	329	60	139	196
ದಿ ಹಿಂದೂ (ನವದೆಹಲಿ)					
ಮೀಸಲಾತಿ-ವಿರೋಧಿ	848	1412	166	666	151
ಕೋಮು ಗಲಭೆ	400	143	0	70	114

(ಫೋಟೋಗಳ ಪ್ರಭಾವ ಸುದ್ದಿ-ವರದಿಗಳಿಗಿಂತ ಇಮ್ಮಡಿ ಎಂದು ಇಟ್ಟುಕೊಂಡು ಲೆಕ್ಕ ಹಾಕಿದರೆ ಮಂಡಲ್-ವಿರೋಧಿ ಚಳುವಳಿಗೆ ಇಂಡಿಯನ್ ಎಕ್ಸ್‌ಪ್ರೆಸ್ 12.81 ಪಟ್ಟು, ಟೈಂಸ್ 9.8ಪಟ್ಟು ಹಾಗೂ ಹಿಂದೂ 5.75 ಪಟ್ಟು ಹೆಚ್ಚು ಮಹತ್ವ ನೀಡಿತು. ಜೀವಹಾನಿಯನ್ನು ಲೆಕ್ಕಹಾಕಿದರೆ ಇದು ಅನುಕ್ರಮವಾಗಿ 75.60 ಮತ್ತು 35 ರಷ್ಟು ಆಗುತ್ತದೆ.)

ಕಾಂಗ್ರೆ ದಾಳಿ

ಅವರನ್ನು ಬದಲಾಯಿಸಿದರು. ನಂತರ ಗ್ರಾಮೀಣ ಅಭಿವೃದ್ಧಿ ಸಚಿವರಾದ ಘೋರ್ಪಡೆ 'ಆಟಾಟೋಪವನ್ನು ದಬ್ಬಾಳಿಕೆಯ ಮಾತುಗಳನ್ನು ಕೈಬಿಟ್ಟರೂ ರಾಜೀವ್ ಗಾಂಧಿಯವರ ತಂತ್ರಗಳನ್ನೇ ಬಳಸಿದರು.

ವಿಭಾಗೀಯ ಮಟ್ಟದಲ್ಲಿ ಸಮಾವೇಶಗಳು ವಿಭಾಗೀಯ ಮಟ್ಟದಲ್ಲಿ ಸಮಾವೇಶಗಳು ಸಮಾಲೋಚನೆಗಳು ಅಭಿಪ್ರಾಯ ಸಂಗ್ರಹ ಎಂಬ ಹೆಸರಿನಲ್ಲಿ ಬೆನ್ನೆಯಲ್ಲಿ ಕೂದಲು ತೆಗೆದಂತೆ ಮಾತನಾಡುತ್ತಾ ಅಪ್ಪಟ ಚಿನ್ನದ ಕತ್ತಿಯಲ್ಲಿಯೇ ಜಿಲ್ಲಾ ಪರಿಷತ್ತಿನ ಬುಡವನ್ನೇ ಅಲುಗಾಡಿಸಲಾರಂಭಿಸಿದರು. ಜಿಲ್ಲಾಪರಿಷತ್ ಶಾಸನವನ್ನು ತಿದ್ದುಪಡಿ ಮಾಡುವ ಸನ್ನದ್ಧತೆ ನಡೆಸಿದರು.

ಈ ವೀರೇಂದ್ರ ಪಾಟೀಲರ ಮಂತ್ರಿಮಂಡಲ ಬದಲಾಯಿತು. ಹಿಂದುಳಿದ ಜಾತಿಗಳ ನಾಯಕ'(?) ಬಂಗಾರಪ್ಪನವರ ಸಚಿವ ಸಂಪುಟ ಅಧಿಕಾರಕ್ಕೆ ಬಂದ ಮರುದಿನವೇ ಜಿಲ್ಲಾಪರಿಷತ್‌ಗಳ ಶಾಸನ ತಿದ್ದುಪಡಿಯ ಮಾತುಗಳನ್ನೇ ಆರಂಭಿಸಿದರು.

ಒಂದು ದಿನ ಸಮಾಜಕಲ್ಯಾಣ ಇಲಾಖೆಯನ್ನು ಜಿಲ್ಲಾಪರಿಷತ್‌ಗಳ ಅಧಿಕಾರ ವಲಯದಿಂದ ಬೇರ್ಪಡಿಸುತ್ತೇವೆ ಎಂದು ಸಮಾಜಕಲ್ಯಾಣ ಇಲಾಖೆ ಸಚಿವರು ಘೋಷಿಸಿದರೆ, ಮಾರನೇ ದಿನ ಆಹಾರ ಮತ್ತಿತರ ವಸ್ತುಗಳನ್ನು ರೇಷನ್ ಮೂಲಕ ನೀಡುವ ಸಾರ್ವಜನಿಕ ವಿತರಣಾವ್ಯವಸ್ಥೆಯ ಬಗ್ಗೆ ಬಹಳ ದೂರುಗಳು ಸರ್ಕಾರಕ್ಕೆ ಬಂದಿವೆ ಆದ್ದರಿಂದ ಅದನ್ನು ಜಿಲ್ಲಾಪರಿಷತ್‌ಗಳಿಂದ ಹೊರತೆಗೆದು ಜಿಲ್ಲಾಧಿಕಾರಿಗಳ ಕೈಗೆ ಒಪ್ಪಿಸುತ್ತೇವೆ. ನೈಸರ್ಗಿಕ ವಿಕೋಪಗಳಿಗೆ ಸಂಬಂಧಿಸಿದ ಪರಿಹಾರ ಕೆಲಸಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುತ್ತೇವೆ ಎಂದು ಮಂತ್ರಿಮಂಡಲವೇ ನಿರ್ಣಯಿಸುತ್ತದೆ. ಇದಲ್ಲದೇ ಕಾಂಗ್ರೆಸ್ ಆಳ್ವಿಕೆ ಆರಂಭವಾದ ಕೂಡಲೇ ಅಸ್ತಿತ್ವಕ್ಕೆ ಬಂದ ಜಿಲ್ಲೆಗೊಬ್ಬ ಮಂತ್ರಿಯ ಜವಾಬ್ದಾರಿಕೆ, ಅವರು 20 ಅಂಶಗಳ ಕಾರ್ಯಕ್ರಮ ಅನುಷ್ಠಾನ ಸಮಿತಿಯ ಅಧ್ಯಕ್ಷತೆ ವಹಿಸುವುದು ಇತ್ಯಾದಿ ಕ್ರಮಗಳ ಮೂಲಕ ಜಿಲ್ಲಾಪರಿಷತ್‌ನ ಕೆಲಸದಲ್ಲಿ ಮಧ್ಯ ಪ್ರವೇಶಮಾಡುವುದು ಅದಕ್ಕೆ ಸಮಾನಾಂತರ ಅಧಿಕಾರಶಾಹಿ ವ್ಯವಸ್ಥೆಯನ್ನು ರಚಿಸುವುದು ಮೊದಲಾದ ಕ್ರಮಗಳಿಗೆ ಕೈ ಹಾಕಲಾಗುತ್ತಿದೆ. ಹೀಗೆ ದಿನಕ್ಕೊಂದು ಕಾಲು ಮುರಿಯುವುದು, ಕೈ ಊನಮಾಡುವುದು ಇದರಿಂದ ತೃಪ್ತಿ ಹೊಂದಿದ ಕಾಂಗ್ರೆಸ್ ಅಧಿಕಾರದಾಹ ಕೊನೆಗೆ ಜಿಲ್ಲಾಪರಿಷತ್‌ನ ಹೃದಯವನ್ನೇ ಸ್ತಬ್ಧಗೊಳಿಸುವ ಪ್ರಯತ್ನವಾಗಿ ಧಿಢೀರನೇ ಜಿಲ್ಲಾ ಪರಿಷತ್ ಶಾಸನ ತಿದ್ದುಪಡಿ ತರುತ್ತಿದೆ.

ಹೀಗೆ ಮೇಲುಜಾತಿಯ ಲಿಂಗಾಯತ ಭೂಮಾಲಕ ಮುಖ್ಯ ಮಂತ್ರಿಯಿರಲಿ ಹಿಂದುಳಿದ ಜಾತಿಯ ನವ ಶ್ರೀಮಂತ ಮುಖ್ಯಮಂತ್ರಿಯಿರಲಿ, ಹರಿಜನ ಬಸವ ಲಿಂಗಪ್ಪನವರಿರಲಿ ಪಾಳೆಯಗಾರ ಘೋರ್ಪಡೆಯವರಿರಲಿ ಕಾಂಗ್ರೆಸ್‌ನ ನೀತಿ ಅಧಿಕಾರ ವಿಕೇಂದ್ರೀಕರಣದ ಟೊಂಕ ಮುರಿಯುವ ನೀತಿ ಎಂಬುದನ್ನು ಸಾರಿದ್ದಾರೆ.

ಕೋಷ್ಟಕ -2

ಅಕ್ಟೋಬರ್ 1 ರಿಂದ 5 ರ ನಡುವೆ ದೊಡ್ಡ ಪತ್ರಿಕೆಗಳಲ್ಲಿ ಮೀಸಲಾತಿ ವಿರೋಧಿ ಚಳುವಳಿ ಮತ್ತು ಕೋಮು ಗಲಭೆಗಳ ಸುದ್ದಿಗಳ ಹೋಲಿಕೆ (ಕಾಲಂ ಸೆಂ.ಮೀ.ಗಳಲ್ಲಿ)

ಪತ್ರಿಕೆ	ಸುದ್ದಿಗಳು/ವರದಿಗಳು: ಮುಖ ಪುಟಗಳಲ್ಲಿ	ಸುದ್ದಿಗಳು/ವರದಿಗಳು: ಒಳ ಪುಟದಲ್ಲಿ	ಫೋಟೋಗಳು: ಮುಖ ಪುಟದಲ್ಲಿ	ಫೋಟೋಗಳು: ಒಳ ಪುಟದಲ್ಲಿ	ಸಂಪಾದಕೀಯ
ಇಂಡಿಯನ್ ಎಕ್ಸ್‌ಪ್ರೆಸ್ (ನವದೆಹಲಿ)					
ಮೀಸಲಾತಿ ವಿರೋಧಿ	152	349	52	166	175
ಕೋಮುಗಲಭೆಗಳು	–	153	0	0	0
ಟೈಮ್ಸ್ ಆಫ್ ಇಂಡಿಯಾ (ನವದೆಹಲಿ)					
ಮೀಸಲಾತಿ-ವಿರೋಧಿ	1111	192	0	152	0
ಕೋಮುಗಲಭೆಗಳು	38	70	0	28.5	16
ಹಿಂದೂ (ನವದೆಹಲಿ)					
ಮೀಸಲಾತಿ-ವಿರೋಧಿ	70	110	0	18	0
ಕೋಮುಗಲಭೆಗಳು	9	51	0	0	0

ವರದಿಯ ಅನುಷ್ಠಾನದ ಘೋಷಣೆಯ ನಂತರ ಏಕೆ ತಿರುಗಿ ಬಿದ್ದವು?

ಅವರು ಯಾವ 'ದೇಶದ ಹಿತಾಸಕ್ತಿ' ಬಗ್ಗೆ ಮಾತನಾಡುತ್ತಿದ್ದಾರೋ ಆ ದೇಶ'ದ ಕಲ್ಪನೆಯೇ ಮೇಲ್ಜಾತಿ ಹಿಂದೂ ದೃಷ್ಟಿಕೋನದಿಂದ ಪ್ರೇರಿತವಾದ ಕಲ್ಪನೆ.

ಹಿಂದೂ ಸಮಾಜದ ಒಟ್ಟಾರೆ ದೇಶದ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ತನ್ನಗರ್ಭದಲ್ಲಿ ಮರೆಮಾಚಲು ಯತ್ನಿಸುವ ಕಲ್ಪನೆಯಿದು ನಾವೊಂದು ದೇಶ ಎಂದಾಗ ಭೇದ ಭಾವಗಳಿಲ್ಲಾ, ತೋರುವಂತಿರಬಾರದು. ಆದರೆ ಮಂಡಲ್ ಆಯೋಗದ ವರದಿ ಈ ಕಲ್ಪನೆಯ ಟೊಳ್ಳನ್ನು ಬಯಲಿಗೆಳೆದಿದೆ. ಹಿಂದೂ ಸಮಾಜದ ಐಕ್ಯತೆಯ ಸೋಗನ್ನು ಕಿತ್ತೆಸೆದಿದೆ. ಸ್ವಾತಂತ್ರ್ಯಾನಂತರದ ಅಭಿವೃದ್ಧಿ ವಿಧಾನದ ತೀವ್ರ ಅಸಮಾನತೆಗಳನ್ನು ತೆರೆದಿಟ್ಟಿದೆ. ಒಂದು ಸಣ್ಣ ಮೇಲ್ಜಾತಿ ವಿಭಾಗ ಇಡೀದೇಶದ ಮೇಲೆ ಸೈದ್ಧಾಂತಿಕವಾಗಿಯೂ, ಬೇರೆ ರೀತಿಯಲ್ಲೂ ಪ್ರಾಬಲ್ಯ ನಡೆಸುವುದಕ್ಕೆ ಸವಾಲು ಹಾಕಿದೆ. ಆದ್ದರಿಂದಲೇ ಮೇಲ್ಜಾತಿಯ ವಿಭಾಗದ ಮುಖವಾಣಿಯಾದ ದೊಡ್ಡ ಪತ್ರಿಕೆಗಳಿಗೆ, ಅಷ್ಟೊಂದು ಕಿರಿಕಿರಿಯೆನಿಸಿ ಬೊಬ್ಬೆ ಹೊಡೆಯುತ್ತಿರುವುದು.

ದೇಶವನ್ನು ಕಟ್ಟುವಲ್ಲಿ ಇದುವರೆಗೆ ವಂಚಿತರಾದವರನ್ನು ಆಹ್ವಾನಿಸುವ ಬದಲು ದೇಶದ ಆಡಳಿತ ನಡೆಸುವುದು ಕೇವಲ ತನಗೇ ಸೇರಿದ ವಿಶೇಷ ಹಕ್ಕು ಎಂದು ಸಾಧಿಸುವಲ್ಲಿ ಪ್ರಯತ್ನ ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ತನ್ನ ರಾಷ್ಟ್ರದ ಕಲ್ಪನೆ ಉಳಿಯಬೇಕಾದರೆ ರಾಷ್ಟ್ರೀಯ ಅಲ್ಪಸಂಖ್ಯಾತರ ಮೇಲೆ ಗಮನ ಆಗತ್ಯವೆನಿಸುತ್ತದೆ ಅದಕ್ಕೆ. ಆದ್ದರಿಂದ ಕೋಮುವಾದವನ್ನೂ ಜೀವನದ ಸಾಮಾನ್ಯ ಅಂಶವಾಗಿ ಸ್ವೀಕರಿಸಲೂ ಅದು ಸಿದ್ಧವಾಗುತ್ತದೆ ಎಂದು 'ಪೀಪಲ್ಸ್ ಡೆಮೊಕ್ರಸಿಯ ಈ ಲೇಖನ ತರ್ಕಬದ್ಧವಾಗಿ ವಿಶ್ಲೇಷಿಸಿದೆ.

ಸ್ವಾತಂತ್ರ್ಯ ಹೋರಾಟ ತೆಲಂಗಾಣಾ ಹೋರಾಟದ ಮೂಲಕ

ನನ್ನ ವಿದ್ಯಾರ್ಥಿ ದಿಸೆಯಲ್ಲಿ ಭಾರತ ಸ್ವಾತಂತ್ರ್ಯ ಹೋರಾಟವು ಒಳ್ಳೇ ರಭಸದಿಂದ ನಡೆದಿತ್ತು. ಸವದತ್ತಿಯಲ್ಲಿ ಎ.ವಿ.ಸ್ಕೂಲದ ಐದನೇ ಕ್ಲಾಸಿನಲ್ಲಿ ನಾನು ಓದುತ್ತಿದ್ದೆ. "ಚಲೇಜಾವ್" ಚಳುವಳಿ 1942 ನಮ್ಮ ಜಿಲ್ಲೆಯಲ್ಲಿ ಆಗಿನ ಮುಂಬಯಿ ರಾಜ್ಯದಲ್ಲಿಯೇ ಉಗ್ರವಾಗಿ ನಡೆದಿತ್ತು. ಆಗಿನ ಭೂಗತ ಚಳವಳಿಗಾರರ ಸಂಪರ್ಕ ನನಗೆ ಇತ್ತು. ನಾನು ಕಲಿಯುವ ಇಂಗ್ಲೀಷ್ ಶಾಲೆ ಅಗ್ನಿಗಾಹುತಿಯಾಯಿತು. ನಾನು ಶಾಲೆಯಲ್ಲಿ ಖಾದಿ ಧರಿಸುವವನಾಗಿದ್ದರಿಂದ ಶಾಲೆಯ ಹೆಡ್ ಮಾಸ್ತರರಿಂದ ಬಡಿಸಿಕೊಂಡಿದ್ದೆ. ನಾನು ಮುಂದೆ ಇಂಟರ ಕೊಂಡಿದ್ದನು.

ಈ ಚಳುವಳಿಯಲ್ಲಿ ನಾನು ಭಾಗವಹಿಸಿದ್ದರಿಂದ ಇಂಟರ್‌ಮಿಡಿಯಟ್‌ವರೆಗೆ ಓದಿ ಕಾಲೇಜ್ ಅಭ್ಯಾಸ ತ್ಯಜಿಸಬೇಕಾಯಿತು. ನಂತರ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ಸಭೆಯನ್ನು ಹಂಪಿಯಲ್ಲಿ ಕರೆಯಲಾಗಿತ್ತು. ಇದರಲ್ಲಿ ಶಿವಮೂರ್ತಿಸ್ವಾಮಿ ಆಳವಂಡಿ. ಕಾಂ.ಬಿ.ವಿ.ಕಕ್ಕಿಲ್ಲಾಯರು ಮುಖಂಡತ್ವ ವಹಿಸಿದ್ದರು. ಇದಕ್ಕೆ "ಆಕರಾನಿ" ಚಳುವಳಿಯೆಂದು ಹೆಸರು ಬಿದ್ದಿತ್ತು. ಈ ಸಂಪರ್ಕದಿಂದ ಪೋಲೀಸರು ನಮ್ಮ ಮನೆಯನ್ನು ಶೋಧ ಮಾಡಿದ್ದರು.

ಅವಿಭಾಜಿತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನವು ದಾವಣಗೇರಿಯ ಸಮ್ಮೇಳನಕ್ಕೆ ನಮ್ಮಲ್ಲಿಂದ ಇಬ್ಬರು ಪ್ರತಿನಿಧಿಗಳಾಗಿ ಭಾಗವಹಿಸಿದ್ದೆವು. ಬಹಿರಂಗ ಸಭೆಗೆ ದಿವಂಗತ ಕಾಮ್ರೇಡ ರಾಮಮೂರ್ತಿಯವರು ಬಂದಿದ್ದರು. ಕಾ.ಎನ್.ಕೆ. ಉಪಾಧ್ಯಾಯ ಮತ್ತು ಕಾ.ಬಿ.ವಿ. ಕಕ್ಕಿಲ್ಲಾಯರು ನಮ್ಮ ಸವದತ್ತಿ ನಗರದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದರು. ಕಾ.ಕಕ್ಕಿಲ್ಲಾಯರು ಮಲಪ್ರಭಾ ಯೋಜನೆಯ ಮುಳುಗಡೆ ಗ್ರಾಮಗಳ ರೈತರ ಸಭೆಗೆ ಸವದತ್ತಿಗೆ ಬಂದಿದ್ದರು. ರೈತರಿಗೆ ಪೆಟ್ಟಿಗೆ ಪರಿಹಾರ ಕೊಡಲು ಒತ್ತಾಯಿಸಿತು.

-ಎಸ್.ಹೆಚ್.ಕಪ್ಪಣ್ಣವರ
ಸವದತ್ತಿ-ಜಿಲ್ಲಾ ಬೆಳಗಾಂವ

ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ

ಸಾಯನ್ಸ್ ಅಭ್ಯಾಸವನ್ನು ಬೆಳಗಾಂವಿಯಲ್ಲಿ ಮಾಡುತ್ತಿದ್ದೆ. ಅಲ್ಲಿ ನಾನು ದಿವಂಗತ ನಾಡ ಪೈ. ಯವರು ಸಂಘಟಿಸಿದ ವಿದ್ಯಾರ್ಥಿ ಸಂಘಟನೆಯ ಸದಸ್ಯನಾಗಿದ್ದೆ. ಇವರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಮುಖಂಡರಾಗಿದ್ದರು. ಡಾ.ರಾಮಮನೋಹರ ಲೋಹಿಯಾರನ್ನು ಕರೆಯಿಸಿ ನಮ್ಮೂರಲ್ಲಿ ಸಭೆ ಏರ್ಪಡಿಸಿದ್ದೆವು. ಅದೇಕಾಲಕ್ಕೆ ಬೆಳಗಾಂವಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾದ ಕಾ.ಕೃಷ್ಣಾಮೆಣಸೆ ಕಮ್ಯುನಿಸ್ಟ್ ಸಾಹಿತ್ಯಗಳನ್ನು ಮಾರುತ್ತಿದ್ದರು. ಅವರಿಂದ ನಾನು ಮಾರ್ಕ್ಸರವರ ಸೆಲೆಕ್ಟೆಡ್ ಮಾರ್ಕ್ಸ ಪುಸ್ತಕಗಳನ್ನು ಕೊಂಡು ಓದಹತ್ತಿದೆ. ನನ್ನ ಗೆಳೆಯರಿಂದ ಕಾ.ಪಾಮೆ. ದತ್ತರವರ "ಇಂಡಿಯಾಟುಡೇ" ಪುಸ್ತಕ ದೊರಕಿತ್ತು. ಈ ಪುಸ್ತಕವನ್ನು ನಾನು ಪುನಃ ಓದಿದೆ. ಈ ಪುಸ್ತಕಗಳು ನನ್ನನ್ನು ಕಮ್ಯುನಿಸ್ಟ್ ವಿಚಾರದತ್ತ ಗಮನ ಸೆಳೆದವು. "ಕ್ವಿಟ್ ಇಂಡಿಯಾ" ಪುಸ್ತಕವನ್ನು ಕೂಡಾ ನಾನು ಓದಿದ್ದೆ. ನಾನು ಕಾಲೇಜ್‌ದಲ್ಲಿದ್ದಾಗಲೇ ಕೆಲವು ಯುವಕರನ್ನು ಕೂಡಿಸಿಕೊಂಡು ಹೈದರಾಬಾದದ ರಜಾಕಾರ ಚಳವಳಿಯಿಂದ ನಮ್ಮ ಕನ್ನಡ ಭಾಗಗಳಲ್ಲಿ ಹಳ್ಳಿಗರನ್ನು ರಕ್ಷಿಸಲು ಭಾಗವಹಿಸಿದ್ದೆ. ಇದರ ಮುಖಂಡತ್ವವನ್ನು ಶ್ರೀ ಶಿವಮೂರ್ತಿ ಸ್ವಾಮಿ ಆಳವಂಡಿಯವರು ವಹಿಸಿದ್ದರು. ಇವರು ಮುಂದೆ ಪಾರ್ಲಿಮೆಂಟಿನ ಸದಸ್ಯರಾಗುತ್ತಾರೆ. ಹೈದರಾಬಾದ ಸಂಸ್ಥಾನದ ಕನ್ನಡದ ಕೆಲವು ಹಳ್ಳಿಗಳು ಸ್ವತಂತ್ರ ಭಾರತದ ಭಾಗಗಳಿಂದ ಸುತ್ತುವರಿದಿತ್ತು. ಇವು ಮುಂಡರಗಿ ಭಾಗಕ್ಕೆ ಹತ್ತಿರವಿದ್ದವು ತೆಲಂಗಾಣಾದಂತೆ ಇವುಗಳನ್ನು ಸ್ವತಂತ್ರಗೊಳಿಸಿತ್ತು. ಈ 8-10 ಹಳ್ಳಿಗಳನ್ನು ಬಂದೂಕಗಳಿಂದ ಯುವಕರ ಪಡೆ ರಜಕಾರರ ಹಾವಳಿಯಿಂದ ರಕ್ಷಿಸುತ್ತಿದ್ದವು. ನಮಗೆ ಐ.ಎನ್.ಐ ದಿಂದ ಬಂದ ಸಿಕ್. ಮಿಲಿಟರಿ ಆಫೀಸರನು ಟ್ರೈನಿಂಗ್ ಕೊಡುತ್ತಿದ್ದನು. ನಮ್ಮ ತಾಲೂಕಿನ ಯುವಕನೊಬ್ಬನು ತನ್ನ ಒಂದು ಕೈಕಳೆದು

ಕಮ್ಯುನಿಸ್ಟ್ ಮುಖಂಡರಾದ ಕಾ.ಬಿ.ವಿ. ಕಕ್ಕಿಲ್ಲಾಯರ ಸಂಪರ್ಕದಿಂದ ರೈತ ಸಂಘಟನೆಯನ್ನು ನಮ್ಮ ಜಿಲ್ಲೆಯಲ್ಲಿ ಪ್ರಾರಂಬಿಸಿದೆವು. ಬೆಳಗಾಂವ ಜಿಲ್ಲಾ ರೈತ ಸಮ್ಮೇಳನವನ್ನು ಸಂಪಗಾಂವ ಗ್ರಾಮದಲ್ಲಿ ಮಾಡಿ ಇವರನ್ನು ಆಮಂತ್ರಿಸಿತ್ತು. ಕೆಲವು ಕಾಂಗ್ರೆಸ್ ಮುಖಂಡರನ್ನು ಕೂಡಿಕೊಂಡು ಬೆಳಗಾಂ ಜಿಲ್ಲಾ ರೈತ ಸಂಘವೆಂದು ಸ್ವತಂತ್ರ ರೀತಿಯಿಂದ ಸಂಘಟಿಸಿದೆವು. ಇದರಲ್ಲಿ ಚಲೆಜಾವ್ ಚಳವಳಿಯ ಮುಖಂಡರಾದ ಕ್ರಾಂತಿವೀರ ದಿ. ವಾಲಿ. ಚೆನ್ನಪ್ಪ ಹಾಗೂ ದಿ.ತಲ್ಲೂರ ರಾಯನಗೌಡರು ಮುಖಂಡತ್ವ ವಹಿಸಿದ್ದರು. ಬೆಳಗಾಂವ ಜಿಲ್ಲಾ ಪರಿಷತ್ತನ್ನು ಗೋಕಾಕ ನಗರದಲ್ಲಿ ಆಗಿನ ಮುಂಬಯಿ ಪ್ರಾಂತದ ಮುಖ್ಯಮಂತ್ರಿಗಳಾದ ಮುರಾರ್ಜಿ ದೇಸಾಯರನ್ನು ಉದ್ಘಾಟನೆಗೆ ಕರೆದಿತ್ತು. ಸಭೆಯಲ್ಲಿ ಮುಖ್ಯ ಮಂತ್ರಿಗಳು ಕಾಂಗ್ರೆಸ್ ಸಂಸ್ಥೆ ಬಿಟ್ಟು ಸ್ವತಂತ್ರ ರೈತ ಸಂಘಟನೆ ಮಾಡಿದ್ದು ತಪ್ಪು ಎಂದು ಹೇಳಿದರು. ಈ ಮುಖಂಡರು ಕಾಂಗ್ರೆಸ್ ತ್ಯಜಿಸಿ ಆಚಾರ್ಯ ಕೃಪಾಲಾನಿ ಯವರ ಪಕ್ಷ ಸ್ಥಾಪಿಸಿದರು. ನಾನು ಕಮ್ಯುನಿಸ್ಟ್ ಮುಖಂಡ ಬಿ.ವಿ.ಕಕ್ಕಿಲ್ಲಾ ಯರ ಕಿಸಾನ ಸಭೆಯನ್ನು ಸಂಘಟಿಸುತ್ತಾ ಬಂದೇನು. ಕಕ್ಕಿಲ್ಲಾಯರ ಜೊತೆ ಕೇರಳದಲ್ಲಿ ತ್ರಿಚೂರಲ್ಲಿ ನಡೆದ ಕಿಸಾನ ಸಭೆಯ ಅಖಿಲ ಭಾರತ ಬೆಳ್ಳಿ ಹಬ್ಬದ ರೈತ ಪರಿಷತ್ತಿನಲ್ಲಿ ಭಾಗವಹಿಸಿದೆ. ಕಿಸಾನ ಸಭೆಯ ನೇತೃತ್ವದಲ್ಲಿ ಟೆನನ್ಸಿ ರೈತರ ಸಮ್ಮೇಳನ. ಸಂಘಟನೆ ಮಾಡಿದ್ದೆವು. ವಿಜಾಪುರದಲ್ಲಿ ಎನ್.ಕೆ.ಉಪಾಧ್ಯಾಯರು ನಗರ ಸಭೆ ಕಾರ್ಮಿಕರ ಸಂಘ ಮಾಡಿದ್ದರು. ಅವರಿಂದ ಬಾಯಲಾಜುಗಳನ್ನು ತರಿಸಿ ಸವದತ್ತಿಯಲ್ಲಿಯೂ ನಗರ ಸಭೆ ಕಾರ್ಮಿಕರ ಸಂಘ ಸ್ಥಾಪಿಸಿದೆವು. ಈಗಾಗಲೇ ಸಿ.ಪಿ.ಐ.ಸದಸ್ಯತ್ವವನ್ನು ಪಡೆದಿದ್ದವು. ಸವದತ್ತಿಯಲ್ಲಿ ನಾಲ್ಕು ಜನರು ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಡ್ ಹೋಲ್ಡರ್ ಸದಸ್ಯರಿದ್ದೆವು.

ಸವದತ್ತಿ ನಗರ ಸಭೆಯ ಕಾರ್ಮಿಕ ಸಂಘದ ಅಧ್ಯಕ್ಷನಾದ ನಾನು ನಗರ ಸಭೆಗೆ ಸ್ಪರ್ಧಿಸಿ ಅವಿರೋಧವಾಗಿ ನಗರ ಸಭೆಯ ಅಧ್ಯಕ್ಷನಾದೆನು. ನನ್ನ ತಂದೆ ನಗರ ಸಭೆಯ ನೌಕರನಾಗಿದ್ದನು. ಸ್ವಾತಂತ್ರ್ಯ ನಂತರ ತಾಲೂಕಿನ ಸಹಕಾರಿ ಸಂಘಗಳನ್ನು ಸಂಸ್ಥಾಪಿಸುವಲ್ಲಿ ಪ್ರಮೋಟರ ಮತ್ತು ಅಧ್ಯಕ್ಷನಾಗಿ ಇಪ್ಪತ್ತು ವರುಷ ಕೆಲಸ ಮಾಡಿದ್ದೇನೆ. ಖಾದಿ ನೂಲುವವರ ಮತ್ತು ನೇಕಾರರಿಗೆ ಸಹಾಯವಾಗಲು ಬೆಳಗಾಂ ಜಿಲ್ಲೆಯ ಮೂರು ತಾಲೂಕಗಳ ಕ್ಷೇತ್ರವನ್ನೊಳಗೊಂಡು ಖಾದಿ ಉತ್ಪಾದನೆಯ ಸಂಘ ಸ್ಥಾಪಿಸಿ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದೇನೆ. ಅದರಂತೆ ಜಿಲ್ಲಾ ಲ್ಯಾಂಡ್ ಮಾರ್ಗೇಜ ಬ್ಯಾಂಕುಗಳನ್ನು ತಾಲೂಕ ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕುಗಳ ಸ್ಥಾಪನೆಯನ್ನು ಜಿಲ್ಲೆಯಲ್ಲಿ ಪ್ರಥಮವಾಗಿ ಸ್ಥಾಪಿಸಿತು. ಅದರಲ್ಲಿ ಹದಿನೈದು ವರುಷಗಳವರೆಗೆ ಅಧಿಕಾರವಹಿಸಿ ಜಿಲ್ಲೆಯಲ್ಲಿಯೇ ಉತ್ತಮ ಬ್ಯಾಂಕು ಅಂತಾ ಪ್ರಶಸ್ತಿ ಪಡೆದಿರುತ್ತದೆ. ಮಲಪ್ರಭಾ ನೀರಾವರಿ ಪ್ರದೇಶ ರೈತರ ಸಮನ್ವಯ ಸಮಿತಿಯ ಹೋರಾಟದಲ್ಲಿ ಕಾ.ವಿ.ಎನ್. ಹಳಕಟ್ಟಿ ಮತ್ತು ನಾನು ಸಂಚಾಲಕರಾಗಿದ್ದೆವು ನರಗುಂದದಿಂದ ಬೆಂಗಳೂರವರೆಗೆ ರೈತರ ಬೃಹತ್ ಜಾಥದಲ್ಲಿ ಎರಡೂ ಕಮ್ಯುನಿಸ್ಟ್ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ಭಾರತ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಸಕ್ರೀಯ ಸದಸ್ಯನಾಗಿ ಕೆಲಸ ಮಾಡಲು ಇಲ್ಲಿಂದ ಪ್ರಾರಂಭಿಸಿದೆ. ಈ ಪಕ್ಷದ ಮೂರು ರಾಜ್ಯಸಮ್ಮೇಳನಗಳಲ್ಲಿ ಅಂದರೆ ಮಂಗಳೂರು, ಕೋಲಾರ ಮತ್ತು ಬೆಂಗಳೂರು ಸಮ್ಮೇಳನಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿರುತ್ತೇನೆ. ಭಾರತದಲ್ಲಿ ವಿವಿಧ ಕಮ್ಯುನಿಸ್ಟ್ ಪಕ್ಷಗಳಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆ ಮತ್ತು ನಿಲುವು ನನಗೆ ಮೆಚ್ಚುಗೆ ಬಂದಿರುತ್ತದೆ.



ತಿದ್ದುಪಡಿ

ಈ ಪುಟದಲ್ಲಿ ಕಳೆದ ಬಾರಿ 'ಸೋವಿಯತ್ ಜನತೆಗೆ ಐಕ್ಯತೆಯು' ಎಂಬ ಕಾಲಂನ ಎರಡನೇ ಪ್ಯಾರಾಗ್ರಾಫದಲ್ಲಿ "ಸಿ.ಪಿ.ಐ.(ಎಂ)" ಮತ್ತಿತರ ಪ್ರತಿಯೊಂದು ಕ್ರಮವನ್ನು ಒಪ್ಪಬಿಟ್ಟಿದ್ದರೂ......" ಎಂದು ತಪ್ಪಾಗಿ ಮುದ್ರಿತವಾಗಿದೆ. ಅದು 'ಒಪ್ಪದಿದ್ದರೂ' ಎಂದಿರಬೇಕು.

ಮುಂಬೈಯಲ್ಲಿ 'ಏಕತಾ ಯಾತ್ರೆ'

ಕಳೆದ ಎರಡುಸಂಚಿಕೆಗಳಲ್ಲಿ ಕೋಮುವಾದಿಗಳ ಸವಾಲನ್ನೆದುರಿಸಿ ಕೇರಳ, ಪಶ್ಚಿಮಬಂಗಾಳ, ದೆಹಲಿಯಲ್ಲಿ ಜಾತ್ಯತೀತ ಶಕ್ತಿಗಳು ನಡೆಸಿದ ಯಶಸ್ವೀ ಕಾರ್ಯಕ್ರಮಗಳ ಬಗ್ಗೆ ಓದಿರುವಿರಿ. ಇಲ್ಲಿ ಇನ್ನಷ್ಟು ಇಂತಹ ಕಾರ್ಯಕ್ರಮಗಳ ವರದಿ ಕೊಡಲಾಗುತ್ತಿದೆ.

ಅಕ್ಟೋಬರ್ 29 ರಂದು ಬಿ.ಜೆ.ಪಿ. ವಿ.ಹೆಚ್.ಪಿ. ಆರ್.ಎಸ್.ಎಸ್. ಹೇರಿದ್ದ ಗಡುವಿನ ಹಿಂದಿನ ದಿನ ಮುಂಬೈಯಲ್ಲಿ ಒಂದು ಬೃಹತ್ 'ಏಕತಾ ಯಾತ್ರೆ' ನಡೆಯಿತು. ಇದು ಕೋಮುಗಲಭೆಗಳಿಗೆ ತುಪ್ಪ ಸುರಿಯುತ್ತಾ ನಡೆದ 'ರಥಯಾತ್ರೆ'ಗೆ ತದ್ವಿರುದ್ಧವಾಗಿತ್ತು. ಸಿ.ಐ.ಎ.ಯು. ಎಐಟಿಯುಸಿ. ಯು.ಟಿ.ಯು.ಸಿ. ಹೆಚ್.ಎಂ.ಎಸ್. ಸರ್ವಶ್ರಮಿಕ ಸಂಘ, ಎ.ಎಫ್.ಡಿ.ಯು. ಜನವಾದಿ ಮಹಿಳಾ ಸಂಘಟನೆ, ವಿದ್ಯಾರ್ಥಿ-ಯುವಸಂಘಟನೆಗಳು, ಸಾಂಸ್ಕೃತಿಕ ಗುಂಪುಗಳು ರಚಿಸಿಕೊಂಡ 'ಏಕತಾಸಮಿತಿ' ಈ 20 ಕಿ.ಮೀ. ಯುದ್ದದ ಯಾತ್ರೆಯನ್ನು ಸಂಘಟಿಸಿತ್ತು. ಭಗತ್‌ಸಿಂಗ್, ಸುಖದೇವ್, ರಾಜಗುರು ರವರ ಭಾವಚಿತ್ರಗಳನ್ನು ಹೊತ್ತ, ಅಲಂಕೃತ ಟ್ರಕ್‌ನ ಹಿಂದೆ ನಡೆದ ಯಾತ್ರೆಯಲ್ಲಿ ಏಕತಾ ಸಮಿತಿಯ ಅಧ್ಯಕ್ಷ ಅಸ್ಗರ್‌ಅಲಿ ಇಂಜಿನಿಯರ್, ಪುಷ್ಪಾ ಮೆಹತಾ, ಪ್ರಗತಿಪರ ಚಲನಚಿತ್ರ ನಟ ಎ.ಕೆ.ಹಾನಗಲ್, ನಾಟಕಕಾರ ವಿಜಯ ತೆಂಡುಲ್ಕರ್, ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಸದಸ್ಯೆ ಅಹಲ್ಯಾ ರಂಗ್ನೇಕರ್, ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ. ಹಾಗೂ ಸಿ.ಪಿ.ಐ. ಮುಖಂಡರು ಇದರಲ್ಲಿ ಭಾಗವಹಿಸಿದ್ದರು.

20 ಕಿ.ಮೀ. ಯಾತ್ರೆಯುದ್ದಕ್ಕೂ ಜನ ಇಕ್ಕೆಲಗಳಲ್ಲೂ ನಿಂತು ವೀಕ್ಷಿಸುತ್ತಿದ್ದರು. ಹಲವೆಡೆ ಬೀದಿ-ಬದಿ ಸಭೆಗಳು, ಬೀದಿ ನಾಟಕಗಳನ್ನುನಡೆಸಲಾಯಿತು. ಕೋಮು

ದೇಶದೊಳಗೆ

ಸೌಹಾರ್ದದ ಹಾಡುಗಳನ್ನು ಹಾಡಲಾಯಿತು. ಯಾತ್ರೆಯ ಕೊನೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಂಧರ್ಭದಲ್ಲಿ ನಗರದ ರೈಲುಗಳಲ್ಲಿ, ಉಪನಗರ ಪ್ರದೇಶಗಳಲ್ಲಿ ಹತ್ತು ಸಾವಿರ ಪೋಸ್ಟರ್‌ಗಳನ್ನು ಹಚ್ಚಲಾಯಿತು. ಫ್ಯಾಕ್ಟರಿ ಗೇಟುಗಳ ಮುಂದೆ 3000 ಪೋಸ್ಟರು ಹಚ್ಚಲಾಯಿತು. 25 ಸಾವಿರ ಕರಪತ್ರಗಳನ್ನು ಮರಾಠಿ, ಹಿಂದಿ, ಉರ್ದು, ಇಂಗ್ಲಿಷ್‌ನಲ್ಲಿ ಮುದ್ರಿಸಿ ಹಂಚಲಾಯಿತು.

ಬಿಹಾರದ ರಾಜಧಾನಿ ಪಾಟ್ನಾದಲ್ಲೂ ಅಂದು "ಸದ್ಭಾವನಾಯಾತ್ರೆ' ನಡೆಯಿತು. ಬಿಹಾರದ ಮುಖ್ಯಮಂತ್ರಿ ಎಲ್.ಪಿ. ಯಾದವ್, ರಾಮ್ ಸುಂದರದಾಸ್ (ಜನತಾದಳ), ಗಣೇಶ ಶಂಕರ ವಿದ್ಯಾರ್ಥಿ (ಸಿ.ಪಿ.ಐ.(ಎಂ), ಸೂರಜ್ ಪ್ರಸಾದ್ (ಸಿ.ಪಿ.ಐ.) ಸೂರಜ್ ಮಂಡಲ್ (ಝೂರ್ಖಂಡ್ ಮುಕ್ತಿ ಮೋರ್ಚಾ ಮತ್ತು ಇತರ ಎಡ ಪಕ್ಷಗಳ ಮುಖಂಡರು ಇದರಲ್ಲಿ ಭಾಗವಹಿಸಿದರು.

ಹರ್ಯಾಣಾದ ಕರ್ನಾಲ್‌ನಲ್ಲೂ ಯಶಸ್ವೀ ಕೋಮು ಸೌಹಾರ್ದ ಮೆರವಣಿಗೆ ನಡೆಯಿತು. ಹಿರಿಯ ಸ್ವಾತಂತ್ರ ಸೇನಾನಿ ಬಾಬಾ ಅಜಿತ್‌ಸಿಂಗ್ ಅದರ ನೇತೃತ್ವ ವಹಿಸಿದ್ದರು. ಅಕ್ಟೋಬರ್ 23 ರಿಂದ 30 ರವರೆಗೆ ಎಡಪಕ್ಷಗಳ ಕೋಮು ಸೌಹಾರ್ದತಾ ವಾರದ ಆಚರಣೆಯಲ್ಲಿ ಯಶಸ್ಸಿನ ಒಂದು ಮಾನದಂಡವೆಂದರೆ ಬಿ.ಜೆ.ಪಿ. ಮುನಿಸಿಪಲ್ ಕೌನ್ಸಿಲರ್ ಜಯ್‌ರಾಮ್ ನೇತೃತ್ವದಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತರ ಮೇಲೆ ಬಿ.ಜೆ.ಪಿ ಗೂಂಡಾಗಳ ಧಾಳಿ ಅಕ್ಟೋಬರ್ 25 ರಂದು.

ತ್ರಿಪುರಾದಲ್ಲಿ ರಾಜಕೀಯ ಕಾರ್ಯಾಚರಣೆಯ ಸಾಧನವಾಗಿ ಮಹಿಳೆಯರ ಮೇಲೆ ಅತ್ಯಾಚಾರ"

ಮಹಿಳಾ ಮಖಂಡರ ನಿಯೋಗದ ಖಂಡನೆ

"ತ್ರಿಪುರಾದಲ್ಲಿನ ಘಟನೆಗಳು ರಾಜಕೀಯದಲ್ಲಿ ಕ್ರಿಮಿನಲ್‌ಮಯ ಗೊಳಿಸಿರುವುದಕ್ಕೆ ಒಂದು ಉದಾಹರಣೆ. ಮಹಿಳೆಯರ ಮೇಲೆ ಅತ್ಯಾಚಾರವನ್ನು ಒಂದು ರಾಜಕೀಯ ಕಾರ್ಯಾಚರಣೆಯ ಸಾಧನವಾಗಿ ಬಳಸಲಾಗುತ್ತಿದೆ ಎಂದು ಮಹಿಳಾ ಮುಖಂಡರ ನಿಯೋಗವೊಂದು ಎರಡು ದಿನಗಳ ತನ್ನ ಭೇಟಿಯ ನಂತರ ಅಭಿಪ್ರಾಯ ವ್ಯಕ್ತಪಡಿಸಿದೆ.

ನವದೆಹಲಿಯ ಮಹಿಳಾ ಅಭಿವೃದ್ಧಿ ಅಧ್ಯಯನಗಳ ಕೇಂದ್ರದ ನಿರ್ದೇಶಕಿ ವೀಣಾ ಮಜುಂದಾರ್, ಭಾರತೀಯ ಮಹಿಳಾ ರಾಷ್ಟ್ರೀಯ ಒಕ್ಕೂಟದ ವಿದ್ಯಾ ಮುನ್ಷಿ, ಮಹಿಳಾಧ್ಯಕ್ಷ ಸಮಿತಿಯ ಮಂಜು ಮೋಹನ್, ಎ.ಐ.ಡಿ. ಡಬ್ಲ್ಯು.ಎ.ನ ಸುಶೀಲಾ ಗೋಪಾಲನ್, ಸಂಸತ್ ಸದಸ್ಯೆ ಮಾಲಿನಿ ಭಟ್ಟಾಚಾರ್ಯ ಮತ್ತು ದೆಹಲಿಯ ಅಡ್ವೋಕೇಟ್ ಕೀರ್ತಿ ಇವರುಗಳು ಸದಸ್ಯರಾಗಿದ್ದ ಮಹಿಳಾ ಸಮಿತಿ ಅಕ್ಟೋಬರ್ 24 ಹಾಗೂ 25 ರಂದು ರಾಜ್ಯಕ್ಕೆ ಭೇಟಿಯಿತ್ತು. 70 ಮಹಿಳೆಯರನ್ನು ಸಂದರ್ಶಿಸಿತು ಹೆಚ್ಚಿನ ಅತ್ಯಾಚಾರಗಳು ಹಾಡು ಹಗಲೇ ನಡೆದವು. ಅಪರಾಧಿಗಳು ಯಾರೆಂದು ಹೆಚ್ಚಿನ ಕೇಸುಗಳಲ್ಲಿ ಗೊತ್ತಿದ್ದರೂ ಅವರು ಹಾಯಾಗಿ ಅಲೆದಾಡಿಕೊಂಡು ಇದ್ದಾರೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. 'ಸರಕಾರದ ಗಮನಕ್ಕೆ ತಂದ ಎಲ್ಲಾ ಕೇಸುಗಳಲ್ಲಿ ಸಾಮಾನ್ಯ ಕಾನೂನು ವಿಧಾನ ಅನುಸರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ಹಾಗೂ ಪೋಲೀಸ್ ಮಹಾನಿರ್ದೇಶಕರ ಮಾತನ್ನು ನಂಬಲು ಸಾಧ್ಯವಿಲ್ಲ ಎಂದು ಸಮಿತಿ ಹೇಳಿದೆ.

ಈ ಸಮಿತಿ ಟಿಪ್ಪಣಿ ಮಾಡಿರುವ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಈ ನತದೃಷ್ಟ ಮಹಿಳೆಯರ ಕರುಣಾಜನಕ ಸ್ಥಿತಿಯಿಂದಾಗಿ ಎಡರಂಗದ ಮುಖಂಡರು ಅವರಿಗೆ ಆಶ್ರಯ, ಆಹಾರ, ಕಾನೂನು ನೆರವು ನೀಡುವ ಕೆಲಸ ಮಾಡಬೇಕಾಯಿತು. ಆದ್ದರಿಂದ ಒಂದು ರಾಜಕೀಯ ಪಕ್ಷ, ಈ ಅತ್ಯಾಚಾರಗಳನ್ನು ಆಡಳಿತದ ಗಮನಕ್ಕೆ ತಂದಿದೆ ಎಂಬ ಕಾರಣಕ್ಕಾಗಿ ಇಂತಹ ಅತ್ಯಾಚಾರ ನಡೆದಿರುವುದನ್ನೇ ಪ್ರಶ್ನಿಸುವುದು ಅತ್ಯಂತ ಅನ್ಯಾಯ" ಎಂದಿದೆ. ಕೇಂದ್ರ ಸರ್ಕಾರ ತ್ರಿಪುರಾದಲ್ಲಿ ಕಾನೂನು-ನ್ಯಾಯದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಈ ಸಮಿತಿ ಒತ್ತಾಯಿಸಿದೆ.

ಒರಿಸ್ಸಾಃ 50 ಸಾವಿರ ಮಂದಿ ಭಾಗವಹಿಸಿದ ಐತಿಹಾಸಿಕ ವಿಧಾನಸಭಾ ಚಲೋ

ಅಕ್ಟೋಬರ್ 15 ರಂದು ಒರಿಸ್ಸಾದ ರಾಜಧಾನಿ ಒಂದು ಅಭೂತಪೂರ್ವ, ಚಾರಿತ್ರಿಕ ರ್‍ಯಾಲಿ ಕಂಡಿತು. ಸಿ.ಪಿ.ಐ.(ಎಂ) ರಾಜ್ಯಸಮಿತಿ ಕರೆಯ ಮೇರೆಗೆ ರಾಜ್ಯದ ಮೂಲೆ-ಮೂಲೆಗಳಿಂದ ಐವತ್ತು ಸಾವಿರ ಕಾರ್ಮಿಕರು ರೈತರು, ಇತರ ದುಡಿಯುವ ಜನ ಈ ರ್‍ಯಾಲಿಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ರಾಷ್ಟ್ರೀಯ ಐಕ್ಯತೆ, ಕೋಮುಸೌಹಾರ್ದ, ಕೆಲಸದ ಹಕ್ಕು, ಸಾಲಮನ್ನಾ, ಬೆಲೆಯೇರಿಕೆ ತಡೆ, ಒರಿಸ್ಸಾದಲ್ಲಿ ಅಭಿವೃದ್ಧಿ ಕಾಮಗಾರಿ ಇವು ರ್‍ಯಾಲಿಯಲ್ಲಿ ಕೇಳಿಬಂದ ಬೇಡಿಕೆಗಳು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಿ.ಪಿ.ಐ.(ಎಂ) ಸಂಸತ್ ಸದಸ್ಯ ಶಿವಾಜಿ ಪಟ್ನಾಯಕ್ ಜನತಾದಳ, ಸಿ.ಪಿ.ಐ.(ಎಂ) ಸಿ.ಪಿ.ಐ. ಯಾವ 18 ಬೇಡಿಕೆಗಳ ಮೇಲೆ ಚುನಾವಣೆಗಳಲ್ಲಿ ಒಟ್ಟಾಗಿ ಹೋರಾಡಿದ್ದರೋ ಅವನ್ನೂ ಜನತಾದಳದ ರಾಜ್ಯ ಸರಕಾರ ಪೂರೈಸಿಲ್ಲ ಎಂದು ಟೀಕಿಸಿದರು. ಸಿ.ಪಿ.ಐ. (ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ರಾಜ್ಯ ಸಭೆಯಲ್ಲಿ ಸಿ.ಪಿ.ಐ.(ಎಂ) ಗುಂಪಿನ ಮುಖಂಡ ಕಾ.ಂ ಸಮರ್ ಮುಖರ್ಜಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನವಾದಿ ಮಹಿಳಾ ಸಂಘಟನೆ-ಮಹಿಳಾ ರಾಜ್ಯ ಸಮ್ಮೇಳನ

ಜನವಾದಿ ಮಹಿಳಾಸಂಘಟನೆ (ಎ.ಐ.ಡಿ.ಡಬ್ಲ್ಯು.ಎ.) ಮೂರನೇ ಮಹಾರಾಷ್ಟ್ರ ರಾಜ್ಯಸಮ್ಮೇಳನ ಅಕ್ಟೋಬರ್ 6-7 ರಂದು ಬೀಡ್ ಜಿಲ್ಲೆಯ ಅಂಬಾ ಜೋಗಾಯ್‌ನಲ್ಲಿನಡೆಯಿತು. ಮುಂಬೈ, ಪುಣೆ, ಠಾಣೆ ಮತ್ತಿತರ ಹನ್ನೊಂದು ಜಿಲ್ಲೆಗಳ 135 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಪ್ರತಿನಿಧಿಗಳ ಸ್ವರೂಪದಲ್ಲಿ ಹಿಂದಿನ ಸಮ್ಮೇಳನಗಳಿಗೆ ಹೋಲಿಸಿದರೆ ಸ್ವಾಗತಾರ್ಹದ ಬದಲಾವಣೆಗಳು ಕಂಡುಬಂದವು. ಪ್ರತಿನಿಧಿಗಳಲ್ಲಿ 60% ಕ್ಕೂ ಹೆಚ್ಚು ಮಂದಿ 40 ವರ್ಷಕ್ಕಿಂತ ಕೆಳಗಿನವರು. ನಿರಕ್ಷರಿಗಳು 25% ಕ್ಕಿಂತ ಕಡಿಮೆ. ಬಹುಪಾಲು ಪ್ರತಿನಿಧಿಗಳು ಕಾರ್ಮಿಕ, ರೈತ, ಕೃಷಿ ಕೂಲಿಕಾರ ಮುಂತಾದ ದುಡಿಯುವ ವಿಭಾಗಗಳಿಂದ ಬಂದವರಾಗಿದ್ದರು.

ಸಮ್ಮೇಳನ 40 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಅಹಲ್ಯಾ ರಂಗ್ನೇಕರ್ ಅಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಅಮಿತಾ ದೇಶಮುಖ್ ಪುನರಾಯ್ಕೆಗೊಂಡರು.

ವಜಾಗೊಂಡ ರೈಲ್ವೇ ಕಾರ್ಮಿಕರು ಮತ್ತೆ ಕೆಲಸಕ್ಕೆ ಸಿ.ಪಿ.ಟಿ.ಯು ಸ್ವಾಗತ

ರೈಲ್ವೇ ನೌಕರರ ನಿಯಮಗಳ 14(2) ಕಲಮಿನ ಪ್ರಕಾರ ವಜಾ ಮಾಡಿದ್ದ 700 ಕ್ಕೂ ಹೆಚ್ಚು ಕಾರ್ಮಿಕರನ್ನು ಮತಿತ್ತಿ ಕೆಲಸಕ್ಕೆ ತೆಗೆದುಕೊಳ್ಳಲು ರೈಲ್ವೇ ಇಲಾಖೆ ನಿರ್ಧರಿಸುರುವುದನ್ನು ಸಿ.ಪಿ.ಟಿ.ಯು.ಸ್ವಾಗತಿಸಿದೆ. ಸಾಮಾನ್ಯ ಕಾರ್ಮಿಕ ಸಂಘಟನಾ ಚಟುವಟಿಕೆಗಳಿಗಾಗಿ ಈ ಕಾರ್ಮಿಕರಿಗೆ ಈ ಅನ್ಯಾಯದ ಶಿಕ್ಷೆ ನೀಡಲಾಗಿದ್ದು ಈ ಬಗ್ಗೆ ರಾಷ್ಟ್ರೀಯ ರಂಗ ಸರ್ಕಾರ ಬಹಳ ಹಿಂದೇನೇ ಕೈಗೊಳ್ಳಬೇಕಾಗಿತ್ತು. ಇದು ರೈಲ್ವೇ ಕಾರ್ಮಿಕರು, ಮುಖ್ಯವಾಗಿ ಅಖಿಲ ಭಾರತ ಲೋಕೋ ರನ್ನಿಂಗ್‌ಸ್ಟಾಫ್ ಅಸೋಸಿಯೇಶನ್ನಿನ ದೀರ್ಘ ಹೋರಾಟಕ್ಕೆ ದೊರೆತ ಜಯ ಎಂದು ಸಿ.ಪಿ.ಟಿ.ಯು ಅಭಿನಂದಿಸಿದೆ.

ತುರ್ತುಕ್ರಮ ಅಗತ್ಯ

ಪುಟ 3 ರಿಂದ.

ಭಜರಂಗ ದಳದ ಸ್ವಯಂ ಸೇವಕರನ್ನು ನೇಮಕ ಮಾಡಿ ಅಹಿಂಸಾತ್ಮಕವಾಗಿ (?) ಕರಸೇವೆ ನಡೆಸುವ ಕುರಿತು ಅವರಿಗೆ ತರಬೇತಿ ಕೂಡ ನೀಡುವ ವ್ಯವಸ್ಥೆ ಮಾಡಲಾಗುತ್ತದೆಯಂತೆ.

ಏನೇ ಬರಲಿ ತಮ್ಮ ಹಿಂದುತ್ವದ ಆಕ್ರಮಣ ನಡೆಸಿಯೇ ತೀರಬೇಕು ಮುಂಬರುವ ಚುನಾವಣೆ ತನಕ "ಎಣ್ಣೆ ಕುದಿಯುತ್ತಿರುವಂತೆ" ಮಾಡಬೇಕು ಎಂಬ ಒಂದು ಯೋಜನೆಯನ್ನು ರೂಪಿಸಿದೆ. ವಿ.ಹೆಚ್.ಪಿ., ಆರ್.ಎಸ್.ಎಸ್. ಮುಂತಾದ ಮತೀಯ ಶಕ್ತಿಗಳು.

ಆದ್ದರಿಂದ ಅಕ್ಟೋಬರ್ ಕೊನೆಯ ದಿನಗಳಿಗಿಂತಲೂ ಮುಂಬರುವ ದಿನಗಳು, ಅತ್ಯಂತ ಗಂಭೀರವಾದ ಸಮಸ್ಯೆಗಳನ್ನೆದುರಿಸಬೇಕಾದ ಸಮಯವಾಗಲಿದೆ. ಆ ದಿವಸಗಳನ್ನು ಕಾದು ನೋಡುತ್ತ ಕುಳಿತುಕೊಳ್ಳುವ ಸಮಯ ಇದಲ್ಲ. ಜನತೆ ಕೂಡಲೇ ಕಾರ್ಯಾಚರಣೆಗಿಳಿಯಬೇಕು. ಎಲ್ಲಾ ಜಾತಿಧರ್ಮಗಳ ನೆಲೆಬೀಡಾದ ದೇಶ ಭಾರತ ದೇಶ. ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಕಾರ್ಮಿಕ ವರ್ಗ ಯಾವ ಜಾತಿ ಮತ ಭೇದವಿಲ್ಲದೆ ಸುದೀರ್ಘ ಚಳುವಳಿ ನಡೆಸುತ್ತಾರೆ. ಎಲ್ಲಾ ಧರ್ಮ ಮತಗಳನ್ನು ಬದಿಗೊತ್ತಿ ರೈತರು ತಮ್ಮ ಹಕ್ಕಿಗಾಗಿ ಜೀವದ ಹಂಗು ಬಿಟ್ಟು ಹೋರಾಡುತ್ತಾರೆ. ಶಾಲೆ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆಯುವಲ್ಲಿ, ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳಿಗಾಗಿ ಹೋರಾಡುವಲ್ಲಿ ಯಾವ ಧರ್ಮ ಜಾತಿ ಮತ ಅಡ್ಡಿ ಉಂಟು ಮಾಡುವುದಿಲ್ಲ. ಬಡತನ, ನಿರುದ್ಯೋಗ, ಜನರ ಅತ್ಯಗತ್ಯ ದಿನನಿತ್ಯದ ಸಮಸ್ಯೆಗಳ ಕುರಿತು ಮತ ಪ್ರದರ್ಶನ ನಡೆಸಿದಾಗ ಹಿಂದೂ, ಮುಸ್ಲಿಮ್, ಸಿಖ್, ಇಸಾಯಿ ಭೇದ ಭಾವ ಅಡ್ಡಿ ಬರುವುದಿಲ್ಲ. ಅವರವರ ದೇವರನ್ನು ಅವರವರ ಮನೆಗಳಲ್ಲಿ ಪೂಜಿಸಲು, ಅವರವರ ಧರ್ಮದಂತೆ ಜೀವನ ನಡೆಸಲು, ಹಬ್ಬ ಹುಣ್ಣಿಮೆಗಳನ್ನಾಚರಿಸಲು ಯಾರೂ ಅಡ್ಡಿ ಬರುವುದಿಲ್ಲ. ಹೀಗಿರುವಾಗ ಜಾತಿ ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ, ಜನರ ಮಧ್ಯೆ ಮತಭೇದವನ್ನುಂಟು ಮಾಡುವ ಪ್ರವೃತ್ತಿ ಖಂಡನೀಯ. ಮತ್ತೊಬ್ಬರ ಪ್ರಾರ್ಥನಾ ಮಂದಿರಗಳನ್ನು ಕೆಡಿಸುವುದು, ನಾಶ ಮಾಡುವುದು ಧರ್ಮಕ್ಕೆ ವಿರುದ್ಧವಲ್ಲವೇ? ದೇಶದಲ್ಲಿ ಪ್ರಚಲಿತ ಇರುವ ಯಾವ ಧರ್ಮವೂ ಮತ್ತೊಂದು ಧರ್ಮದ ಪ್ರಾರ್ಥನಾ ಮಂದಿರಗಳನ್ನು ನಾಶ ಮಾಡಬೇಕೆಂದಾಗಲೀ ಮತಾಂತರಗೊಳಿಸಬೇಕೆಂದಾಗಲೀ ಹಿಂಸೆ ಅತ್ಯಾಚಾರಕ್ಕೆ ಒಳಪಡಿಸಬೇಕೆಂದಾಗಲೀ ಸಾರುತ್ತಿಲ್ಲ. ಹಾಗಿರುವಾಗ ಬಾಬರಿ ಮಸೀದಿಯನ್ನು ನೆಲಸಮಮಾಡಿ ಅಲ್ಲಿಯೇ ರಾಮ ಮಂದಿರ ಕಟ್ಟಬೇಕೆಂಬ ಛಲ, ಹಿಂದೂ

ಕರ್ನಾಟಕದಲ್ಲಿ ರೈತಕಾರ್ಮಿಕರ ಮೇಲೆ ವಿದ್ಯಾರ್ಥಿ ಯುವ ಜನರ ಮೇಲೆ ಗುರುತರ ಜವಾಬ್ದಾರಿ ಬಿದ್ದಿದೆ. ಮನೆ ಮನೆಗೆ ಹೋಗಿ ವಿವರಣೆ ನೀಡುವ ಶಿಬಿರ, ಚರ್ಚಾಕೂಟಗಳನ್ನ ನಡೆಸುವ ಜವಾಬ್ದಾರಿ ಹೊರಬೇಕು. ಪರಿಸ್ಥಿತಿಬಂದಾಗ ಮಧ್ಯೆ ಪ್ರವೇಶಿಸಬೇಕು. ನಮ್ಮ ಧೋರಣೆಯನ್ನು ಕರ್ತವ್ಯವನ್ನೂ ಎತ್ತಿ ಹಿಡಿಯಬೇಕು. ಈ ದಿಸೆಯಲ್ಲಿ ತುರ್ತು ಕರ್ತವ್ಯ ಕೈಗೊಂಡರೆ ಮಾತ್ರ ಈ ಮತೀಯ ಶಕ್ತಿಗಳನ್ನು ನಾಶಗೊಳಿಸಿ ಜನರನ್ನು ದೇಶವನ್ನೂ ಉಳಿಸಲು ಸಾಧ್ಯ.

ಗಳಲ್ಲಿ ಒಂದಾಗಬೇಕೆಂಬ ಕೂಗು, ಇತರ ಧರ್ಮದವರೆಲ್ಲ ತಮ್ಮ ಆದೇಶವನ್ನೇ ಪಾಲಿಸಬೇಕೆಂಬ ಸರ್ವಾಧಿಕಾರಿ ಮನೋಭಾವ ದೇಶದ ಐಕ್ಯತೆ ಸಮಗ್ರತೆಗಾಗಲೀ ಜಾತೀಯ ಮತೀಯ ಸೌಹಾರ್ದತೆಗಾಗಲೀ ಪೂರಕವಾಗಿಲ್ಲ. ಹೇಳಿದಂತೆ ನಡೆಯಲೇಬೇಕೆಂಬ ಬಿಜೆಪಿ, ವಿಶ್ವ ಹಿಂದೂ ಪರಿಷತ್ತಿನ ನಿರ್ಧಾರ ದೇಶದಲ್ಲಿ ಅಶಾಂತಿ ಹುಟ್ಟಿಸುವುದಾಗಿದೆ. ಮತೀಯ ಗಲಭೆಗಳನ್ನೆಬ್ಬಿಸುವುದಾಗಿದೆ.

ಪ್ರಜ್ಞಾವಂತ ಜನತೆ ಕೈಕಟ್ಟಿ ಬಾಯಿ ಮುಚ್ಚಿ ಕೂಡುವ, ಸಮಯ ಇದಲ್ಲ. ಮತೀಯ ಶಕ್ತಿಗಳ ಆಹ್ವಾನವನ್ನೆದುರಿಸಲಿಕ್ಕೆ ಜನತೆ ಮುಂದಾಗುವುದಗತ್ಯ. ಇಷ್ಟು ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮತೀಯ ವಿಷ ಹರಡಿರಲಿಲ್ಲ. ಆದರೆ ಹೋದ ವರ್ಷ ನಡೆದ ಇಟ್ಟಿಗೆ ಯಾತ್ರೆ ಈ ವರ್ಷ ನಡೆದ ಕರ ಸೇವಾ ಯಾತ್ರೆ, ಪ್ರಚಾರಗಳೆಲ್ಲ ಅನೇಕ ಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲೂ ಜನರನ್ನು ಸಮಾಜವನ್ನು ಇಬ್ಭಾಗಗೊಳಿಸಿದೆ. ವಿಷಗಾಳಿ ಹಬ್ಬಿಸಿದೆ. ಆ ಕಾರಣದಿಂದ ಹಳ್ಳಿ ಗಾಡಿನಲ್ಲಿಯೂ ಮತೀಯ ಭಾವನೆ ಕೆರಳಿ ಗಂಡಾಂತರ ಪರಿಸ್ಥಿತಿಯನ್ನುಂಟು ಮಾಡಿದೆ. ಈ ವಿಷ ಪೂರಿತ ಪ್ರವಾಹವನ್ನು ಕೂಡಲೇ ತಡೆಗಟ್ಟಬೇಕು.

ಕರ್ನಾಟಕದಲ್ಲಿ ರೈತ - ಕಾರ್ಮಿಕರ ಮೇಲೆ ವಿದ್ಯಾರ್ಥಿ ಯುವ ಜನರ ಮೇಲೆ ಗುರುತರ ಜವಾಬ್ದಾರಿ ಬಿದ್ದಿದೆ. ಮನೆ ಮನೆಗೆ ಹೋಗಿ ವಿವರಣೆ ನೀಡುವ ಶಿಬಿರ, ಚರ್ಚಾ ಕೂಟಗಳನ್ನ ನಡೆಸುವ ಜವಾಬ್ದಾರಿ ಹೊರಬೇಕು. ಪರಿಸ್ಥಿತಿ ಬಂದಾಗ ಮಧ್ಯೆ ಪ್ರವೇಶಿಸಬೇಕು. ನಮ್ಮ ಧೋರಣೆಯನ್ನು ಕರ್ತವ್ಯವನ್ನೂ ಎತ್ತಿ ಹಿಡಿಯಬೇಕು. ಈ ದಿಸೆಯಲ್ಲಿ ತುರ್ತು ಕರ್ತವ್ಯ ಕೈಗೊಂಡರೆ ಮಾತ್ರ ಈ ಮತೀಯ ಶಕ್ತಿಗಳನ್ನು ನಾಶಗೊಳಿಸಿ ಜನರನ್ನು ದೇಶವನ್ನೂ ಉಳಿಸಲು ಸಾಧ್ಯ.

ಮುಸ್ಲಿಮರ ಮೇಲೆ ಎಲ್.ಟಿ.ಟಿ.ಇ.ಯುದ್ಧ

ಶ್ರೀಲಂಕಾದ ಜನಾಂಗೀಯ ಸಮಸ್ಯೆ ಇನ್ನೊಂದು ತಿಟ್ಟು ತಿರುವು ಪಡೆದಿದೆ. ಇನ್ನಷ್ಟು ಉಲ್ಬಣಗೊಳ್ಳುತ್ತಿದೆ. ಹಿಂದೆ ಶ್ರೀಲಂಕಾ ಮತ್ತು ತಮಿಳು ರಾಷ್ಟ್ರೀಯತೆಯ ಪ್ರಶ್ನೆ ಮುಖ್ಯವಾಗಿದ್ದು, ಈಗ ಇದು ಧಾರ್ಮಿಕ ಸಮಸ್ಯೆಯ ಹೊಸ ಆಯಾಮಪಡೆಯುತ್ತಿದೆ. ಎಲ್.ಟಿ.ಟಿ.ಇ. ಇತ್ತೀಚೆಗೆ ತಮಿಳು ಮುಸ್ಲಿಮರ ಮೇಲೆ ಹೆಚ್ಚು ಕಡಿಮೆ ಸಾರಿರುವ ಯುದ್ಧ ಆತಂಕಕಾರಿ ಬೆಳವಣಿಗೆ.ಎಲ್ಲೆಲ್ಲಿ ಸಾಮ್ರಾಜ್ಯಶಾಹಿ ಜನಾಂಗೀಯ ಸಮಸ್ಯೆಯನ್ನು ಉಲ್ಬಣಗೊಳಿಸಲುಕಾದಾಡುತ್ತಿರುವ ಎಲ್ಲಾ ಉಗ್ರಗಾಮಿ ಸಂಘಟನೆಗಳಿಗೆ ಕುಮ್ಮಕ್ಕು ಕೊಡುತ್ತಾ ಹೋಗುತ್ತಿದೋ ಅಲ್ಲೆಲ್ಲಾ ಇದು ಸರ್ವೇಸಾಮಾನ್ಯ. ಶ್ರೀಲಂಕಾದಲ್ಲಿ ಮೊದಲಿನಿಂದಲೂ ಸಿ.ಐ.ಎ. ಮೊಸಾದ್ ಮುಂತಾದ ಗೂಢಚಾರಿ ಸಂಸ್ಥೆಗಳು ಈ ಕೆಲಸ ಮಾಡುತ್ತಿವೆ.

ಮುಸ್ಲಿಮರು ಪೂರ್ವ ಪ್ರಾಂತ್ಯದ ಮೂರನೆಯ ಒಂದು ಭಾಗ ಇದ್ದಾರೆ. ಉತ್ತರದ ಪ್ರಾಂತ್ಯದಲ್ಲಿ ಅವರ ಸಂಖ್ಯೆ ಗಣನೀಯವಲ್ಲ. ಆದರೆ ಅವರ ಆಡುವ ಭಾಷೆ ತಮಿಳು. ಆದ್ದರಿಂದ ಹಿಂದೂ ತಮಿಳರ ಜತೆ ಅವರ ಸಾಂಸ್ಕೃತಿಕ-ಭಾಷಾ ಸಂಬಂಧ ಗಹನವಾದದ್ದು. ಆದರೂ ಎಲ್.ಟಿ.ಟಿ.ಇ. ಮುಸ್ಲಿಮರನ್ನು ಒಳಗೊಂಡದ್ದಿಲ್ಲ. ನಿಜವಾಗಿಯೂ ಹೇಳಬೇಕಾದರೆ ಸಂಶಯದಿಂದಕಾಣುತ್ತಿದ್ದರು. ಪೂರ್ವಪ್ರಾಂತ್ಯದಲ್ಲಿ ಎಲ್.ಟಿ.ಟಿ.ಇ. ವಿರುದ್ಧ ವಿರುವ ಎಲ್ಲಾ ತಮಿಳು-ಮುಸ್ಲಿಂ ಗುಂಪುಗಳ ರಂಗಕ್ಕೆ ಅಧಿಕಾರ ಹಸ್ತಾಂತರಿಸುವ ಶ್ರೀಲಂಕಾ ಸರ್ಕಾರದ ಪ್ರಯತ್ನದ ಹಿನ್ನೆಲೆಯಲ್ಲಿ,ಎಲ್.ಟಿ.ಟಿ.ಇ. ಈ ತಮಿಳು ಮುಸ್ಲಿಂಮರ ಮೇಲೆ ಯುದ್ಧವನ್ನೇ ಸಾರಿದೆ. ಮುಸ್ಲಿಮರ ರಾಜಕೀಯ ಪಕ್ಷ ಶ್ರೀಲಂಕಾ ಮುಸ್ಲಿಂ ಕಾಂಗ್ರೆಸ್‌ನ ರಾಜಕೀಯ ಮಹತ್ವ ಹೆಚ್ಚುತ್ತಿರುವುದನ್ನು ಎಲ್.ಟಿ.ಟಿ.ಇ. ಸಹಿಸದು. ಉತ್ತರ ಪ್ರಾಂತ್ಯದಿಂದ ಸುಮಾರು 60 ಸಾವಿರ ಮುಸ್ಲಿಮರು ನಿರಾಶ್ರಿತರಾಗಿ ಬಂದಿದ್ದಾರೆ. ಎಲ್.ಟಿ.ಟಿ.ಇ. ಗೆರಿಲ್ಲಾ ಆಕ್ರಮಣಗಳು ಮುಸ್ಲಿಂ ಹಳ್ಳಿಗಳ ಮೇಲೆ ಆತಂಕಕಾರಿಯಾಗಿ ಹೆಚ್ಚಿವೆ. ಶ್ರೀಲಂಕಾದ ಸೈನ್ಯ ಈ ಆಕ್ರಮಣದ ವಿರುದ್ಧ ಹೋರಾಡುವಂತೆ ಸುಮಾರು 700 ಮುಸ್ಲಿಮ್... ಮುಸ್ಲಿಮರು ಗೆರಿಲ್ಲಾಗಳಿಗೆ ತರಬೇತಿ ಮಾಡುತ್ತಿದೆ.

ಅಧ್ಯಕ್ಷ ಬುಶ್‌ರ ಪಕ್ಷಕ್ಕೆ ಪರಾಜಯ-

ಅಮೇರಿಕಾದ ಸೆನೆಟ್(ಮೇಲ್ಮನೆ). ಪ್ರತಿನಿಧಿ ಸಭೆ(ಕೆಳಮನೆ) ಮತ್ತು ರಾಜ್ಯದ ಗವರ್ನರ್ ಹುದ್ದೆಗಳಿಗೆ ನಡೆದ ಚುನಾವಣೆಗಳಲ್ಲಿ ಅಧ್ಯಕ್ಷ ಬುಶ್‌ರ ರಿಪಬ್ಲಿಕನ್ ಪಕ್ಷ ದೊಡ್ಡ ಪರಾಜಯಗಳನ್ನು ಕಂಡಿದೆ. ಅಧ್ಯಕ್ಷ ಬುಶ್ ತನ್ನ ಆರ್ಥಿಕ ನೀತಿಗಳು ಮತ್ತು ಕೊಲ್ಲಿ ಬಿಕ್ಕಟ್ಟಿನ ಬಗ್ಗೆ ವಿದೇಶ ನೀತಿಯನ್ನು ಚುನಾವಣಾ ವಿಷಯವಾಗಿಸಿದ್ದು, ಈ ಪರಾಜಯ ಅವರ ನೀತಿಗಳನ್ನು ಅಮೆರಿಕನ್ ಜನತೆ ತಿರಸ್ಕರಿಸಿದಂತಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ವಿರೋಧ ಪಕ್ಷವಾದ ಡೆಮೊಕ್ರಟಿಕ್ ಪಕ್ಷ ಸೆನೆಟ್ ಮತ್ತು ಪ್ರತಿನಿಧಿ ಸಭೆಯಲ್ಲಿ ಈಗಾಗಲೇ ಇರುವ ತನ್ನ ಬಹುಮತವನ್ನು ಹೆಚ್ಚಿಸಿಕೊಂಡಿದೆ. ಹಿಂದೆರಿಪಬ್ಲಿಕನ್ ಗವರ್ನರುಗಳಿದ್ದ ನಾಲ್ಕು ರಾಜ್ಯಗಳನ್ನು ಕಸಿದುಕೊಂಡಿದೆ. ಇದರಲ್ಲಿ ರಾಜಕೀಯವಾಗಿ ಮಹತ್ವದ್ದಾದ ಫ್ಲೋರಿಡಾ ಮತ್ತು ಟೆಕ್ಸಾಸ್ (ಬುಶ್‌ರ ರಾಜ್ಯ) ಗಳೂ ಸೇರಿವೆ.

ಈ ಮಧ್ಯಂತರ ಚುನಾವಣೆಗಳಲ್ಲಿ ಅಮೆರಿಕನ್ ಜನತೆಯ ಉದಾಸೀನವೂ ಕಂಡು ಬಂತು. ಇದು ಪಾಶ್ಚಿಮಾತ್ಯ ಬೂರ್ಜ್ವಾ ಪ್ರಜಾತಂತ್ರದ ದೇಶಗಳ, ಏಕೆ ಭಾರತದಂತಹ ಮೂರನೇ ಜಗತ್ತಿನ ದೇಶಗಳ ಸರಾಸರಿ ಮತದಾನದ ಶೇಕಡಾವಾರಿಗಿಂತಲೂ ಅತಿ ಕಡಿಮೆ. ಜಗತ್ತಿನ ಅತ್ಯಂತ ಹೆಮ್ಮೆಯ ಪ್ರಜಾತಂತ್ರ ಎಂದು ಕೊಚ್ಚಿಕೊಳ್ಳುವ ಅಮೆರಿಕದ ಪ್ರಜಾತಂತ್ರದ ಇನ್ನೊಂದು ದೊಡ್ಡ ನ್ಯೂನತೆ ಎಂದರೆ ಅಧ್ಯಕ್ಷರ ಆಯ್ಕೆ. ಪಾರ್ಲಿಮೆಂಟಿನ ಮೇಲ್ಮನೆ. ಕೆಳಮನೆಗಳಲ್ಲಿನ ರಾಜಕೀಯ ಆಯ್ಕೆಯನ್ನು ಪ್ರತಿಬಿಂಬಿಸದಿರುವುದು. 1954ರಿಂದ ಈವರೆಗೆ ಸತತವಾಗಿ ಡೆಮಾಕ್ರೆಟಿಕ್ ಪಕ್ಷ ಬಹುಮತ ಪಡೆಯುತ್ತಾ ಬಂದಿದ್ದರೂ, ಅಧ್ಯಕ್ಷರ ಚುನಾವಣೆಗಳಲ್ಲಿ ಬಹಳಷ್ಟು ಭಾರಿ ಗುತ್ತೆದಾರಿಗಳು ರಿಪಬ್ಲಿಕನ್ ಪಕ್ಷದ ಪರವಾಗಿ ಭಾರಿ ಪ್ರಚಾರ, ನಡೆಸುವುದೇ ಕಾರಣ. ಆ ಮೂಲಕ ಜನರ ಆಯ್ಕೆಯನ್ನು ತಿರುಚುವುದರಿಂದಾಗಿ.

ಕೊಲ್ಲಿಯಲ್ಲಿ ಯುದ್ಧದ ದಟ್ಟ ಕಾರ್ಮೋಡಗಳು

ಕೊಲ್ಲಿಯಲ್ಲಿ ಯುದ್ಧ ಮಾಡಲು ಇದು ತಕ್ಕ ಸಮಯ ಎಂದು ಅಮೇರಿಕ ಭಾವಿಸಿರುವ ಸಾಧ್ಯತೆ ಹೆಚ್ಚು ಹೆಚ್ಚಾಗಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ. ಈಗಾಗಲೇ ಇರುವ ಅಮೇರಿಕದ

ಲೋಕ ಸಂಚಾರ

ಎರಡುವರೆ ಲಕ್ಷ ಬಲದ ಸೈನ್ಯಕ್ಕೆ ಇನ್ನೂ ಒಂದು ಲಕ್ಷ ಸೈನ್ಯ ಸೇರಿಸಲು ಅಧ್ಯಕ್ಷ ಬುಶ್ ನಿರ್ಧರಿಸಿದ್ದಾರೆ. ಸೌದಿ ಅರೇಬಿಯಾದ ರಕ್ಷಣೆಗೆ ಬೇಕಾಗುವಷ್ಟು ಸೈನ್ಯ ಮಾತ್ರ ಕೊಲ್ಲಿಯಲ್ಲಿ ಇರುತ್ತದೆ ಎಂಬ ಅಮೆರಿಕನ್ ವಕ್ತಾರರ ಹೇಳಿಕೆ ಬದಲಾಗಿ, ಇರಾಕ್‌ನ್ನು ಕುವೈತ್‌ನಿಂದ ಅಗತ್ಯಬಿದ್ದರೆ ಓಡಿಸಲು ಬೇಕಾದಷ್ಟು ಸೈನ್ಯವನ್ನು ಜಮಾಯಿಸಲಾಗುವುದು ಎಂಬ ಹೇಳಿಕೆಗೆ ತಿರುಗಿದೆ. ಈಗ ಕೊಲ್ಲಿಯಲ್ಲಿ ಜಮಾಯಿಸಿರುವ ಬಹು-ರಾಷ್ಟ್ರೀಯ ಪಾಶ್ಚಿಮಾತ್ಯ-ಅರಬ್ ಪಡೆಗಳನಾಯಕತ್ವದ ಪ್ರಶ್ನೆಯ ಬಗ್ಗೆ ಒಪ್ಪಂದಕ್ಕೆ ಸೌದಿ ಅಮೆರಿಕನ್ ಸರಕಾರಗಳು ಬಂದಿವೆ. ಇದು ಯುದ್ಧದ ತಯಾರಿಯ ಸೂಚನೆ ಎನ್ನಲಾಗಿದೆ.

ಇದಲ್ಲದೆ ಅಮೇರಿಕಾ ಇರಾಕ್ ಆರ್ಥಿಕ ದಿಗ್ಬಂಧನಗಳಿಗೆ ಸೊಪ್ಪು ಹಾಕುತ್ತಿಲ್ಲವಾದ್ದರಿಂದ, ಭದ್ರತಾ ಸಮಿತಿ ಅಮೆರಿಕಕ್ಕೆ ಬಲಪ್ರಯೋಗಕ್ಕೆ ಅನುಮತಿ ಕೊಡುವ ನಿರ್ಣಯ ಕೈಗೊಳ್ಳಬೇಕೆಂಬ ಸೂಚನೆಗೆ ಬೆಂಬಲಕ್ಕಾಗಿ ಪ್ರಚಾರಮಾಡುತ್ತಿದೆ. ಆದರೆ ಇದಕ್ಕೆ ಸೋವಿಯೆತ್, ಚೀನಾ ವಿರೋಧ ವ್ಯಕ್ತಪಡಿಸಿವೆ. ಅರಬ್ ದೇಶಗಳೂ ಈವರೆಗೆ ಈ ಬಗ್ಗೆ ಭಾರಿ ಉತ್ಸುಕತೆ ತೋರಿಲ್ಲ. ಯಾವುದೇ ಬಲಪ್ರಯೋಗ ವಿಶ್ವಸಂಸ್ಥೆಯ ನಿಯಂತ್ರಣದಲ್ಲಿರಬೇಕು ಮತ್ತು ಆರ್ಥಿಕ ದಿಗ್ಬಂಧನಕ್ಕೆ ಇನ್ನೂ ಸಮಯ ಕೊಡಬೇಕು ಎಂಬುದು ಸೋವಿಯತ್, ಚೀನಾಗಳ ನಿಲುವು. ರಾಜಕೀಯ ಪರಿಹಾರ ಕಂಡು ಹಿಡಿಯಲು ಸೋವಿಯತ್ ಪ್ರಯತ್ನಗಳು ಈವರೆಗೆ ವಿಫಲವಾಗಿದೆ. ಈಗ ಈಪ್ರಯತ್ನಗಳನ್ನು ಚೀನಾ ಮತ್ತು ಅಲಿಪ್ತದೇಶಗಳು ಮುಂದುವರಿಸುತ್ತಿವೆ.

ಕೊಲ್ಲಿ ಸೈನ್ಯ ಕಳಿಸಲು ಜಪಾನ್ ಪಾರ್ಲಿಮೆಂಟು ನಕಾರ

ಕೊಲ್ಲಿಯಲ್ಲಿ ಪಾಶ್ಚಿಮಾತ್ಯ ಪಡೆಗಳನ್ನು ಸೇರಲು ಜಪಾನ್‌ಸೈನ್ಯದ ತುಕಡಿಗಳನ್ನು ಕಳಿಸಲು ಜಪಾನ್ ಸರ್ಕಾರ, ಆದೇಶದ ಪಾರ್ಲಿಮೆಂಟಿನ ಮುಂದೆ ಮಂಡಿಸಿದ್ದ ಮಸೂದೆ ಭಾರಿ ಬಹುಮತದಿಂದ ಸೋಲು ಕಂಡಿತು. ಹಲವು ಆಳುವ ಪಕ್ಷದ ಸದಸ್ಯರುಗಳೇ ಈ ಮಸೂದೆಯನ್ನು ಬಲವಾಗಿ ವಿರೋಧಿಸಿದರು.

ಆರ್ಥಿಕವಾಗಿ ಮಹಾಶಕ್ತಿಯಾಗಿರುವ ಜಪಾನ್ ರಾಜಕೀಯವಾಗಿ ಕುಬ್ಜವಾಗಿ ಮುಂದುವರೆಯಬಾರದು ಎಂಬ ಜಪಾನಿ ಸರ್ಕಾರದ ಪ್ರಚಾರ ಯಾರ ಮನ್ನಣೆಯನ್ನು ಗಳಿಸಲಿಲ್ಲ. ಇಂತಹ ಒಂದು ಮಸೂದೆಯನ್ನು ಜಪಾನ್ ಸರ್ಕಾರ ಎರಡನೆಯ ಮಹಾಯುದ್ಧದ ನಂತರ ತರುತ್ತಿರುವುದು ಇದೇ ಮೊದಲ ಸಲ. ಇದಕ್ಕೆ ವಿರೋಧ ಜಪಾನಿನ ಒಳಗೆ ಮಾತ್ರವಲ್ಲ-ನೆರೆಹೊರೆಯ ಚೀನಾ,ಕೊರಿಯಾ, ಫಿಲಿಪ್ಪೈನ್ಸ್ ಮುಂತಾದ ದೇಶಗಳಿಂದಲೂ ಬಂದಿದೆ. ಎರಡನೆಯ ಮಹಾಯುದ್ಧದಲ್ಲಿ ಜಪಾನಿ ಮಿಲಿಟರಿ ಬರ್ಬರತೆಯ ರುಚಿ ಕಂಡ ಈ ದೇಶಗಳು ಜಪಾನಿನ ಮಿಲಿಟರಿ ಪಾತ್ರಕ್ಕೆ ವಿರೋಧವಾಗಿದ್ದಾರೆ.

ಬಾಂಗ್ಲಾದೇಶದಲ್ಲಿ ವಿಶ್ವಬ್ಯಾಂಕ್‌ನ ಸಾಲದ ವಿರುದ್ಧ ಪ್ರದರ್ಶನ

ಬಾಂಗ್ಲಾದೇಶದ ವಿರೋಧ-ಪಕ್ಷಗಳ ಹಲವು ಮೈತ್ರಿಕೂಟಗಳು ವಿಶ್ವಬ್ಯಾಂಕ್ ಆ ದೇಶದ ಸರ್ಕಾರಕ್ಕೆ ಸಾಲ ನೀಡುವುದರ ವಿರುದ್ಧ ಭಾರಿಪ್ರದರ್ಶನಗಳನ್ನು ಏರ್ಪಡಿಸಿದ್ದವು. ಬಾಂಗ್ಲಾದೇಶದ ಸರ್ಕಾರದ ಆರ್ಥಿಕ ಸಾಧನೆಗಳನ್ನು ವಿಮರ್ಶಿಸಲು ಢಾಕ್ಕಾದಲ್ಲಿ ಸೇರಿರುವ 26 ದೇಶಗಳ 100 ಪ್ರತಿನಿಧಿಗಳು ತಂಗಿದ್ದ ಹೋಟೇಲಿನಮುಂದು ಈ ಭಾರಿ ಪ್ರದರ್ಶನಗಳು ನಡೆದುವು. ಐದು ಪಕ್ಷಗಳ ಎಡರಂಗ, ಎಂಟು ಪಕ್ಷಗಳ ಅವಾಮಿನಾಯಕತ್ವದ ರಂಗ ಮತ್ತು 'ಇಸ್ಲಾಮಿಕ್ ಮೂಲಭೂತ ವಾದಿ ಪಕ್ಷಗಳ ರಂಗಗಳು ಇದರಲ್ಲಿ ಭಾಗವಹಿಸಿದ್ದವು.

ಈ ಪ್ರದರ್ಶನದ ಉದ್ದೇಶ ಈರ್ಶದ್ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟಿಸುವುದು ಮತ್ತು ಈರ್ಶದ್ ಸರ್ಕಾರಕ್ಕೆ ಜನಬೆಂಬಲ ಇಲ್ಲ ಎಂದು ಸಾಬೀತು ಪಡಿಸುವುದು ಆಗಿತ್ತು. ಈರ್ಶದ್ ಸರ್ಕಾರ ಬಾಂಗ್ಲಾದೇಶದ ಜನತೆಯ ಪ್ರತಿನಿಧಿಗಳಲ್ಲ, ಆ ಸರ್ಕಾರಕ್ಕೆ ಕೊಟ್ಟ ಯಾವುದೇ ಸಾಲಕ್ಕೆ ಬಾಂಗ್ಲಾದೇಶದಜನತೆ ಜವಾಬ್ದಾರರಲ್ಲ ಎಂದು ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡಿದ ನಾಯಕರು ಹೇಳಿದರು. ಈರ್ಶದ್ ಸರ್ಕಾರ ರಾಜೀನಾಮೆಕೊಟ್ಟು, ಅಲಿಪ್ತ ಪಕ್ಷರಹಿತ ಹಂಗಾಮಿ ಸರ್ಕಾರದ ಮೇಲುಸ್ತುವಾರಿಯಲ್ಲಿ ಚುನಾವಣೆಗಳು ನಡೆಯಬೇಕೆಂದು ಪ್ರದರ್ಶನಕಾರರು ಆಗ್ರಹಪಡಿಸಿದರು.

ಸೋವಿಯೆತ್-ಜರ್ಮನ್ ಅನಾಕ್ರಮಣ ಒಪ್ಪಂದ

ಸೋವಿಯೆತ್ ಮತ್ತು ಜರ್ಮನ್ ಅಧ್ಯಕ್ಷರುಗಳು ಈ ಎರಡು ದೇಶಗಳ ನಡುವೆ ಅನಾಕ್ರಮಣ, ಸಹಕಾರ ಮತ್ತು ಉತ್ತಮ ನೆರೆಹೊರೆಯ ಸಂಬಂಧ ಕಾಪಾಡುವ ಎರಡು ದಶಕಗಳ ಕಾಲ ಜಾರಿಯಲ್ಲಿರುವ ಚಾರಿತ್ರಿಕ ಒಪ್ಪಂದಕ್ಕೆ ಸಹಿ ಹಾಕಿದರು. ಇದಕ್ಕಾಗಿ ಸೋವಿಯೆತ್ ಅಧ್ಯಕ್ಷ ಗೋರ್ಬಚೆವ್ ಜರ್ಮನ್ ರಾಜಧಾನಿಗೆ ಭೇಟಿ ಇತ್ತಿದ್ದರು. ಐಕ್ಯ ಜರ್ಮನಿಗೆ ಭೇಟಿ ನೀಡುತ್ತಿರುವ ವಿದೇಶಿ ಗಣ್ಯರಲ್ಲಿ ಗೋರ್ಬಚೆವ್ ಮೊದಲಿಗರು.

ಯಾವುದೇ ಪಾಶ್ಚಿಮಾತ್ಯ ದೇಶದ ಜತೆ ಇಂತಹ ಒಪ್ಪಂದಕ್ಕೆ ಸೋವಿಯೆತ್ ಮುಂದಾಗಿರುದು ಇದೇ ಮೊದಲು. ಪೂರ್ವ-ಪಶ್ಚಿಮ ಸಂಬಂಧಗಳಲ್ಲಿ ಈ ಒಪ್ಪಂಧ ಇನೊಂದು ಮೈಲಿಗಲ್ಲು ಎನ್ನಲಾಗಿದೆ.

ಬೀಡಿ ಕಾರ್ಮಿಕರ ಹೋರಾಟಕ್ಕೆ ಕರೆ

ದೇಶವ್ಯಾಪಿ ವಾರಾಚರಣೆಯ ಅಂಗವಾಗಿ ನವೆಂಬರ್ 7ರಂದು ಕುಷ್ಪೆಪದವಿನಬೀಡಿ ಕಾರ್ಮಿಕರ ಸಭೆಯು ಸುಂದರ ನಾಯ್ಕರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯು ನವೆಂಬರ್ 17 ರ ಸಮಾವೇಶ ಹಾಗೂ ಮುಂದೆ ಬರಲಿರುವ ಹೋರಾಟದ ಯಶಸ್ಸಿಗಾಗಿ,ಮತ್ತು ಖಾಸಗಿ ಬಸ್ ಮಾಲಿಕರು ಪ್ರಯಾಣ ದರ ಏರಿಸಿರುವುದನ್ನು ಖಂಡಿಸಿ ನವೆಂಬರ್ 12 ರಂದು ಕುಷ್ಪೆಪದವಿನಲ್ಲಿ ನಡೆಯುವ ಬಸ್ ತಡೆ ಚಳುವಳಿಯನ್ನು ಯಶಸ್ವಿಗೊಳಿಸಬೇಕೆಂದು ಬೀಡಿ ಕಾರ್ಮಿಕರಿಗೆ ಕರೆನೀಡಿತು. ಸಭೆಯನ್ನುದ್ದೇಶಿಸಿ ಕೆಲಸಗಾರರ ಸಂಘದಕಾರ್ಯದರ್ಶಿ ವಾಸುದೇವ ಆಚಾರಿಯವರು ಬೀಡಿ ಕಾರ್ಮಿಕರ 18 ಬೇಡಿಕೆಗಳ ಹೋರಾಟದ ವಿವರಣೆನೀಡುತ್ತಾ ಅಕ್ಟೋಬರ್ 20ರಂದು ಬೀಡಿಕಾರ್ಮಿಕರ ರಾಷ್ಟ್ರೀಯ ಸಮಿತಿಯ ಮುಖಾಂತರ ಕೇಂದ್ರ ಸರಕಾರಕ್ಕೆ ನೀಡಿ ರುವ ಬೇಡಿಕೆ ಪಟ್ಟಿಯನ್ನು ವಿವರಿಸಿದರು.

ಬಸ್ ತಡೆ ಚಳುವಳಿ

ಮಂಗಳೂರಿನಲ್ಲಿ ಖಾಸಗಿ ಬಸ್ಸು ಮಾಲಿಕರು ನವೆಂಬರ್ 1 ರಿಂದ ಏರಿಸಿರುವ ಪ್ರಯಾಣ ದರವನ್ನು ವಿರೋಧಿಸಿ ಡಿ.ವೈ.ಎಫ್.ಐ.ನ ಕುಷ್ಪೆಪದವು ಘಟಕದ ಆಶ್ರಯದಲ್ಲಿ ನವೆಂಬರ್ 12 ರಂದು ಜನ ಸಾಮಾನ್ಯರು ಬಸ್ ತಡೆ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ.

ಏರಿಸಿರುವ ದರವನ್ನೂ ಕೂಡಲೇ ಇಳಿಸಬೇಕು: ಅದಕ್ಕಾಗಿ ಹೋರಾಟವನ್ನು ಮುಂದುವರಿಸಲಾಗುವುದು. ಹಾಗೂ ಈ ಬಗ್ಗೆ ಸರಕಾರದ ಅಧಿಕಾರಿಗಳ ಗಮನಕ್ಕೂ ತರಲಾಗಿದೆ ಎಂದು ಸಂಘಟನೆಯ ಕಾರ್ಯದರ್ಶಿಎಸ್.ಎ.ಹಸನಬ್ಬರವರು ತಿಳಿಸಿದರು.

ಸಂತಾಪ


ಕಂಕನಾಡಿ ಗ್ರಾಮದ ಕುತ್ತಡ್ಕದ ಕಾ॥ ದೇವಪ್ಪ ಕಾರ್ಪೆಂಟರ್‌ರವರು ಅಕ್ಟೋಬರ್ 21 ರಂದು ನಿಧನರಾದರು. ಅವರಿಗೆ 30 ವರ್ಷ ವಯಸ್ಸಾಗಿತ್ತು. ಪಕ್ಷದ ಅಭಿಮಾನಿಯೂ ಹಾಗೂ ಐಕ್ಯರಂಗ ಓದುಗರಾಗಿದ್ದ ಕಾ॥ದೇವಪ್ಪ ಕಾರ್ಪೆಂಟರ್ ರವರ ನಿಧನಕ್ಕೆ ಒಕ್ಕಲ ಮೊಗರು ಮತ್ತು ಕಂಕನಾಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಭೆಯು ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಎಸ್.ಎಫ್.ಐ.ನ ಆಶ್ರಯದಲ್ಲಿ ವಿಚಾರ ಸಂಕಿರಣ

ಎಸ್.ಎಫ್.ಐ.ನ ಉತ್ತರ ಕನ್ನಡ ಜಿಲ್ಲಾ ಸಮಿತಿ ಆಶ್ರಯದಲ್ಲಿ ಕಾಶ್ಮೀರ ವಿವಾದ ಕುರಿತು ನವೆಂಬರ್ 6ರಂದು ಶಿರಸಿಯ ಎಂ.ಇ.ಎಸ್. ವಾಣಿಜ್ಯ ಮಹಾವಿದ್ಯಾಲಯದಲ್ಲಿ ವಿಚಾರ ಸಂಕಿರಣ ನಡೆಯಿತು.

ಉಪನ್ಯಾಸಕರಾಗಿ ಎಸ್.ಎಫ್.ಐ.ನ ರಾಜ್ಯ ಸಮಿತಿ ಕಾರ್ಯದರ್ಶಿ ಕಾ॥ ಎಸ್.ವೈ. ಗುರುಶಾಂತ್ ಮಾತನಾಡುತ್ತ ಕಾಶ್ಮೀರ ಸಮಸ್ಯೆಯನ್ನು ಬಂದೂಕಗಳಿಂದ ಬಗೆಹರಿಸಲು ಸಾಧ್ಯವಿಲ್ಲ. ಅಲ್ಲಿನ ಜನತೆಯ ನಡುವೆ ಸ್ನೇಹ, ಪ್ರೀತಿ, ವಿಶ್ವಾಸಗಳಿಸುವ ದಿಕ್ಕಿನಲ್ಲಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಪ್ರೊ॥ ಮುರಳೀಧರ ಕುಮುನದನ್ ವಹಿಸಿದ್ದರು.



K R N M/ BGW - 293 MAG (2) PRB DECR 319 - 78/79

ವಿಳಾಸ:

ಮಹಿಳಾ ಸಮ್ಮೇಳನ

ಪುಟ 1 ರಿಂದ

ವರ್ಷದ ಪತಾಕೆಯನ್ನು ಮೇಲೇರಿಸುತ್ತಿದ್ದ ಹಾಗೆ ವಿವಿಧ ಭಾಷೆಗಳ ಹಲವಾರು ಘೋಷಣೆಗಳು ಮುಗಿಲು ಮುಟ್ಟುವಂತೆ ಮೊಳಗಿದವು. ನಂತರ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾದ ಸುಶೀಲಾ ಗೋಪಾಲನ್ ರವರಿಂದ ಆರಂಭಿಸಿ ಎಲ್ಲಾ ಪ್ರತಿನಿಧಿಗಳು ಹುತಾತ್ಮ ಸಂಗಾತಿಗಳಿಗೆ ಪುಷ್ಪಗಳನ್ನು ಅರ್ಪಿಸಿದರು.

ನಂತರ ಸಮ್ಮೇಳನಾಂಗಣವನ್ನು ಪ್ರವೇಶಿಸುತ್ತಿದ್ದ ಹಾಗೆ, ವಿವಿಧ ರಾಜ್ಯಗಳ ವೇಷಭೂಷಣಗಳನ್ನು ತೊಟ್ಟ ಬಣ್ಣದ ಬಣ್ಣರು ಐಕ್ಯತೆಯ ಸಂಕೇತವಾಗಿ, "We shall over come....." ಹಾಡಿನ ಮೂಲಕ ಬದಲಾವಣೆಯ ಬಯಕೆ ಯೊಂದಿಗೆ ಬಂದಿದ್ದ ಪ್ರತಿನಿಧಿಗಳ ಮನಸ್ಸಿಗೆ ಭರವಸೆಯ ಕಿಚ್ಚನ್ನು ಹಚ್ಚಿದರು.

ಮಂಜರೀಗುಪ್ತ, ಕನಕ್ ಮುಖರ್ಜಿ, ಅಹಲ್ಯಾ ರಂಗ್ನೇಕರ್, ಮಂಗಲ್ ಲಕ್ಷ್ಮೀದೇವ್ ವರ್ಮನ್, ಸರೋಜಿನಿ ಬಾಲಾನಂದನ್, ರಾಜೇಂದರ್ ಕೌರ್, ಲಕ್ಷ್ಮಿ ಸೆಹಗಲ್ ಇವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಸಮ್ಮೇಳನದ ಕಾರ್ಯಕ್ರಮಗಳನ್ನು ರೂಪಿಸಲು ರಚಿಸಲಾಯಿತು. ಅ.ಭಾ.ಪ್ರ.ಮ.ಸ.ಯ ಕೇಂದ್ರ ಸಮಿತಿಯ ಸೆಕ್ರೆಟಾರಿಯಟ್‌ಸದಸ್ಯರನ್ನೊಳಗೊಂಡ ಸಂಚಾಲನಾ ಸಮಿತಿಯನ್ನು ರಚಿಸಲಾಯಿತು.

ಬಿ.ಟಿ.ರಣದಿವೆ, ಸರೋಜ್ ಮುಖರ್ಜಿ, ಲೀಲಾ ಸುಂದರಯ್ಯ ಮುಂತಾದವರ ನಿಧನಕ್ಕೆ ಸಂಬಂಧಿಸಿದ ಶ್ರದ್ಧಾಂಜಲಿ ನಿರ್ಣಯಗಳನ್ನು ಕ್ರಮವಾಗಿ ಬೃಂದಾ ಕಾರಟ್ ಮೈಥಿಲಿ ಶಿವರಾಮನ್ ಮತ್ತು ಮುತ್ತು ಚೆಟ್ಟಿಯಾರ್ ಇವರುಗಳು ಮಂಡಿಸಿದರು. ಈ ಮಧ್ಯೆ ಅಸುನೀಗಿದ ಹತ್ತಾರು ಕ್ರಾಂತಿಕಾರಿಗಳಿಗೆ ಲಕ್ಷ್ಮಿ ಸೆಹಗಲ್ ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ಸ್ವಾಗತ ಸಮಿತಿ ಕಾರ್ಯದರ್ಶಿನಿಯಾಗಿದ್ದ ಶ್ಯಾಮಲೀ ಗುಪ್ತ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾ|| ಜ್ಯೋತಿಬಸು ಅವರು, "ಕೇಂದ್ರದಲ್ಲಿ ಕಾಂಗ್ರೆ ಬೆಂಬಲದೊಡನೆ ಸರ್ಕಾರ ರಚಿಸಲು ಉದ್ದೇಶಿಸಿರುವ ಜನತಾದಳ (ಸಮಾಜವಾದಿ)ವು ತನ್ನ ಅವಧಿಯನ್ನು ಪೂರ್ಣಗೊಳಿಸಲಾರದು. ಏಕೆಂದರೆ ಅದು ತತ್ವವಿಲ್ಲದ ಮೈತ್ರಿ ಹಾಗೂ ರಾಜಕೀಯ ಅನುಕೂಲ ಸಿಂಧು... ಇದು 1989ರ ಚುನಾವಣೆಯಲ್ಲಿ ಜನತೆಯು ನೀಡಿದ ತೀರ್ಪಿಗೆ ವಿರುದ್ಧವಾದದ್ದು" ಎಂದು ಅಭಿಪ್ರಾಯಪಟ್ಟರು.

ಮತೀಯ ಗಲಭೆಗಳ ಬಗ್ಗೆ ಇಲ್ಲ ಸಲ್ಲದ ತಿರುಚು ಮುರುಚು ವರದಿಗಳನ್ನು ನೀಡುತ್ತಿರುವ ಪತ್ರಿಕೆಗಳ ನೀತಿಯನ್ನು ಖಂಡಿಸುವ ನಿರ್ಣಯವನ್ನು ಸುಭಾಷಿಣಿಅಲಿ (M.P)ಯವರು ಮಂಡಿಸುತ್ತಾ, ಸಂಕುಚಿತ ಮತೀಯ ಭಾವನೆಗಳನ್ನು ರಾಜಕೀಯ ಲಾಭಕ್ಕೆ ಉಪಯೋಗಿಸುವ ಬಿಜೆಪಿ, ವಿ.ಹೆಚ್.ಪಿ.ಯು, ಹಿಂದೂ ರಾಷ್ಟ್ರದ ಬಗ್ಗೆ ಹೇಳುವ ಬಿಜೆಪಿಯು ಭಾರತದ ವಿರುದ್ಧ ಘೋಷಣೆಗಳನ್ನು ನೀಡುವ ವಿಚ್ಛಿದ್ರಕಾರಿಗಳೆರಡೂ ಭಾರತದ ಐಕ್ಯತೆಗೆ ವಿಪತ್ಕಾರಿಯೆಂದು ನಿರ್ಣಯದಲ್ಲಿ ತಿಳಿಸಿದರು. ಇಂತಹ ಶಕ್ತಿಗಳ ವಿರುದ್ಧ ಸ್ತ್ರೀಯರನ್ನು ಅಣಿನೆರೆಸಲು ಈ ನಿರ್ಣಯವು ಕರೆ ಕೊಟ್ಟಿದೆ.

ದೇಶದಲ್ಲಿ ಮತೀಯ ಹಾಗೂ ವಿಚ್ಛಿದ್ರಕಾರಕ ಶಕ್ತಿಗಳು ನಿರ್ಮಿಸಿರುವ ಆಪತ್ತಿನ ಪರಿಸ್ಥಿತಿಯ ಲಾಭ ಪಡೆದುಕೊಂಡು ಪುನಃ ಅಧಿಕಾರಕ್ಕೆ ಬರಲು ಕಾಂಗ್ರೆ ಪಕ್ಷವು ಪ್ರಯತ್ನಿಸುತ್ತಿದೆಯೆಂದು ಪ್ರಧಾನ ಕಾರ್ಯದರ್ಶಿ ಸುಶೀಲಾ ಗೋಪಾಲನ್ ಅವರು ಸಮ್ಮೇಳನದ ರಾಜಕೀಯ ವರದಿಯನ್ನು ಮಂಡಿಸುತ್ತಾ ಹೇಳಿದರು.

ಮಹಿಳೆಯರ ಬೇಡಿಕೆಗಳು ಈಡೇರಬೇಕಾದರೆ ಇಂತಹ ವ್ಯವಸ್ಥೆಯ ವಿರುದ್ಧದ ಸಮಗ್ರ ಹೋರಾಟವಿಲ್ಲದೆ ಸಾಧ್ಯವಿಲ್ಲವೆಂದು, ಮಹಿಳೆಯರಿಗೆ ಸಮಾಜದಲ್ಲಿ ಸಮಾನತೆ ಸಿಗಬೇಕೆಂದು ಸಂಘಟನೆಯು ಸತತವಾಗಿ ಹೋರಾಟ ನಡೆಸಿಕೊಂಡು ಬರುತ್ತಿದೆಯೆಂದು ಸುಶೀಲಾ ಗೋಪಾಲನ್ ಹೇಳಿದರು.

ಶುಕ್ರವಾರ ಅಪರಾಹ್ನ ಮಂಡಿಸಿದ ರಾಜಕೀಯ ವರದಿಯ ಮೇಲಿನ ಚರ್ಚೆಯು ಶನಿವಾರ ಪೂರ್ಣಗೊಂಡಿತು. ಚರ್ಚೆಯಲ್ಲಿ ಕೃಷ್ಣಕುಮಾರಿ(ಕೇರಳ), ಉಷಾಡೇ (ಗುಜರಾತ್), ಕಿರಣ್ ಓ.ಕೆ. (ಮಹಾರಾಷ್ಟ್ರ) ಸರಿತಾ ಸಿಂಹ (ಬಿಹಾರ), ರಾಜಮ್ಮ (ಕರ್ನಾಟಕ), ಬತ್ತಿ (ಆಂಧ್ರ), ರೂಪಾರ್ಂ ಜೈಸ್ವಾಲ್ (ಉ.ಪ್ರ), ಕಮಲ್‌ಸೇನ್ (ಪ.ಬಂಗಾಳ), ಇವರುಗಳು ಭಾಗವಹಿಸಿದ್ದರು. ರಾಜಕೀಯ ವರದಿಯ ಮೇಲೆ ನಡೆದ ಚರ್ಚೆಗೆ ಅಹಲ್ಯಾ ರಂಗ್ನೇಕರ್ ಉತ್ತರಿಸಿದರು.

ಶನಿವಾರ ಸಂಜೆ ಸುಶೀಲಾ ಗೋಪಾಲನ್ ಸಂಘಟನಾ ವರದಿಯನ್ನು ಮಂಡಿಸಿದರು. ಒಂದೊಂದು ರಾಜ್ಯದಲ್ಲೂ ಕಳೆದ ದಿನಗಳಲ್ಲಿ ನಡೆದ ಹೋರಾಟಗಳಲ್ಲಿ ಅ.ಭಾ.ಪ್ರ.ಮ.ಸಂ.ಯು. ಅಖಿಲ ಭಾರತ ಮಟ್ಟದಲ್ಲಿ ಒಂದು ದೊಡ್ಡ ಸಂಘಟನೆಯಾಗಿ ಬೆಳೆಯಲು ಸಾಧ್ಯವಾಗಿದೆ ಎಂದು. ಎರಡನೇ ಸಮ್ಮೇಳನದ ಸಮಯಕ್ಕೆ 18 ಲಕ್ಷ ಸದಸ್ಯರನ್ನೊಳಗೊಂಡಿದ್ದ ಸಂಘಟನೆಯು ಇಂದು 30 ಲಕ್ಷ ಸದಸ್ಯರನ್ನೊಳಗೊಂಡು ಮಹತ್ತರವಾಗಿ ಬೆಳೆದಿದೆ ಎಂದು ಅವರು ಘೋಷಿಸಿದರು.

ಅಖಿಲ ಭಾರತ ಕಿಸಾನ್ ಸಭಾವನ್ನು ಪ್ರತಿನಿಧಿಸಿ ಗೋದಾವರಿ ಪರುಳೇಕರ್, ಸಿಐಟಿಯು ಮಹಿಳಾ ಕಾರ್ಮಿಕರ ಸಂಘಟನೆಯನ್ನು ಪ್ರತಿನಿಧಿಸಿ ವಿಮಲಾ ರಣದಿವೆಯವರು ಸಮ್ಮೇಳನಕ್ಕೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪಾದ್, ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್, ಡಿವೈಎಫ್‌ಐನ ಅಖಿಲ ಭಾರತ ಕಾರ್ಯದರ್ಶಿ ಹನನ್‌ಮುಲ್ಲಾ, ಎಸ್.ಎಫ್.ಐ.ನ ಪ್ರಧಾನ ಕಾರ್ಯದರ್ಶಿ ನೀಲೋತ್ಪಲ್ ಬಸು ಮುಂತಾದವರು ಸಮ್ಮೇಳನಕ್ಕೆ ಶುಭಾಶಯಗಳನ್ನು ಕೋರಿದರು.

ವ್ಯರ್ಥಾರೋಪ....

ಪುಟ 1 ರಿಂದ

ಕಡೆಗಳಲ್ಲಿ ಸಿಕ್ಕಿಕೊಂಡು, ಜೈಲಿನಲ್ಲೂ, ಕೋರ್ಟುಕಚೇರಿಗಳಲ್ಲೂ ಕಷ್ಟಕ್ಕೊಳಗಾದವರು ಕಮ್ಯುನಿಸ್ಟರೆಂಬುದನ್ನು ನಾರಾಯಣ ಕುಮಾರ ನೆನಪಿಸಿಕೊಳ್ಳುವುದಗತ್ಯ. ಏಕೀಕರಣ ಚಳುವಳಿಯಲ್ಲಿ ನಾರಾಯಣ ಕುಮಾರ ನಂಥವರು ಎಲ್ಲಿದ್ದರು. ಒಕ್ಕಲಿಗ ಮುಖಂಡರ ಒತ್ತಡಕ್ಕೆ ಮಣಿದು ಹೊಸ ಕರ್ನಾಟಕ ರಾಜ್ಯವನ್ನು ಮೈಸೂರೆಂದು ಹೆಸರಿಸಿದಾಗ ಪ್ರತಿಭಟನೆ ಮಾಡಿದವರು ಕಮ್ಯುನಿಸ್ಟರು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾದಾಗ ರಾಜ್ಯದ ಹೆಸರು ಬದಲಾಯಿಸಿ ಕರ್ನಾಟಕವೆಂಬ ಹೆಸರಿಡಬೇಕೆಂದು ಒತ್ತಾಯಿಸಿದವರ ಪೈಕಿ ಕಮ್ಯುನಿಸ್ಟ್ ಪಕ್ಷವೂ ಒಂದು. ಕನ್ನಡ ರಾಜ್ಯಭಾಷೆ ಆಗಬೇಕು ಎಂದು ಪ್ರತಿಪಾದಿಸುತ್ತಾ ಬಂದವರೂ ಕಮ್ಯುನಿಸ್ಟರೇ ಎಂಬುದನ್ನು ನಾರಾಯಣಕುಮಾರರಂಥವರು ಮರೆಯಬಾರದು.

ಭಾರತ ದೇಶದ ಸಂವಿಧಾನಕ್ಕನುಗುಣವಾಗಿ ಯಾವ ರಾಜ್ಯದವನೇ ಇರಲಿ ಯಾವ ಭಾಷೆ ಆಡುವವನೇ ಇರಲಿ ದೇಶದ ಯಾವ ಮೂಲೆಯಲ್ಲಿ ಬೇಕಾದರೂ ಇರಬಹುದು, ಕೆಲಸಮಾಡಬಹುದು, ಉದ್ಯೋಗ ಮಾಡಬಹುದು ಎಂದು ಸಂವಿಧಾನ ಸ್ಪಷ್ಟಪಡಿಸಿರುವ ಕಾರಣದಿಂದಲೇ ಬೇರೆ ರಾಜ್ಯಗಳಲ್ಲಿ ಕನ್ನಡಿಗರು ಯಾವ ಅಡ್ಡಿ ಆತಂಕವಿಲ್ಲದೆ ಕೈಗಾರಿಕೆ, ಉದ್ಯೋಗ, ಹಾಗೆಯೇ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿ ಸುಖವಾಗಿ ಜೀವನ ನಡೆಸುತ್ತಿರುವುದನ್ನು ನೋಡುತ್ತೇವೆ. ಹಾಗಿರುವಾಗ ನಾರಾಯಣ ಕುಮಾರರಂಥವರು, ಕಮ್ಯುನಿಸ್ಟರನ್ನು ತೆಗಳಿ, ಮಹಿಶಿ ವರದಿಯನ್ನು ಎತ್ತಿ ಹಿಡಿಯುವುದರಲ್ಲಿ ಅರ್ಥವಿದೆಯೇ? ಬೇರೆ ರಾಜ್ಯಗಳಲ್ಲಿರುವ ಕನ್ನಡಿಗರ ಮೇಲೆ ಅದರ ಪರಿಣಾಮವೇನಾದೀತೆಂಬುದನ್ನು ಅವರು ಮನವರಿಕೆ ಮಾಡಿಕೊಂಡಿದ್ದಾರೆಯೆ?!

ನಾರಾಯಣ ಕುಮಾರರಂಥವರು ಅಪಾಯಕಾರಿ ಧೋರಣೆಯನ್ನನುಸರಿಸಿದ್ದಾರೆ. ಅದನ್ನವರು ಬಿಟ್ಟು ಕೊಡುವುದಗತ್ಯ.

ಎನ್.ಕೆ.ಉಪಾಧ್ಯಾಯ.

ಈ ವಾರ

★ ಪಾಕಿಸ್ತಾನ ಚುನಾವಣೆಗಳಲ್ಲಿ ಬೆನಜೀರ್ ಭುಟ್ಟೋರ ಪರಾಜಯ ನಿಜಕ್ಕೂ ಆಘಾತಕರ. ಚುನಾವಣೆಗಳಲ್ಲಿ ವ್ಯಾಪಕ ಅಕ್ರಮ ನಡೆದಿದ್ದೆ ಎಂಬ ಬೆನ್‌ಜೀರ್‌ರ ಆರೋಪಕ್ಕೆ ಸ್ಪಷ್ಟವಾದ ಹಾಗೂ ಸ್ವತಂತ್ರ ಸಾಕ್ಷ್ಯ ಇನ್ನೂ ದೊರೆಯಬೇಕಾಗಿದೆಯಾದರೂ ಅದನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಮತದಾರರು ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸಿದ್ದನ್ನು ಕಂಡರೆ ಪಿ.ಪಿ.ಯ. ಬೆಂಬಲಿಗರನ್ನು ಗಾಬರಿಗೊಳಿಸುವಲ್ಲಿ ಕುಖ್ಯಾತವಾದ ಐ.ಎಸ್.ಐ. ವ್ಯಾಪಕವಾದ ಕೆಲಸ ನಡೆಸಿತ್ತು ಎಂಬುದನ್ನು ಸೂಚಿಸುತ್ತದೆ.

'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕೀಯ ಇಲ್ಲ... ಇಂದ್ರಮಲ್ಹೋತ್ರ 'ಸಂಡೆ'ಯಲ್ಲಿ, ನವೆಂಬರ್ 4-10

★ ಕೊನೆಗೂ ಅಧಿಕಾರಕ್ಕಾಗಿ ಜೊಲ್ಲು ಸುರಿಸುತ್ತಿದ್ದ ಚಂದ್ರಶೇಖರ - ದೇವಿಲಾಲರು ತಮ್ಮ ನಿಜರೂಪ ತೋರಿಸಿದ್ದಾರೆ. ಮುಂದಿನ ಚುನಾವಣೆ ವೇಳೆಗೆ 'ನಾಯಿ'ಯ ಚಿಹ್ನೆಗಾಗಿ 'ದಳ'ವಾಯಿಗಳಲ್ಲಿ ಪೈಪೋಟಿ ನಡೆಯುವುದರಲ್ಲಿ ಈಗ ಸಂದೇಹವಿಲ್ಲ!

ಇದೇ ವೇಳೆಗೆ ಹೊಂಚು ಹಾಕಿ ಕಾಯುತ್ತಿರುವ ಸಮಯಸಾಧಕ "ಕೈ" (ಕೊಟ್ಟು) ಪಕ್ಷಕ್ಕೆ ಮುಂದೆ 'ನರಿ' ಚಿಹ್ನೆ ಹೊಂದುವುದೇ?!

ಇವೆರಡರ ಜತೆಗೆ ದೇಶದ ಯುವಪ್ರತಿಭೆಗಳನ್ನು ಹೂತುಹಾಕಿ ಗೋರಿಕಟ್ಟುವಲ್ಲಿ ನಿರತವಾಗಿರುವ ಮೂರನೇ ಹಾಗೂ ಕೊನೆಯ ರಾಷ್ಟ್ರೀಯ ಪಕ್ಷದ 'ಧರ್ಮ'ದರ್ಶಿ ಚಿಹ್ನೆ 'ತೋಳ'ವಂತೆ.

ಮೂರೂ ಮಹಾನ್ ಪಕ್ಷಗಳು! 'ಧನ್ಯ ನನ್ನ ದೇಶ !

'ಪ್ರಜಾವಾಣಿ' ವಾಚಕರ ವಾಣಿಯಲ್ಲಿ 9-11-1990

★...... ಆದರೂ ನೈತಿಕವಾಗಿ ಒಂದು ದೊಡ್ಡ ಪಕ್ಷದ ಪುಟಾಣಿ ಗುಂಪೊಂದಕ್ಕೆ ಬೆಂಬಲ ನೀಡಿ ಆ ಗುಂಪಿನ ನಾಯಕನನ್ನು ಪ್ರಧಾನಿ ಕುರ್ಚಿಯಲ್ಲಿ ಕೂರಿಸಿ ಸೂತ್ರದ ಗೊಂಬೆಯಾಟ ಆಡಲು ರಾಜ್ಯಾಂಗದಲ್ಲಿ ಅವಕಾಶವಿದ್ದರೂ ಅದಕ್ಕೆ ನೈತಿಕ ನೆಲೆಗಟ್ಟಿದೆಯೇ ಎನ್ನುವ ವಿಚಾರವನ್ನು ಪ್ರಜ್ಞಾವಂತರೆಲ್ಲರೂ ಪರಿಗಣಿಸಬೇಕಾಗಿದೆ.

ಚಂದ್ರಶೇಖರ್ ಗುಂಪಿನ ಎಲ್ಲ ಲೋಕಸಭೆ ಸದಸ್ಯರುಗಳು" ಮಂತ್ರಿಗಳಾಗುವ ಅವಕಾಶವನ್ನು ಎದುರು ನೋಡುತ್ತಿರುವುದಂತೂ ಖಂಡಿತ.

'ಕನ್ನಡ ಪ್ರಭ' ಸಂಪಾದಕೀಯ ನವೆಂಬರ್ 9

★ ರಾಷ್ಟ್ರೀಯ ರಂಗ ಸರಕಾರ ಪತನವಾದ ಬಗ್ಗೆ ಯಾರಾದರೂ ಅವರವರ ರಾಜಕೀಯ ಒಲವನ್ನು ಅನುಸರಿಸಿ ಸಂತೋಷ ಅಥವಾ ಬೇಸರ ವ್ಯಕ್ತಪಡಿಸಬಹುದು. ಆದರೆ, ತನ್ನ ಸಂಕ್ಷಿಪ್ತ ಅವಧಿಯಲ್ಲಿ ಈ ಸರಕಾರ ಉತ್ತಮ ಕೆಲಸ ಮಾಡಿತ್ತೆನ್ನುವುದನ್ನು ಯಾರೂ ನಿರಾಕರಿಸಲಾಗದು.

'ಡೆಕನ್ ಹೆರಾಲ್ಡ್' ಸಂಪಾದಕೀಯದಲ್ಲಿ 9 ನವೆಂಬರ್

★ ಕಾಲ ಚಕ್ರದ ಉರುಳು 21 ವರ್ಷಗಳಲ್ಲಿ ಒಂದು ಸುತ್ತು ಮುಗಿಸಿದಂತೆ ಆಗಿದೆ. 1969 ರಲ್ಲಿ ಕಾಂಗ್ರೆಸ್ ಹೋಳಾಗಿ 'ರೂಲಿಂಗ್' ಮತ್ತು 'ಸಂಸ್ಥಾ' ತುಂಡುಗಳಾಗಿ ಹೋದ ಪ್ರಸಂಗದ ಪುನರಾವರ್ತನೆಯ ನಡೆದಂತಾಗಿದೆ.

ಕಟ್ಟುವ ಕೆಡುವುವ ಈ ಮಕ್ಕಳಾಟದಲ್ಲಿ ತಲ್ಲೀನರಾಗಿರುವ ಮಹಾಪಾತ್ರರಿಗೆ ಇತಿಹಾಸ ತಮ್ಮನ್ನು ಹೇಗೆ ಗುರ್ತಿಸುತ್ತದೆಂಬ ಅಂಜಿಕೆ ಲವಲೇಶವೂ ಇದ್ದಂತೆ ಕಾಣುತ್ತಿಲ್ಲ.

ವಿ.ಪಿ.ಸಿಂಗ್ ಸರ್ಕಾರದ ಪತನಕ್ಕೆ ಕಾಂಗ್ರೆಸ್- ಭಾ.ಜ.ಪ. ಗಳೆರಡೂ ಕೃತ ಸಂಕಲ್ಪರಾಗಿ ನಿಂತ ಅಪಾಯದ ಸನ್ನಿವೇಶದಲ್ಲೂ, ಐಕ್ಯದ ಅಗತ್ಯ ಕಾಣಿಸಲಿಲ್ಲವೆಂದರೆ ಇದರ ಅರ್ಥಸ್ಪಷ್ಟ - ಈ ಜನ ಐಕ್ಯದ ದೀಕ್ಷೆಗೆ ಬದ್ಧರೇ ಅಲ್ಲ, ವಾಸ್ತವವಾಗಿ ವಿಘ್ನ ಸಂತೋಷಿಗಳಿವರು.

...... ಪರಿಪೂರ್ಣ ಸ್ವಾತಂತ್ರ್ಯವನ್ನು ಅವರಿಗೆ (ಶೇಖರ್) ನೀಡುವ ಮೂಲಕ ಸರ್ಕಾರ ಯಶಸ್ವಿಗೊಳಿಸುವುದಕ್ಕೆ ಆಸ್ಪದ ಕೊಡುವುದಂತೂ ರಾಜೀವ ಗಾಂಧಿಯವರ ಬಯಕೆಯಲ್ಲ.

ನವೆಂಬರ್ 7 ರ 'ಕನ್ನಡ ಪ್ರಭ' ಸಂಪಾದಕೀಯ.

ಹೊಲಸು ನಾಟಕ

ಪುಟ 1 ರಿಂದ

ಈ ಬಗ್ಗೆ ಮೌನವಾಗಿದ್ದಾರೆ.

ವಿ.ಪಿ.ಸಿಂಗ್ ತನ್ನ ಸರಕಾರವನ್ನು ಪಣಕ್ಕಿಟ್ಟದ್ದು ಇದೊಂದೇ ವಿಷಯದ ಮೇಲಲ್ಲ. ಜನ ಯಾವ ಆಧಾರದ ಮೇಲೆ ಅವರಿಗೆ ಐದು ವರ್ಷ ಆಳುವ ಅಧಿಕಾರ ನೀಡಿದ್ದರೋ ಆ ತಮ್ಮ ವಚನವನ್ನು ಅವರು ಪಾಲಿಸಿದರು. ತನ್ನ ಸರಕಾರ, ಪ್ರಧಾನಮಂತ್ರಿ ಪದವನ್ನು ಉಳಿಸಿಕೊಳ್ಳಲು ಕಾಂಗ್ರೆಸ್(ಐ) ನೊಂದಿಗೆ ಕಳ್ಳತನದಿಂದ ರಾಜಿಮಾಡಿಕೊಳ್ಳಲು ಅವರು ಸಿದ್ಧರಾಗಲಿಲ್ಲ. ಅತ್ತ ಕೋಮುವಾದ, ಜಾತ್ಯತೀತತೆಯ ವಿಷಯದಲ್ಲಿ ಬಿ.ಜೆ.ಪಿ.ಯೊಂದಿಗೆ ಅನೀತಿಯುತ ರಾಜಿಯನ್ನು ಮಾಡಿಕೊಳ್ಳಲಿಲ್ಲ.

ತದ್ವಿರುದ್ಧವಾಗಿ ಚಂದ್ರಶೇಖರ್ ಕಾಂಗ್ರೆಸ್ (ಐ)ನ ನೆರವಿನೊಂದಿಗೆ ರಚಿಸುವ ಸರಕಾರದ ಬಗ್ಗೆ ಆನಂದ ತುಂದಿಲರಾಗಿದ್ದಾರೆ. ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಇಳಿಸುವ ಜನಾದೇಶದ ಮೇಲೆ ತನ್ನ ಸ್ಥಾನ ಗೆದ್ದುಕೊಂಡಾತ ಅದೇ ಕಾಂಗ್ರೆಸ್(ಐ) ಮತ್ತೆ ಅಧಿಕಾರಕ್ಕೆ ಜಿಗಿಯಲು ನೆರವಾಗುತ್ತಿರುವುದು ಅತ್ಯಂತ ನಾಚಿಕೆಗೇಡು.

ಅಲ್ಲಗಳೆಗಾಗಿ, ವರ್ಷಗಳಿಂದ ಬೆಳೆಸಿಕೊಂಡ ಒಂದು ವೈಯಕ್ತಿಕ ಆಕಾಂಕ್ಷೆ ತೀರಿಸಿಕೊಳ್ಳಲು ಎಷ್ಟು ಬೇಗನೇ ಅವರು ಮತ್ತು ಅವರ ಚೇಲಾಗಳು ಕಾಂಗ್ರೆಸ್ (ಐ)ನ ಬಾಲವಾಗಲು ಸಿದ್ಧರಾದರು! ತಮ್ಮ ಆಕಾಂಕ್ಷೆ ತೀರಿಸಿಕೊಳ್ಳುವ ಭರದಲ್ಲಿ ಅವರ ಬಾಲನಾಯಿಯನ್ನಾಡಿಸಲಾರದು ನಾಯಿಯೇ ಬಾಲವಾಡಿಸುವುದು ಎಂಬುದನ್ನೂ ನೆನಪಿಸಿಕೊಳ್ಳದಾದರು. ಚಂದ್ರಶೇಖರ್ ಇದನ್ನು ಮರೆಮಾಡಲು ಎಷ್ಟೇಪ್ರಯತ್ನಿಸಿದರೂ, ಮುಂಬರುವ ದಿನಗಳಲ್ಲಿ ಈ ಹೊಲಸು ಸಂಗತಿ ಸ್ಪಷ್ಟವಾಗುತ್ತಾ ಹೋಗುತ್ತದೆ. ಚಂದ್ರಶೇಖರೆಂಬ ಬಾಲವನ್ನು ಕಾಂಗ್ರೆಸ್ ಆಡಿಸುತ್ತದೆಂಬ ಸಂಗತಿ ಸ್ಪಷ್ಟವಾಗುತ್ತಾ ಹೋಗುತ್ತದೆ. ಒಟ್ಟಿನಲ್ಲಿ, ಇದೊಂದು ಜನತೆಯನ್ನು ವಂಚಿಸಿದ ಒಂದು ಅತ್ಯಂತ ಹೊಲಸುನಾಟಕ.

ಕಳೆದ ವರ್ಷ ಸಾರ್ವತ್ರಿಕ ಚುನಾವಣೆ ನಡೆದಂದಿನಿಂದ ಇಂದಿನವರೆಗೂ ಎಡಶಕ್ತಿಗಳು ಪದೇಪದೇ, ನಿರಂತರವಾಗಿ ದೇಶದ ಜಾತ್ಯಾತೀತ ಸ್ವರೂಪವನ್ನು ಉಳಿಸಲು ಅವಿರತ ಹೋರಾಟ ನಡೆಸಬೇಕೆಂದು ಪ್ರತಿವಾದಿಸುತ್ತಾ ಬಂದಿವೆ. ವಿ.ಪಿ.ಸಿಂಗ್ ಸರಕಾರದ ಪತನದೊಂದಿಗೆ ಈ ಹೋರಾಟ ನಿಲ್ಲಲು ಯಾವ ಕಾರಣವೂ ಇಲ್ಲ. ಈಗ ಆಡಳಿತದ ಜವಾಬ್ದಾರಿಯಿಂದ ಮುಕ್ತವಾಗಿರುವ ಜನತಾದಳ ಮತ್ತು ರಾಷ್ಟ್ರೀಯ ರಂಗ ಎಡಶಕ್ತಿಗಳೊಂದಿಗೆ ಇನ್ನೂ ದೃಢವಾಗಿ ಕೈ ಜೋಡಿಸಿ ಮುಂಬರುವ ದಿನಗಳಲ್ಲಿ ಕೋಮುವಾದಿ ಆಟಗಳನ್ನು ವಿಫಲಗೊಳಿಸುವ, ಈ ದೇಶದ ಜಾತ್ಯತೀತತೆಯನ್ನು ರಕ್ಷಿಸುವ ಹೋರಾಟವನ್ನೂ ಮುಂದೊಯ್ಯಬೇಕು.

ಈ ದೇಶದ ಬಹುಪಾಲು ಜನತೆ ಮೂಲತಃ ಜಾತ್ಯತೀತರು ದೇಶದ ಜಾತ್ಯತೀತ ಸ್ವರೂಪ ರಕ್ಷಿಸುವ ಈ ಮಹತ್ವದ, ನಿರ್ಣಾಯಕ ಹೋರಾಟದಲ್ಲಿ ಈ ಅಪಾರ ಜನಸ್ತೋಮವನ್ನು ಅಣಿನೆರೆಸಬೇಕು. ಅಣಿನೆರೆಸುವುದು ಸಾಧ್ಯ. ಇನ್ನು ಸಮಯ ವ್ಯರ್ಥಮಾಡಬಾರದು. ಇದು ತಕ್ಷಣ ನೆರವೇರಿಸಬೇಕಾದ ಕರ್ತವ್ಯ. ಕಳೆದ ಕೆಲವು ವಾರಗಳಲ್ಲಿ ಮಾಡಿದಂತೆ ಈ ರಾಜಕೀಯ ಶಕ್ತಿಗಳು ಜಾತ್ಯತೀತತೆಯ ಪ್ರಶ್ನೆ ಎತ್ತಿಕೊಂಡರೆ ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸಾಧ್ಯ. ಭಾರತವನ್ನು ಇನ್ನಷ್ಟು ಕೋಮು ವಿನಾಶದ ದುಸ್ವಪ್ನಗಳಿಂದ ಉಳಿಸಲು ಸಾಧ್ಯ.

ಸಿಡಿದು ಹೋದ ಗುಂಪುಗಳು ದೇಶದ ಐಕ್ಯತೆ ರಕ್ಷಿಸಲಾರವು

ಕಾಂಗ್ರೆಸ್(ಐ), ಬಿ.ಜೆ.ಪಿ. ಹಾಗೂ ಜನತಾದಳದ ಪಕ್ಷಾಂತರಿಗಳ ಗುಂಪೊಂದರ ಅನೀತಿಯುತ ಹಾಗೂ ಅಘೋಷಿತ ಕೂಟ ನವಂಬರ್ 7ರಂದು ಲೋಕಸಭೆಯಲ್ಲಿ ವಿ.ಪಿ.ಸಿಂಗ್ ಸರಕಾರವನ್ನು ಪತನಗೊಳಿಸಿದ್ದು ದುರದೃಷ್ಟಕರ ಎಂದು ನಾಲ್ಕು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ಒಂದು ಜಂಟಿ ಹೇಳಿಕೆ ನೀಡಿ ಖಂಡಿಸಿದ್ದಾರೆ.

ಜಾತ್ಯತೀತತೆ ಹಾಗೂ ಸಂವಿಧಾನದ ಹಕ್ಕುಗಳ ಮೇಲೆ ಬಿ.ಜೆ.ಪಿ. ವಿ.ಹೆಚ್.ಪಿ. ಕೂಟದ ಆಘಾತ ಅಂದು ಕೇಂದ್ರ ವಿಷಯವಾಗಿತ್ತು. ಈ ಮೂಲಭೂತ ಪ್ರಶ್ನೆಯ ಮೇಲೆ ವಿ.ಪಿ.ಸಿಂಗ್ ಸರಕಾರವನ್ನು ಉರುಳಿಸಲು ಒಟ್ಟಾದವರು ಜನತೆಯ ಮುಂದೆ ಒಂದು ಗಂಭೀರ ಜವಾಬ್ದಾರಿಯನ್ನು ಹೊರಬೇಕಾಗಿದೆ. ರಾಷ್ಟ್ರೀಯ ಐಕ್ಯತೆಗೆ ಗಂಭೀರ ಬೆದರಿಕೆಯನ್ನು ಎದುರಿಸುತ್ತಿರುವಾಗ ಇದು ಗಂಭೀರ ದುಷ್ಪರಿಣಾಮ ಬೀರಬಲ್ಲದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

Printed and published by P.Ramachandra Rao on behalf of communist Party of India (Marxist), Karnatak a State Committee, 95A, ...
Muneshwara Block, Palace Guttahalli, Bangalore - 560003 Phone : ...